15 July 2026 Wednesday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಒಬ್ಬರ ಭಾವನೆಗಳ ಜೊತೆಗೆ ಆಟ ಆಡಬೇಡಿ, ಅವರ ನೋವು ನಿಮ್ಮ ನೆಮ್ಮದಿಯನ್ನು ಕಸಿಯುತ್ತದೆ!

-ಸ್ನೇಹಾ ಆನಂದ್

info.varthaman@gmail.com



ಮೈಸೂರಿಗೂ ಬಂದ ಮೊಬೈಲ್ ಫೊರೆನ್ಸಿಕ್ ಅಂಬುಲೆನ್ಸ್ — ಪುಟ ಸಂ. 2



ವಿಧಾನಸೌಧದ ಎದುರು ಗೂಟ ಹೊಡೆದು ಪ್ರತಿಭಟನೆ: ಎಚ್ಚರಿಕೆ — ಪುಟ ಸಂ. 3



ರಾಜ್ಯಸರ್ಕಾರ ದಿವಾಳಿಯಾಗಿದೆ: ವಿಪಕ್ಷ ನಾಯಕ ಆರ್.ಅಶೋಕ್ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 226 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಎಚ್‌ಡಿಕೆ, ಬಿಜೆಪಿ ನಾಯಕರ ರಾಜಕೀಯ: ಡಿಕೆಶಿ ವಾಗ್ದಾಳಿ



**ಬೆಂಗಳೂರು:** ಎಚ್.ಡಿ.ಕುಮಾರಸ್ವಾಮಿ ಮತ್ತು ಬಿಜೆಪಿ ನಾಯಕರು ಅಭಿವೃದ್ಧಿ ಗಿಂತ ರಾಜಕೀಯಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ಬಿಡದಿ ಯೋಜನೆ ವಿಚಾರವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆರೋಪಿಸಿದರು.

ಬಿಡದಿ ಟೌನ್‌ಶಿಪ್ ಯೋಜನೆ ವಿವಾದ ಕುರಿತು ಪ್ರತಿಕ್ರಿಯಿಸಿದ ಅವರು, ರೈತರ ಬಗ್ಗೆ ಸರ್ಕಾರಕ್ಕೆ ಗೌರವವಿದೆ. ಅವರ ಭಾವನೆಗಳಿಗೆ ಧಕ್ಕೆ ತರುವ ಉದ್ದೇಶವಿಲ್ಲ ಎಂದು ಹೇಳಿದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದರು. ಅವರಿಗೆ ಇಚ್ಛೆಯಿದ್ದರೆ ಆಗಲೇ ಈ ಯೋಜನೆಯನ್ನು ಕೈಬಿಡಬಹುದಿತ್ತು ಎಂದು ಟೀಕಿಸಿದರು.



ನಾವು ಕಾನೂನಿಗೆ ಗೌರವ ಕೊಡುತ್ತೇವೆ. ಜೆಡಿಎಸ್ ಹಾಗೂ ಬಿಜೆಪಿ ಈ ವಿಚಾರವನ್ನು ರಾಜಕೀಯಗೊಳಿಸುತ್ತಿವೆ. ರೈತರಿಗೆ ಅವಮಾನ ಪುಟ 2ಕ್ಕೆ

## ಪರ–ವಿರೋಧ ಪ್ರತಿಭಟನೆ

**ಬಿಡದಿ:** ಬಿಡದಿ ಟೌನ್‌ಶಿಪ್ ಯೋಜನೆ ಪರ ಮತ್ತು ವಿರುದ್ಧವಾಗಿ ಬೈರಮಂಗಲದಲ್ಲಿ ನಡೆಯುತ್ತಿರುವ ಹೋರಾಟ ದಿನದಿಂದ ದಿನಕ್ಕೆ ತಾರಕಕ್ಕೇರುತ್ತಿದೆ.

ಯೋಜನೆ ವಿರುದ್ಧ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿರುವ ರೈತರು ಜಂಟಿ ಅಳತೆ ಪ್ರಮಾಣೀಕರಣ (ಜೆಎಂಸಿ) ವಿರೋಧಿಸಿ ಮಂಗಳವಾರ ವಿಷದ ಬಾಟಲಿ ಪ್ರದರ್ಶಿಸಿದರು. ಕೂಗಳತೆ ದೂರದಲ್ಲಿ ಯೋಜನೆ ಪರವಾಗಿ ಧರಣಿ ನಡೆಸುತ್ತಿರುವ ರೈತರು ಜೆಎಂಸಿ ಮಾಡುವಂತೆ ಆಗ್ರಹಿಸಿ ರಸ್ತೆ ತಡೆ ಮಾಡಿದರು. ಒಂದು ಕಡೆ ಟೌನ್ ಶಿಪ್ ವಿರುದ್ಧದ ಪುಟ 2ಕ್ಕೆ



## ಶಾಂತಿಗೆ ಎಚ್‌ಡಿಕೆ ಕರೆ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ನಡೆಯುತ್ತಿರುವ ರೈತರ ಪ್ರತಿಭಟನೆ ಹಿಂಸಾತ್ಮಕ ಸ್ವರೂಪ ಪಡೆದಿರುವ ಬೆನ್ನಲ್ಲೇ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಶಾಂತಿ ಕಾಪಾಡುವಂತೆ ರೈತರಿಗೆ ಮನವಿ ಮಾಡಿದ್ದಾರೆ.

> ▶▶ ಯಾವುದೇ ಕಾರಣಕ್ಕೂ ಶಾಂತಿ ಕಳೆದು ಕೊಳ್ಳಬೇಡಿ

ಕಳೆದ 500 ದಿನಗಳಿಂದ ರೈತರು ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದರು. ಆದರೆ ಅಧಿಕಾ ರಿಗಳು ಏಕಾಏಕಿ ಗ್ರಾಮಗಳಿಗೆ ತೆರಳಿ ಭೂ ಸಮೀಕ್ಷೆ ನಡೆ ಸಲು ಮುಂದಾದ ಕಾರಣ ಪರಿಸ್ಥಿತಿ ಉದ್ವಿಗ್ನಗೊಂಡಿದೆ. ರೈತರು ಯಾವುದೇ ಕಾರಣಕ್ಕೂ ಶಾಂತಿ ಕಳೆದು ಕೊಳ್ಳಬಾರದು. ಕಾನೂನಿನ ಚೌಕಟ್ಟಿನೊಳಗೆ ಶಾಂತಿಯುತ ಹೋರಾಟ ಮುಂದುವರಿಸಬೇಕು ನಿಮ್ಮ ಹೋರಾಟಕ್ಕೆ ಅನೇಕರು ಬೆಂಬಲ ನೀಡಲು ಸಿದ್ಧರಿದ್ದಾರೆ ಎಂದು ಹೇಳಿದ್ದಾರೆ. ಅಲ್ಲದೆ, ರಾಜ್ಯ ಸರ್ಕಾರದ ಒತ್ತಡಕ್ಕೆ ಮಣಿದು ರೈತರ ವಿರುದ್ಧ ಕ್ರಮ ಕೈಗೊಳ್ಳಬೇಡಿ ಎಂದು ಅವರು ಮನವಿ ಮಾಡಿದ್ದಾರೆ.

## ಬಿಜೆಪಿ ಹಿರಿಯ ನಾಯಕ ರಾಮಚಂದ್ರೇಗೌಡ ನಿಧನ

**ಬೆಂಗಳೂರು:** ಬಿಜೆಪಿಯ ಹಿರಿಯ ನಾಯಕ ಹಾಗೂ ಮಾಜಿ ಸಚಿವ ರಾಮಚಂದ್ರೇಗೌಡ (88) ಅನಾರೋಗ್ಯದಿಂದ ಮಂಗಳವಾರ ನಿಧನರಾದರು. ವಯೋ ಸಹಜ



ಕಾಯಿಲೆಯಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ರಾಜಾಜಿನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ರಾಜ್ಯದ ಅಭಿವೃದ್ಧಿಗೆ ಅವರು ನೀಡಿದ ಕೊಡುಗೆ ಅಪಾರ. ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ರಾಮಚಂದ್ರಗೌಡರು ಸಲ್ಲಿಸಿದ ಸೇವೆಯೂ ಸದಾ ನೆನಪಿನಲ್ಲಿ ಉಳಿಯುವಂತದ್ದು ಎಂದು ಸಿಎಂ ಸಂತಾಪ ಸಲ್ಲಿಸಿದ್ದಾರೆ.

## ಸಚಿವ ಸ್ಥಾನಕ್ಕಾಗಿ ಲಾಬಿ ಶುರು

### ವಿದೇಶದಿಂದ ರಾಹುಲ್ ಗಾಂಧಿ ವಾಪಸ್: ಸಂಪುಟ ವಿಸ್ತರಣೆ ಪ್ರಕ್ರಿಯೆಗೆ ಚಾಲನೆ

**ಬೆಂಗಳೂರು:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿದೇಶ ಪ್ರವಾಸ ಮುಗಿಸಿ ಭಾರತಕ್ಕೆ ಮರಳಿರುವ ಬೆನ್ನಲ್ಲೇ ರಾಜ್ಯದಲ್ಲಿ ಸಚಿವ ಸಂಪುಟ ವಿಸ್ತರಣೆ ಪ್ರಕ್ರಿಯೆಗೆ ಚಾಲನೆ ಸಿಕ್ಕಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಸೇರಿದಂತೆ ರಾಜ್ಯದ ಪ್ರಮುಖ ಕಾಂಗ್ರೆಸ್ ನಾಯಕರನ್ನು ಶೀಘ್ರದಲ್ಲೇ ದೆಹಲಿಗೆ ಕರೆಯುವ ಸಾಧ್ಯತೆ ಇದೆ. ಮುಂದಿನ ಎರಡು ದಿನಗಳಲ್ಲಿ ಸಚಿವ ಸಂಪುಟ ವಿಸ್ತರಣೆ ಪುಟ 2ಕ್ಕೆ

# ‘ಬಿಡದಿಗೆ’ ದೇವೇಗೌಡರ ಎಂಟ್ರಿ

## ಯೋಜನೆ ಕೈಬಿಡದಿದ್ದರೆ ವಿಧಾನಸೌಧ ಮುಂದೆ ಧರಣಿ ಎಚ್ಚರಿಕೆ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ಯೋಜನೆ ಕೈಬಿಡದಿದ್ದರೆ ವಿಧಾನಸೌಧ ಮುಂದೆ ಧರಣಿ ನಡೆಸುವುದಾಗಿ ಮಾಜಿ ಪ್ರಧಾನಿ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಎಚ್ಚರಿಕೆ ನೀಡಿದ್ದಾರೆ.

ಮುಖ್ಯಮಮತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಈ ಬಗ್ಗೆ ಮಂಗಳವಾರ ಪತ್ರ ಬರೆದಿರುವ ಅವರು, ಯೋಜನೆಯಿಂದ ಬಿಡದಿ ಸುತ್ತಮುತ್ತ ರೈತರಿಗೆ ಆಗುವ ತೊಂದರೆಗಳೇನು ಎಂಬುದನ್ನು ವಿವರಿಸಿ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಬೇಕು ಎಂದು ಆಗ್ರಹಿಸಿದ್ದಾರೆ.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ರೈತರ ವಿರುದ್ಧ ದಾಖಲಿಸಿರುವ ಎಫ್‌ಐಆರ್‌ಗಳನ್ನು ತಕ್ಷಣ ಹಿಂಪಡೆಯಬೇಕು ಎಂದು ಆಗ್ರಹಿಸಿರುವ ಅವರು, ಸರ್ಕಾರ ರೈತರ ಆತಂಕವನ್ನು ಅರ್ಥ ಮಾಡಿಕೊಂಡು ಟೌನ್‌ಶಿಪ್ ಯೋಜನೆಯಿಂದ ಹೊರಬರಬೇಕು ಎಂದು ಒತ್ತಾಯಿಸಿದ್ದಾರೆ.

ಬಿಡದಿ ಟೌನ್‌ಶಿಪ್ ಯೋಜನೆ ಬಗ್ಗೆ ಇದುವರೆಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಜೆಡಿಎಸ್ ಮತ್ತು ಬಿಜೆಪಿ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಹೇಳಿಕೆ ನೀಡುತ್ತಿದ್ದರು. ಈಗ 93 ವರ್ಷದ ದೇವೇಗೌಡರೇ ಎಂಟ್ರಿ



ಯಾಗುತ್ತಿರುವುದು ರೈತರ ಪ್ರತಿಭಟನೆಗೆ ಮತ್ತಷ್ಟು ಬಲ ಬಂದಿದೆ. ಬಿಡದಿ ಟೌನ್‌ಶಿಪ್ ಯೋಜನೆ ಕುರಿರು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಮತ್ತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ರಾಜಕೀಯ ಸಂಘರ್ಷ ಬೆಂಗಳೂರು– ರಾಮನಗರ ಮಾರ್ಗದಲ್ಲಿನ ಭೂಮಿ, ಮೂಲಸೌಕರ್ಯ ಹಾಗೂ ರಿಯಲ್ ಎಸ್ಟೇಟ್ ರಾಜಕೀಯದ ಹಳೆಯ ಬಿರುಕುಗಳನ್ನು ಮತ್ತೆ ಬಯಲಿಗೆಳೆದಿದೆ.

ಸುಮಾರು 7,500 ಎಕರೆ ವ್ಯಾಪ್ತಿಯಲ್ಲಿ 18,000 ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರಸ್ತಾವಿಸಲಾದ ಈ ಯೋಜನೆಯು ಈಗ ರಾಜಕೀಯ ಸಂಘರ್ಷದ ಕೇಂದ್ರಬಿಂದುವಾಗಿದೆ. ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಈ ಯೋಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದೆ. ಸಚಿವ ಸಂಪುಟ ಯೋಜನೆಗೆ ಅನುಮೋದನೆ ನೀಡಿದ ಬಳಿಕ ದೇವೇಗೌಡರು, ರೈತರ ಭೂಮಿ ಯನ್ನು ಲಾಭದ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಈ ಯೋಜನೆಯ ಹಿಂದೆ ಪುಟ 2ಕ್ಕೆ

## ಡಿಕೆಶಿ ವಿರುದ್ಧ ಎಚ್‌ಡಿಡಿ ವಾಗ್ದಾಳಿ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ರೈತರ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳುವ ಯತ್ನವನ್ನು ತಕ್ಷಣ ಕೈಬಿಡಬೇಕೆಂದು ಆಗ್ರಹಿಸಿದ್ದಾರೆ.

ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ ನೀವೇ ಮುಖ್ಯಮಂತ್ರಿಯಾಗಲು ಹೈಕಮಾಂಡ್‌ಗೆ ಏನೇನು ಭರವಸೆ ಕೊಟ್ಟಿದ್ದೀರೋ ಗೊತ್ತಿಲ್ಲ. ಆದರೆ, ಆ ಭರವಸೆಗಳನ್ನು ಈಡೇರಿಸಲು ಬಿಡದಿ ರೈತರ ಬದುಕನ್ನೇ ಬಲಿಕೊಡಬೇಡಿ. ರೈತರ ಜಮೀನನ್ನು ಟೌನ್‌ಶಿಪ್ ಹೆಸರಿನಲ್ಲಿ ಕಸಿದುಕೊಂಡು ನಿಮ್ಮ ಮಾತು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಡಿ ಎಂದು ಕಿಡಿಕಾರಿದ್ದಾರೆ.

ನಿಮ್ಮ ಹೈಕಮಾಂಡ್‌ಗೆ ಪುಟ 2ಕ್ಕೆ

## ಇಂದು ಕಾವೇರಿ ಪ್ರಾಧಿಕಾರದ ಸಭೆ

### ನೀರು ಬಿಡುಗಡೆಗೆ ತಮಿಳುನಾಡು ಆಗ್ರಹ

**ನವದೆಹಲಿ:** ಕೆಆರ್‌ಎಸ್ ನಿಂದ ತಮಿಳುನಾಡಿಗೆ ನೀರು ಬಿಡುಗಡೆ ಮಾಡುವ ಬಗ್ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (ಸಿಡಬ್ಲ್ಯು ಎಂಎ) ಸಭೆ ಬುಧವಾರ ದೆಹಲಿಯಲ್ಲಿ ನಡೆಯಲಿದೆ. ಕರ್ನಾಟಕ ಮತ್ತು ತಮಿಳುನಾಡು ತಮ್ಮ ವಾದಗಳನ್ನು ಮಂಡಿಸಲಿವೆ.

ಈ ಬಾರಿ ರಾಜ್ಯದಲ್ಲಿ ಮುಂಗಾರು ಮಳೆ ತೀವ್ರ ಕೊರತೆಯಾಗಿರುವ ಹಿನ್ನೆಲೆಯಲ್ಲಿ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ ಎಂದು ಕರ್ನಾಟಕ ಸ್ಪಷ್ಟ ನಿಲುವು ತೆಗೆದುಕೊಳ್ಳಲಿದೆ. ಸಂಕಷ್ಟ ಸೂತ್ರ ಅನುಸರಿಸುವಂತೆ ಸಮಿತಿಗೆ ಮನವಿ ಮಾಡಲಿದೆ.

ಕಾವೇರಿ ನೀರು ಹಂಚಿಕೆ ವೇಳಾಪಟ್ಟಿಯಂತೆ ತನ್ನ ಪಾಲಿನ ನೀರನ್ನು ಬಿಡುಗಡೆ ಮಾಡಬೇಕೆಂದು ತಮಿಳುನಾಡು ಪಟ್ಟು ಹಿಡಿದಿದೆ. ಜೂನ್ ತಿಂಗಳಿಗೆ 9.19 ಟಿಎಂಸಿ ಹಾಗೂ ಜುಲೈ ತಿಂಗಳಿಗೆ 31.24 ಟಿಎಂಸಿ ಸೇರಿ ಒಟ್ಟು 40.43 ಟಿಎಂಸಿ ನೀರನ್ನು ಕರ್ನಾಟಕ ಹರಿಸಬೇಕೆಂಬುದು ತಮಿಳುನಾಡಿನ ವಾದವಾಗಿದೆ.

ಆದರೆ, ಕಳೆದ ಎರಡು ತಿಂಗಳಲ್ಲಿ ಕರ್ನಾಟಕದಿಂದ ತಮಿಳುನಾಡಿಗೆ ಕೇವಲ ಸುಮಾರು 4 ಟಿಎಂಸಿ ನೀರು ಮಾತ್ರ ಹರಿದಿದೆ. ಉಳಿದ ನೀರನ್ನು ತಕ್ಷಣ ಬಿಡುಗಡೆ ಮಾಡುವಂತೆ ತಮಿಳುನಾಡು ಸಮಿತಿಯ ಮುಂದೆ



ಒತ್ತಾಯಿಸಲಿದೆ.

ರಾಜ್ಯದ ಕಾವೇರಿ ಜಲಾಶಯಗಳಲ್ಲಿ ನೀರಿನ ಸಂಗ್ರಹ ತೀವ್ರವಾಗಿ ಕುಸಿದಿದ್ದು, ಸದ್ಯ ಕುಡಿಯುವ ನೀರಿನ ಅಗತ್ಯಕ್ಕೆ ಮಾತ್ರ ನೀರು ಲಭ್ಯವಿದೆ ಎಂಬುದು ಕರ್ನಾಟಕ ವಾದಿಸಲಿದೆ. ಕೃಷಿ ಉದ್ದೇಶಕ್ಕೂ ನೀರನ್ನು ಬಳಸುತ್ತಿಲ್ಲ. ಬೆಂಗಳೂರು ಸೇರಿದಂತೆ ದೊಡ್ಡ ನಗರಗಳಿಗೆ ಕುಡಿಯುವ ನೀರು ಪೂರೈಸುವುದೇ ಈಗ ಮೊದಲ ಆದ್ಯತೆ ಎಂದು ರಾಜ್ಯ ತನ್ನ ನಿಲುವು ಮಂಡಿಸಲಿದೆ.

ಇನ್ನೂ ಮುಂದಿನ ದಿನಗಳಲ್ಲಿ ಸಮರ್ಪಕ ಮುಂಗಾರು ಮಳೆಯಾಗುವ ವಿಶ್ವಾಸವೂ ಇಲ್ಲ. ತಮಿಳುನಾಡಿಗೆ ಹಿಂಗಾರು ಮಳೆಯಿಂದ ನೀರಿನ ಲಭ್ಯತೆ ಸಾಧ್ಯವಾಗಲಿದೆ. ಕರ್ನಾಟಕದಲ್ಲಿ ಮುಂಗಾರು ಕೈಕೊಟ್ಟಿರುವುದರಿಂದ ಈಗಿನ ಪರಿಸ್ಥಿತಿಯಲ್ಲಿ ನೀರು ಬಿಡಲು ಸಾಧ್ಯವಿಲ್ಲ ಎಂಬುದು ಕರ್ನಾಟಕದ ನಿಲುವು.

### ಜಲಾಶಯಗಳ ನೀರಿನ ಮಟ್ಟ

| | |
|---|---|
| **ಕೆ ಆರ್ ಎಸ್** | |
| ಗರಿಷ್ಠ ಮಟ್ಟ | 124.80 ಅಡಿ |
| ಇಂದಿನ ಮಟ್ಟ | 92.66 ಅಡಿ |
| ಒಳಹರಿವು | 2797 ಕ್ಯುಸೆಕ್ |
| ಹೊರ ಹರಿವು | 625 ಕ್ಯುಸೆಕ್ |
| **ಕಬಿನಿ ಜಲಾಶಯ** | |
| ಗರಿಷ್ಠ ಮಟ್ಟ | 2284 ಅಡಿ |
| ಇಂದಿನ ಮಟ್ಟ | 2270.42 ಅಡಿ |
| ಒಳಹರಿವು | 2550 ಕ್ಯುಸೆಕ್ |
| ಹೊರ ಹರಿವು | 400 ಕ್ಯುಸೆಕ್ |
| **ಹಾರಂಗಿ ಜಲಾಶಯ** | |
| ಗರಿಷ್ಠ ಮಟ್ಟ | 2859 ಅಡಿ |
| ಇಂದಿನ ಮಟ್ಟ | 2843.66 ಅಡಿ |
| ಒಳಹರಿವು | 2751 ಕ್ಯುಸೆಕ್ |
| ಹೊರ ಹರಿವು | 180 ಕ್ಯುಸೆಕ್ |
| **ಹೇಮಾವತಿ ಜಲಾಶಯ** | |
| ಗರಿಷ್ಠ ಮಟ್ಟ | 2922 ಅಡಿ |
| ಇಂದಿನ ಮಟ್ಟ. | 2903.57 ಅಡಿ |
| ಒಳಹರಿವು | 754 ಕ್ಯುಸೆಕ್ |
| ಹೊರಹರಿವು | 300 ಕ್ಯುಸೆಕ್ |

## ಅಧಿಕಾರಿಗಳ ಮೇಲೆ ಹಲ್ಲೆ: ರೈತರ ವಿರುದ್ಧ ಕಾನೂನುಕ್ರಮ

**ಬೆಂಗಳೂರು:** ರೈತರು ಪ್ರತಿಭಟನೆ ಹೆಸರಿನಲ್ಲಿ ಸರ್ಕಾರಿ ಅಧಿಕಾರಿಗಳ ಮೇಲೆ ಪೊರಕೆಯಿಂದ ಹಲ್ಲೆ ನಡೆಸುವುದು, ಕಲ್ಲು ತೂರಾಟ ನಡೆಸುವುದು ಹಾಗೂ ಕಾನೂನು ಕೈಗೆತ್ತಿಕೊಳ್ಳುವುದನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ ಎಂದು ಸಚಿವ ಡಾ.ಜಿ.ಪರಮೇಶ್ವರ್ ಎಚ್ಚರಿಕೆ ನೀಡಿದರು.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ನಡೆಯುತ್ತಿರುವ ರೈತರ ಪ್ರತಿಭಟನೆ ಕುರಿತು ಪ್ರತಿಕ್ರಿಯೆ ನೀಡಿದರು. ಶಾಂತಿಯುತ ಪ್ರತಿಭಟನೆ ನಡೆಸುವುದು ಪ್ರತಿಯೊಬ್ಬರ ಹಕ್ಕು ಮತ್ತು ಅದಕ್ಕೆ ಸರ್ಕಾರದ ವಿರೋಧವಿಲ್ಲ. ಆದರೆ ಕಾನೂನು ಕೈಗೆತ್ತಿಕೊಳ್ಳುವುದನ್ನು ಯಾವುದೇ ಕಾರಣಕ್ಕೂ ಪುಟ 2ಕ್ಕೆ



## ಕಲಬುರ್ಗಿ ಕಾರಾಗೃಹದಿಂದ ಮೂವರು ಕೈದಿಗಳು ಪರಾರಿ



**ಕಲಬುರಗಿ:** ಗೃಹ ಸಚಿವ ಪ್ರಿಯಾಂಕ್ ಖರ್ಗೆ ತವರು ಜಿಲ್ಲೆ ಕಲಬುರ್ಗಿ ಕೇಂದ್ರ ಕಾರಾಗೃಹದಿಂದ ಮೂವರು ಸಜಾ ಕೈದಿಗಳು ಪರಾರಿಯಾಗಿದ್ದಾರೆ.

ಬೀದರ್‌ನಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ಈ ಮೂವರು ಶಿಕ್ಷೆಗೆ ಒಳಪಟ್ಟಿದ್ದರು. ಮಂಗಳವಾರ ಬೆಳಗ್ಗಿನ ಜಾವ 4 ಗಂಟೆಗೆ ಜೈಲಿನ ಕಂಪೌಡ್ ಹಾರಿ ಈ ಮೂವರು ಪರಾರಿಯಾಗಿದ್ದಾರೆ. ತಪ್ಪಿಸಿಕೊಂಡ ಅಪರಾಧಿಗಳನ್ನು ಬಸವಕಲ್ಯಾಣ ತಾಲ್ಲೂಕಿನ ಇಸ್ಲಾಂಪುರ ಮೂಲದ ಮಸ್ತಾನ್, ಔರಾದ್ ತಾಲ್ಲೂಕಿನ ಸಂತಾಪುರ ಗ್ರಾಮದ ಸಂತೋಷ್ ಮತ್ತು ಬೀದರ್ ತಾಲ್ಲೂಕಿನ ಬಕ್ಕಚೌಡಿ ಗ್ರಾಮದ ಸಾಗರ್ ಎಂದು ಗುರುತಿಸಲಾಗಿದೆ.

ವಿಪರ್ಯಾಸವೆಂದರೆ, ಸೋಮವಾರ ಬೆಳಿಗ್ಗೆ, ಕಲಬುರಗಿ ಪೊಲೀಸ್ ಆಯುಕ್ತ ಶರಣಪ್ಪ ಎಸ್ ಡಿ ಮತ್ತು ಇತರ ಹಿರಿಯ ಪೊಲೀಸ್ ಅಧಿಕಾರಿಗಳು ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ಅದರ ಭದ್ರತಾ ವ್ಯವಸ್ಥೆಗಳನ್ನು ಪರಿಶೀಲಿಸಿದ್ದರು. ಕೈದಿಗಳು ಪರಾರಿಯಾಗಲು ಜೈಲು ಸಿಬ್ಬಂದಿಯೇ ಸಹಕಾರ ನೀಡಿದ್ದಾರೆ ಎಂಬ ಶಂಕೆ ವ್ಯಕ್ತವಾಗಿದೆ. ಪುಟ 2ಕ್ಕೆ

## ತಿರುಪತಿ ಮೊದಲ ಆರತಿ ಕರ್ನಾಟಕದ ಪರಂಪರೆ: ಡಿಕೆಶಿ

**ಬೆಂಗಳೂರು:** ತಿರುಮಲ ತಿರುಪತಿ ದೇವಸ್ಥಾನದಲ್ಲಿ ಕರ್ನಾಟಕದ ಜನಪ್ರತಿನಿಧಿಗಳಿಗೆ ಮೊದಲ 'ಆರತಿ'ಯಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸುವ ಪ್ರಸ್ತಾವಕ್ಕೆ ಟಿಟಿಡಿ ಆಕ್ಷೇಪ ವ್ಯಕ್ತಪಡಿಸಿದ ಬೆನ್ನಲ್ಲೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟನೆ ನೀಡಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ರಾಜಕೀಯ ವಿಚಾರವಲ್ಲ. ಕರ್ನಾಟಕದ ಗೌರವಕ್ಕೆ ಸಂಬಂಧಿಸಿದ ಪರಂಪರೆ ವಿಷಯ. ದೇವಸ್ಥಾನದ ನಿಯಮ ಹಾಗೂ ಪ್ರೋಟೋಕಾಲ್‌ಗೆ ಅನುಗುಣವಾಗಿಯೇ ಎಲ್ಲ ನಿರ್ಧಾರಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

ತಿರುಪತಿ ದೇವಸ್ಥಾನದ ಅಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ. ಮೊದಲ ಆರತಿ ಕರ್ನಾಟಕಕ್ಕೆ ಸಂಬಂಧಿಸಿದ ಪರಂಪರೆ. ಇದುವರೆಗೆ ನಮ್ಮ ರಾಜ್ಯದ ಅಧಿಕಾರಿಯೊಬ್ಬರು ಅದರಲ್ಲಿ ಭಾಗವಹಿಸುತ್ತಿದ್ದರು. ದೇವರ ಮುಂದೆ ಪ್ರಾರ್ಥನೆ ಸಲ್ಲಿಸುವ ಅವಕಾಶವನ್ನು ನಮ್ಮ ರಾಜ್ಯದ ಗಣ್ಯರಿಗೂ ನೀಡುವ ಉದ್ದೇಶವಿದೆ ಎಂದು ತಿಳಿಸಿದರು. ಈ ವಿಚಾರದಲ್ಲಿ ಯಾರೇ ಟೀಕೆ ಮಾಡಿದರೂ ಅದನ್ನು ಸ್ವಾಗತಿಸುತ್ತೇನೆ. ಯಾವುದೇ ನಿರ್ಧಾರವನ್ನು ಏಕಪಕ್ಷೀಯವಾಗಿ ತೆಗೆದುಕೊಳ್ಳುವುದಿಲ್ಲ. ಯಾವುದೇ ರಾಜಕೀಯ ಪಕ್ಷದ ಭೇದವಿಲ್ಲದೆ ಸಂಸದರು, ಶಾಸಕರು, ಮೇಯರ್‌ಗಳು, ಜನಪ್ರತಿನಿಧಿಗಳು ಸೇರಿದಂತೆ ರಾಜ್ಯದ ಪ್ರತಿನಿಧಿಗಳು ಈ ಅವಕಾಶ ಪಡೆಯಬಹುದು ಎಂದು ತಿಳಿಸಿದರು.

# ಅಷಾಢ ಆಚರಣೆಗೆ ಸಕಲ ಸಿದ್ಧತೆ

## ಅಧಿಕಾರಿಗಳ ಸಭೆ ನಡೆಸಿ ಡಿಸಿ ಸೂಚನೆ

**ಮೈಸೂರು:** ಚಾಮುಂಡಿ ಬೆಟ್ಟದಲ್ಲಿ ಅಷಾಢ ಮಾಸಾಚರಣೆ ಮತ್ತು ಚಾಮುಂಡೇಶ್ವರಿ ವರ್ಧಂತಿ ದಿನದಂದು ಚಾಮುಂಡೇಶ್ವರಿ ದರ್ಶನಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.

ಚಾಮುಂಡಿ ಬೆಟ್ಟದಲ್ಲಿ ಅಷಾಢ ಮಾಸದ ಶುಕ್ರವಾರಗಳು ಮತ್ತು ಅಮ್ಮನವರ ಜನ್ಮೋತ್ಸವದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜುಲೈ17, 24, 31, ಆಗಸ್ಟ್ 7 ರಂದು 4 ಅಷಾಢ ಶುಕ್ರವಾರ ಹಾಗೂ ಅಗಸ್ಟ್ 4 ರಂದು ಅಮ್ಮನವರ ವರ್ಧಂತಿ ಜರುಗಲಿದೆ ಎಂದರು.

ಅಷಾಢದ 4 ಶುಕ್ರವಾರ, ಶನಿವಾರ, ಭಾನುವಾರದಂದು ಲಲಿತ ಮಹಲ್ ಹೆಲಿಪ್ಯಾಡ್ ಹಾಗೂ ನಗರ ಬಸ್ ನಿಲ್ದಾಣದಿಂದ ಬೆಳಿಗ್ಗೆ 6.30ಕ್ಕೆ ಬಸ್ ಸಂಚಾರ

**ಗಣ್ಯರಿಗೆ 10 ಗಂಟೆವರೆಗೆ ಅವಕಾಶ**

> ಶಿಷ್ಟಾಚಾರದಡಿ ಬರುವ ಗಣ್ಯರಿಗೆ, ವಿ.ಐ.ಪಿಗಳಿಗೆ ಬೆಳಿಗ್ಗೆ 5.30 ರಿಂದ 10 ಗಂಟೆಯವರೆಗೆ ಮಾತ್ರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. 10ಗಂಟೆಯ ನಂತರ ಎಲ್ಲಾ ಗಣ್ಯರ ವಾಹನಗಳ ಪ್ರವೇಶವನ್ನು ಚಾಮುಂಡಿ ಬೆಟ್ಟಕ್ಕೆ ನಿರ್ಬಂಧಿಸಲಾಗಿದೆ.
>
> ▶▶ ಜಿ.ಲಕ್ಷ್ಮಿಕಾಂತ ರೆಡ್ಡಿ ಜಿಲ್ಲಾಧಿಕಾರಿ



# ಎಐ ವಿಶ್ವವಿದ್ಯಾಲಯ ಸ್ಥಾಪನೆ

## ದೇಶದಲ್ಲಿಯೇ ಮೊದಲ ಸರ್ಕಾರಿ ವಿವಿ: ಸಿಎಂ ಡಿಕೆಶಿ ಘೋಷಣೆ

**ಬೆಂಗಳೂರು:** ದೇಶದಲ್ಲಿಯೇ ಮೊಟ್ಟಮೊದಲ ಸರ್ಕಾರದ ನೇತೃತ್ವದ ಕೃತಕ ಬುದ್ಧಿಮತ್ತೆ ವಿಶ್ವವಿದ್ಯಾಲಯ ಹಾಗೂ ಎಐ ಹಬ್ ಅನ್ನು ರಾಜ್ಯದಲ್ಲಿ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಿಸಿದರು.

ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ನಡೆದ ಮಂಗಳವಾರ ಗೂಗಲ್ ಐ/ಒ ಕನೆಕ್ಟ್ ಇಂಡಿಯಾ 2026 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಎಐ ಕ್ಷೇತ್ರದಲ್ಲಿ ಸಂಶೋಧನೆ, ನಾವೀನ್ಯತೆ ಮತ್ತು ಪ್ರತಿಭಾ ಅಭಿವೃದ್ಧಿಯನ್ನು ಬಲಪಡಿಸುವ ಉದ್ದೇಶದಿಂದ ಈ ಯೋಜನೆ ಜಾರಿಗೆ ತರಲಾಗುತ್ತಿದೆ ಎಂದು ತಿಳಿಸಿದರು.

ಪ್ರಸ್ತಾವಿತ ಎಐ ವಿಶ್ವವಿದ್ಯಾಲಯ ಜಾಗತಿಕ ಮಟ್ಟದ ಎಐ ಪುಟ 2ಕ್ಕೆ



## ಸಾಫ್ಟ್‌ವೇರ್ ರಫ್ತಿನಲ್ಲಿ ರಾಜ್ಯದ ಪಾಲು ಶೇ.40

**ಬೆಂಗಳೂರು:** ದೇಶದ ಸಾಫ್ಟ್‌ವೇರ್ ರಫ್ತಿನಲ್ಲಿ ಕರ್ನಾಟಕ ಸುಮಾರು 40 ಶೇಕಡಾ ಕೊಡುಗೆ ನೀಡುತ್ತಿದೆ. ಬೆಂಗಳೂರಿನಲ್ಲಿ 17 ಸಾವಿರಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಹಾಗೂ ಸಾವಿರಾರು ಗ್ಲೋಬಲ್ ಕ್ಯಾಪೆಬಿಲಿಟಿ ಪುಟ 2ಕ್ಕೆ



# ಮೈಸೂರಿಗೂ ಬಂದ ಮೊಬೈಲ್ ಫೊರೆನ್ಸಿಕ್ ಅಂಬುಲೆನ್ಸ್

ಮೈಸೂರು: ಒಂದೇ ಸೂರಿನಡಿಯಲ್ಲಿ ಅಪರಾಧ ಕೃತ್ಯದ ನಂತರ ಪೊಲೀಸ್ ತನಿಖೆಗೆ ನೆರವಾಗುವ ನಿಟ್ಟಿನಲ್ಲಿ ರಾಜ್ಯಾದ್ಯಂತ 32 ಫೊರೆನ್ಸಿಕ್ ವಾಹನಗಳ ಕೊಡುಗೆ ನೀಡಿದ್ದು, ಮೈಸೂರಿಗೂ ಎರಡು ವಾಹನಗಳು ಕೊಡುಗೆಯಾಗಿ ಬಂದಿವೆ.

ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಸಾಂಕೇತಿಕವಾಗಿ ಈ ವಿಶೇಷ ಅಂಬುಲೆನ್ಸ್‌ಗಳಿಗೆ ಚಾಲನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಅಪರಾಧ ಸ್ಥಳದಲ್ಲಿ ತನಿಖೆಯನ್ನು ಮತ್ತಷ್ಟು ತ್ವರಿತಗೊಳಿಸಲು ವೈಜ್ಞಾನಿಕ ಹಾಗೂ ಪರಿಣಾಮಕಾರಿಯಾಗಿ ನಡೆಸುವ ಉದ್ದೇಶದಿಂದ ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸರಿಗೆ ತಲಾ ಒಂದು ಅತ್ಯಾಧುನಿಕ ಮೊಬೈಲ್ ಫೊರೆನ್ಸಿಕ್ ಸೈನ್ಸ್ ಲ್ಯಾಬೊರೇಟರಿ ವಾಹನವನ್ನು ಒದಗಿಸಲಾಗಿದೆ.

ಕೇಂದ್ರ ಸರ್ಕಾರದ ಆರ್ಥಿಕ ನೆರವಿನೊಂದಿಗೆ 20.40 ಕೋಟಿ ರೂ. ವೆಚ್ಚದಲ್ಲಿ ಈ ವಾಹನಗಳನ್ನು ಖರೀದಿಸಲಾಗಿದ್ದು, ಅಪರಾಧ ಸ್ಥಳದಲ್ಲಿ ಗುಣಮಟ್ಟದ ಸಾಕ್ಷ್ಯಗಳನ್ನು ತ್ವರಿತವಾಗಿ ಸಂಗ್ರಹಿಸಿ, ಸಂರಕ್ಷಿಸುವಲ್ಲಿ ಇವು ಮಹತ್ವದ ಪಾತ್ರ ವಹಿಸಲಿವೆ. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 201 ತರಬೇತಿ ಪಡೆದ 'ಸೀನ್ ಆಫ್ ಕ್ರೈಂ ಆಫೀಸರ್ಸ್' ಅವರ ಕಾರ್ಯಕ್ಷಮತೆ ಈ ವಾಹನಗಗಳಿಂದ ಮತ್ತಷ್ಟು ಹೆಚ್ಚಳವಾಗಲಿದೆ. ಈ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಮೊಬೈಲ್ ಫೊರೆನ್ಸಿಕ್ ಪ್ರಯೋಗಾಲಯಗಳು ಅಪರಾಧ ಸ್ಥಳದ ವೈಜ್ಞಾನಿಕ ಪರಿಶೀಲನೆ, ಸೂಕ್ತ ದಾಖಲೀಕರಣ, ಸಾಕ್ಷ್ಯಗಳ ಸಂರಕ್ಷಣೆ ಹಾಗೂ ಸುರಕ್ಷಿತ ಸಾಗಣೆಯನ್ನು ಸುಲಭಗೊಳಿಸಲಿವೆ ಎಂದು ತಿಳಿಸಿದರು.

'ಜಿಲ್ಲಾ ಮೊಬೈಲ್ ಫೊರೆನ್ಸಿಕ್ ವಾಹನವು ಜಿಲ್ಲಾ ಸಶಸ್ತ್ರ ಮೀಸಲು ಪಡೆ ಹಾಗೂ ಸೀನ್ ಆಫ್ ಕ್ರೈಂ ಅಧಿಕಾರಿಗಳ ಅಧೀನದಲ್ಲಿ ಕಾರ್ಯನಿರ್ವಹಿಸಲಿದೆ. ಸಾಕ್ಷ್ಯಾಧಾರಿತ ತನಿಖೆಗೆ ಇದು ಹೆಚ್ಚಿನ ಬಲ ನೀಡಲಿದ್ದು, ಅಪರಾಧ ಪ್ರಕರಣಗಳ ಶಿಕ್ಷೆ ಪ್ರಮಾಣವನ್ನು ಹೆಚ್ಚಿಸಲು ಸಹಕಾರಿಯಾಗಲಿದೆ ಎಂದು ಅವರು ಹೇಳಿದರು.

ಹಿಂದೆ ಕೊಲೆ, ದರೋಡೆ, ಪೋಕ್ಸೋ ಸೇರಿದಂತೆ ವಿವಿಧ ಪ್ರಕರಣಗಳಿಗೆ ಪ್ರತ್ಯೇಕ ಫೊರೆನ್ಸಿಕ್ ಕಿಟ್‌ಗಳನ್ನು ಕೊಂಡೊಯ್ಯಬೇಕಾಗುತ್ತಿತ್ತು. ಆದರೆ ಈ ಮೊಬೈಲ್ ಪ್ರಯೋಗಾಲಯದಲ್ಲಿ ವಿವಿಧ ರೀತಿಯ ಸಾಕ್ಷ್ಯ ಸಂಗ್ರಹ ಮತ್ತು ಪ್ರಾಥಮಿಕ ಪರೀಕ್ಷೆಗೆ ಪ್ರತ್ಯೇಕ ವಿಭಾಗಗಳನ್ನು ಕಲ್ಪಿಸಿರುವುದರಿಂದ ಒಂದೇ ವಾಹನದ ಮೂಲಕ ಸಂಪೂರ್ಣ ಅಪರಾಧ ಸ್ಥಳದ ಪರಿಶೀಲನೆ ನಡೆಸಲು ಸಾಧ್ಯವಾಗಲಿದೆ ಎಂದು ವಿವರಿಸಿದರು.




## ಏನೆಲ್ಲಾ ಸೌಲಭ್ಯ

ಜೈವಿಕ ಸಾಕ್ಷ್ಯಗಳ ಸಂರಕ್ಷಣೆಗೆ ವಿಶೇಷ ವ್ಯವಸ್ಥೆ ಮೊಬೈಲ್ ಫೊರೆನ್ಸಿಕ್ ವಾಹನಗಳಲ್ಲಿ ರಕ್ತ, ಡಿಎನ್‌ಎ ಸೇರಿದಂತೆ ಜೈವಿಕ ಮಾದರಿಗಳನ್ನು ಸುರಕ್ಷಿತವಾಗಿ ಸಂರಕ್ಷಿಸಲು ಶೀತಲೀಕರಣ ವ್ಯವಸ್ಥೆ ಅಳವಡಿಸಲಾಗಿದೆ. ಇದರಿಂದ ಪ್ರಯೋಗಾಲಯಕ್ಕೆ ತಲುಪುವವರೆಗೆ ಮಾದರಿಗಳ ಗುಣಮಟ್ಟ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದಲ್ಲದೆ ಲ್ಯಾಪ್ ಟಾಪ್, ಡಿಜಿಟಲ್ ಫೊರೆನ್ಸಿಕ್ ಉಪಕರಣಗಳು, ಸ್ಥಳದಲ್ಲೇ ಪ್ರಾಥ ಮಿಕ ವಿಶ್ಲೇಷಣೆ ನಡೆಸಲು ಟಿವಿ ಮಾನಿಟರ್‌ಗಳು, ಅಪರಾಧ ಸ್ಥಳದ ಸುತ್ತಮುತ್ತಲಿನ ಪ್ರದೇಶವನ್ನು ದಾಖಲಿಸಲು ರೂಫ್‌ಟಾಪ್‌ನಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.

ಬೆರಳಚ್ಚು ಪರೀಕ್ಷೆ, ಬ್ಯಾಲಿಸ್ಟಿಕ್ಸ್, ಸ್ಫೋಟಕ ಹಾಗೂ ಮಾದಕ ವಸ್ತುಗಳ ಪತ್ತೆಗೆ ಅಗತ್ಯವಾದ ವಿಶೇಷ ಉಪಕರಣಗಳ ಜೊತೆಗೆ ತನಿಖೆಯ ಸಂದರ್ಭ ಅಗತ್ಯವಿದ್ದಲ್ಲಿ ಪೊಲೀಸ್ ಶ್ವಾನವನ್ನು ಸಾಗಿಸಲು ಪ್ರತ್ಯೇಕ ವ್ಯವಸ್ಥೆಯನ್ನೂ ಈ ವಾಹನಗಳಲ್ಲಿ ಕಲ್ಪಿಸಲಾಗಿದೆ.

# ಯುವಕರು ರಾಷ್ಟ್ರಸೇವೆಗೆ ಸನ್ನದ್ಧರಾಗಿ

## ಅಂತರಸಂತೆ ಯುವಪಡೆ ವಾರ್ಷಿಕೋತ್ಸವದಲ್ಲಿ ಡಿ.ಸುಂದರ್ ದಾಸ್ ಕರೆ



ಎಚ್.ಡಿ.ಕೋಟೆ: ಯುವಪೀಳಿಗೆ ನಮ್ಮ ದೇಶದ ಭವಿಷ್ಯವಾಗಿದ್ದು, ರಾಷ್ಟ್ರದ ಕೆಲಸ ಎಂದು ಬಂದಾಗ ಯುವಕರು ಸೇವೆಗೆ ಸನ್ನದ್ಧರಾಗಿರಬೇಕು ಎಂದು ಕರ್ನಾಟಕ ರಾಜ್ಯ ಬೀಜ ಹಾಗೂ ಸಾವಯವ ಪ್ರಮಾಣನ ಸಂಸ್ಥೆಯ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ಸದಸ್ಯ ಡಿ.ಸುಂದರ್ ದಾಸ್ ಕರೆ ನೀಡಿದರು.

ತಾಲೂಕಿನ ಅಂತರಸಂತೆ ಗ್ರಾಮದಲ್ಲಿ ನಡೆದ ಅಂತರಸಂತೆ ಯುವಪಡೆಯ 5ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಬಳಿಕ ಮಾತನಾಡಿದ ಅವರು, ಈ ಯುವ ಸಂಘಟನೆ ಒಂದು ವಿಶೇಷ ಪಡೆಯಾಗಿದೆ. ಈ ಪಡೆ 5ನೇ ವರ್ಷದ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿರುವುದು ವಿಶೇಷ ಎಂದರು.

ಯುವಪಡೆಯು 4 ವರ್ಷಗಳಲ್ಲಿ ಅನೇಕ ಸಾಮಾಜಿಕ ಕೆಲಸಗಳನ್ನು ಮಾಡುತ್ತಿದೆ. ಅದರಲ್ಲಿಯೂ ಸಾವಿನ ಮನೆಗೆ ಸಾಂತ್ವನ ಎಂಬ ಕಾರ್ಯಕ್ರಮ ಆಯೋಜಿಸಿ ಗ್ರಾಮದಲ್ಲಿ ಯಾರ ಮನೆಯಲ್ಲಾದರೂ ಸಾವಾದರೆ ಆ ಮನೆಗೆ ಹೋಗಿ ಅಲ್ಲಿ ಒಂದಿಷ್ಟು ಸೇವಾ ಕಾರ್ಯದ ಜತೆಗೆ ಊಟದ ವ್ಯವಸ್ಥೆ ಮಾಡುವ ಕೆಲಸ ಮಾಡುತ್ತಿದ್ದಾರೆ. ಇದು ನಿಜಕ್ಕೂ ಶ್ಲಾಘನೀಯ. ನಾನು ಇಂತಹ ಕಾರ್ಯಕ್ರಮವನ್ನು ಬೇರೆಲ್ಲೂ ನೋಡಿಲ್ಲ. ಇದು ಉತ್ತಮ ಕೆಲಸ ಎಂದರು.

ಸಂಘ ಆರಂಭವಾದಾಗಿನಿಂದ ಎಲ್ಲಿಯೂ ಹಣ ಸಂಗ್ರಹ ಮಾಡಿಲ್ಲ. ತಾವಾಗಿಯೇ ಹಣ ಸಂಗ್ರಹಣೆ ಮಾಡಿಕೊಂಡು, ಅದರಿಂದ ಸೇವಾ ಕಾರ್ಯ ಮಾಡುತ್ತಿದ್ದೀರಿ. ಇಂತಹ ಸಂಘಟನೆ ಮತ್ತಷ್ಟು ವರ್ಷ ಮುಂದುವರಿಯಲಿ, ಜತೆಗೆ ಊರಿನ ಅಭಿವೃದ್ಧಿ ಕಾರ್ಯಗಳಲ್ಲಿ ಸಕ್ರಿಯವಾಗಿರಲಿ ಎಂದು ಆಶಿಸಿದರು.

ಗ್ರಾಮದ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ಸಮಿತಿಯ ಮಾಜಿ ಅಧ್ಯಕ್ಷರೂ ಆದ ನಿವೃತ್ತ ಮುಖ್ಯ ಶಿಕ್ಷಕ ಹೆತ್ತೇಗೌಡ ಮಾತನಾಡಿ, ಗ್ರಾಮದಲ್ಲಿ ಯುವಪಡೆ ಸಂಘಟನೆ ಸಕ್ರಿಯವಾಗಿರುವುದು ನಿಜಕ್ಕೂ ಹೆಮ್ಮೆಯ ವಿಚಾರ. ಪಡೆ ಎಂದರೆ ಸೈನಿಕರು ಗುಂಪು ಎಂದರ್ಥ. ಯುವಪಡೆಯು ಗ್ರಾಮದ ವಿಚಾರಗಳು ಬಂದಾಗ ಒಗ್ಗಟ್ಟಿನಿಂದ ಶ್ರಮಿಸಬೇಕು. ಒಗ್ಗಟ್ಟಿನ ಶಕ್ತಿ ಬಳಸಿ ಎಲ್ಲ ಸಮುದಾಯದ ಜನರಿಗೂ ಸಹಾಯ ಮಾಡಬೇಕು. ಗ್ರಾಮದ ಜಾತ್ರೆ, ಹಬ್ಬಗಳಲ್ಲಿ ಭಾಗಿಯಾಗಬೇಕು. ಗ್ರಾಮದ ಎಲ್ಲ ಯುವಕರನ್ನು ಒಗ್ಗೂಡಿಸಿಕೊಂಡು ಮುಂದೆ ಸಾಗಬೇಕು ಎಂದರು.

ಇದೇ ವೇಳೆ ಡಿ.ಸುಂದರ್ ದಾಸ್, ಹೆತ್ತೇಗೌಡ ಹಾಗೂ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ಸಮಿತಿ ಅಧ್ಯಕ್ಷರಾದ ವಿ.ರಾಜಪ್ಪ ಅವರನ್ನು ಯುವಪಡೆಯ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭ ಯುವ ಮುಖಂಡ ನವೀನ್ ದಾಸ್, ಮೈಸೂರು ಜಿಲ್ಲಾ ಅಮರ ಶಿಲ್ಪಿ ವೇದಿಕೆ ಜಿಲ್ಲಾಧ್ಯಕ್ಷ ಮಹೇಶ್, ಮಹದೇಶ್ವರ ದೇವಸ್ಥಾನ ಸಮಿತಿ ಸಂಚಾಲಕ ಎ.ಪಿ.ಕೃಷ್ಣ, ರಾಜಣ್ಣ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ವಿ.ನಾಗರಾಜು, ಬಿಜೆಪಿ ಮುಖಂಡ ಎಲ್‌ಐಸಿ ಸುಬ್ರಹ್ಮಣ್ಯ, ಪುಟ್ಟಸ್ವಾಮಪ್ಪ, ಎಸ್ ಡಿಎಂಸಿ ಅಧ್ಯಕ್ಷ ಸುಬ್ರಹ್ಮಣ್ಯ, ಅಭಾವೀಲಿಂ ಮಹಾಸಭಾ ಯುವಘಟಕದ ಮಾಜಿ ಅಧ್ಯಕ್ಷ ಅಭಿ ಅಂತರಸಂತೆ, ಮೋಹನ್ ಕುಮಾರ್, ದೇವಣ್ಣ, ಅರ್ಚಕ ಲೋಕೇಶ್, ಬಸವರಾಜು, ಸುರೇಂದ್ರ, ಸತೀಶ್, ಕುಮಾರ್, ಎಂ.ಜಯಣ್ಣ, ನಂದೀಶ್, ಆನಂದ, ಸುಬ್ರಹ್ಮಣ್ಯ ಸೇರಿದಂತೆ ಯುವಪಡೆಯ ಸದಸ್ಯರು, ಗ್ರಾಮಸ್ಥರು ಹಾಜರಿದ್ದರು.

### ದಿ.ಸುಬ್ಬಣ್ಣ-ದಿ.ನಾಗಮ್ಮ ದಂಪತಿ ಸ್ಮರಣಾರ್ಥ ಸಾಧಕರಿಗೆ ಸನ್ಮಾನ

ಕಾರ್ಯಕ್ರಮದಲ್ಲಿ 1ನೇ ತರಗತಿಯಿಂದ ದ್ವಿತೀಯ ಪಿಯುಸಿವರೆ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಧಾರವಾಡ ಕರ್ನಾಟಕ ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ನಿವೃತ್ತ ಮುಖ್ಯಸ್ಥರಾದ ಹಿರಿಯ ಮಾಧ್ಯಮ ತಜ್ಞ ಡಾ.ಎ.ಎಸ್.ಬಾಲಸುಬ್ರಹ್ಮಣ್ಯ ಅವರು ತಮ್ಮ ತಂದೆ-ತಾಯಿ ದಿ.ಎ.ಎಸ್.ಸುಬ್ಬಣ್ಣ-ದಿ.ನಾಗಮ್ಮ ಹೆಸರಿನಲ್ಲಿ ಪ್ರತಿಭಾ ಪುರಸ್ಕಾರ ನೀಡಿದರು. ಸಿಎ ವ್ಯಾಸಂಗ ಪೂರ್ಣಗೊಳಿಸಿ ಸಾಧನೆ ಮಾಡಿರುವ ಎ.ಪಿ. ಆನಂದಕುಮಾರ್ ಪುತ್ರ ದರ್ಶನ್ ಹಾಗೂ ಬಾಲ್ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾದ ವಿನಯ್ ಅವರನ್ನು ಇದೇ ವೇಳೆ ಅಭಿನಂದಿಸಲಾಯಿತು.

> ಯುವಪಡೆಯು ತನ್ನ ವಾರ್ಷಿಕೋತ್ಸವದಲ್ಲಿ ಸಾಧನೆಯ ಹಾದಿಗೆ ಕಾಲಿಟ್ಟಿರುವ ಯುವಕರು ಹಾಗೂ ತಮ್ಮ ಜೀವನದ ಸುಮಾರು 50-60 ವರ್ಷ ಸಮಾಜಕ್ಕೆ ಮೀಸಲಿಟ್ಟ ಹಿರಿಯರನ್ನು ಒಂದೇ ವೇದಿಕೆಗೆ ತಂದು ಸನ್ಮಾನಿಸಿರುವುದು ಅದ್ಭುತ ಚಿಂತನೆಯಾಗಿದೆ. ಯುವಪಡೆಯು ಇದೇ ರೀತಿ ತನ್ನ ಸೇವಾ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬೇಕು.
>
> **ನವೀನ್ ದಾಸ್** ಯುವ ಮುಖಂಡ, ಅಂತರಸಂತೆ

# ಮುಂದುವರೆದ ತೆರವು ಕಾರ್ಯಾಚರಣೆ

**ಮೈಸೂರು:** ನಗರದ ಪಾದಚಾರಿಗಳ ಸಂಚಾರಕ್ಕೆ ಅಡಚಣೆಯಾಗಿದ್ದ ಅತಿಕ್ರಮಣಗಳನ್ನು ತೆರವುಗೊಳಿಸುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆ ವಲಯ 6ರವತಿಯಿಂದ ಕಾರ್ಯಾಚರಣೆ ನಡೆಸಲಾಯಿತು.

ಈ ಕಾರ್ಯಾಚರಣೆಗೆ ಪೂರ್ವಭಾವಿಯಾಗಿ ಜುಲೈ 14ರಂದು ಮೈಕ್ ಮೂಲಕ ವ್ಯಾಪಕ ಪ್ರಚಾರ ನಡೆಸಿ ಸಾರ್ವಜನಿಕರು ಹಾಗೂ ವ್ಯಾಪಾರಸ್ಥರಲ್ಲಿ ಅರಿವು ಮೂಡಿಸಲಾಗಿತ್ತು. ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸದಂತೆ ಹಾಗೂ ಸ್ವಯಂಪ್ರೇರಿತವಾಗಿ ತೆರವುಗೊಳಿಸಿಕೊಳ್ಳುವಂತೆ ಸೂಚನೆ ನೀಡಲಾಗಿತ್ತು. ನಿಗದಿತ ಕಾರ್ಯಕ್ರಮದಂತೆ ಮೈಸೂರು ಮಹಾನಗರ ಪಾಲಿಕೆಯ ವಲಯ-6 ವ್ಯಾಪ್ತಿಯ ಆಯುರ್ವೇದಿಕ್ ವೃತ್ತದಿಂದ ಸಬರ್ಬನ್ ಬಸ್ ನಿಲ್ದಾಣದವರೆಗೆ ಇರುವ ಇರ್ವಿನ್ ರಸ್ತೆಯ ಎರಡೂ ಬದಿಯ ಪಾದಚಾರಿ ಮಾರ್ಗಗಳಲ್ಲಿ ಅತಿಕ್ರಮಣ ತೆರವು ಕಾರ್ಯಾಚರಣೆ ಕೈಗೊಳ್ಳಲಾಯಿತು. ಪೊಲೀಸ್ ಇಲಾಖೆ ಹಾಗೂ ಮೈಸೂರು ಮಹಾನಗರ ಪಾಲಿಕೆ ಸಿಬ್ಬಂದಿಯ ಸಹಯೋಗದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಪಾದಚಾರಿ ಮಾರ್ಗಗಳ ಮೇಲೆ ನಿರ್ಮಿಸಲಾಗಿದ್ದ ತಾತ್ಕಾಲಿಕ ಶೆಡ್ ಗಳು, ವ್ಯಾಪಾರ ವಸ್ತುಗಳು ಸೇರಿ ವಿವಿಧ ಅತಿಕ್ರಮಣಗಳನ್ನು ತೆರವುಗೊಳಿಸಲಾಯಿತು ನಗರದಲ್ಲಿ ಪಾದಚಾರಿಗಳಿಗೆ ಸುಗಮ ಹಾಗೂ ಸುರಕ್ಷಿತ ಸಂಚಾರ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಮುಂದಿನ ದಿನಗಳಲ್ಲಿಯೂ ಇಂತಹ ಕಾರ್ಯಾಚರಣೆಗಳು ಮುಂದುವರಿಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.





ಮೊದಲ ಪುಟದಿಂದ

## ಎಐ ವಿಶ್ವವಿದ್ಯಾಲಯ ಸ್ಥಾಪನೆ

ಪರಿಣಿತರನ್ನು ರೂಪಿಸುವುದರ ಜೊತೆಗೆ, ಉನ್ನತ ಮಟ್ಟದ ಸಂಶೋಧನೆಗೆ ಉತ್ತೇಜನ ನೀಡಲಿದೆ. ಅಲ್ಲದೆ, ಶಿಕ್ಷಣ ಸಂಸ್ಥೆಗಳು, ಕೈಗಾರಿಕೆಗಳು ಮತ್ತು ಸರ್ಕಾರದ ನಡುವಿನ ಸಹಯೋಗವನ್ನು ಬಲಪಡಿಸಲಿದೆ ಎಂದು ತಿಳಿಸಿದರು. ಎಐ ಹಬ್ ಸ್ಟಾರ್ಟ್‌ಅಪ್‌ಗಳು, ಕಂಪನಿಗಳು ಹಾಗೂ ಇತರ ಪಾಲುದಾರರು ಎಐ ಸಂಶೋಧನೆ ಮತ್ತು ಅಭಿವೃದ್ಧಿ ನಡೆಸಲು ಇಂಕ್ಯುಬೇಷನ್ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು. ಕೃತಕ ಬುದ್ಧಿಮತ್ತೆಯನ್ನು ಇಂದಿನ ತಲೆಮಾರಿನ ಅತ್ಯಂತ ಮಹತ್ವದ ತಾಂತ್ರಿಕ ಕ್ರಾಂತಿ ಎಂದು ಬಣ್ಣಿಸಿದ ಅವರು, ಕರ್ನಾಟಕವನ್ನು ಎಐ-ನೇಟಿವ್ ರಾಜ್ಯವನ್ನಾಗಿ ರೂಪಿಸುವುದು ಸರ್ಕಾರದ ಗುರಿ. ಆಡಳಿತದಲ್ಲಿ ಎಐಯನ್ನು ಅಳವಡಿಸುವ ಮೂಲಕ ಸಾರ್ವಜನಿಕ ಸೇವೆಗಳ ವಿತರಣೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ರೂಪಿಸಲಾಗುವುದು ಎಂದು ತಿಳಿಸಿದರು. ಎಐ ಶಿಕ್ಷಕರಿಗೆ ಉತ್ತಮ ಬೋಧನೆಗೆ ನೆರವಾಗಬೇಕು. ವೈದ್ಯರು ರೋಗಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಲು ಸಹಾಯವಾಗಬೇಕು. ರೈತರಿಗೆ ಉತ್ತಮ ಕೃಷಿ ಸಲಹೆಗಳು ದೊರೆಯಬೇಕು. ನಾಗರಿಕರು ಸರ್ಕಾರಿ ಸೇವೆಗಳನ್ನು ಗೌರವಯುತವಾಗಿ ಮತ್ತು ವೇಗವಾಗಿ ಪಡೆಯಬೇಕು ಹಾಗೂ ಸಣ್ಣ ಉದ್ಯಮಗಳು ಸ್ಪರ್ಧಾತ್ಮಕವಾಗಿ ಬೆಳೆಯಲು ನೆರವಾಗಬೇಕು ಎಂದು ಹೇಳಿದರು.

## ಡಿಕೆಶಿ ವಾಗ್ದಾಳಿ

ಮಾಡುವ ಯಾವುದೇ ಉದ್ದೇಶ ನಮ್ಮದಲ್ಲ. ಕಾನೂನು ಪ್ರಕ್ರಿಯೆಯಲ್ಲಿರುವ ಯೋಜನೆಯನ್ನು ಮುಖ್ಯಮಂತ್ರಿ ಎಂಬ ಕಾರಣಕ್ಕೆ ನಾನು ಏಕಪಕ್ಷೀಯವಾಗಿ ರದ್ದುಪಡಿಸಲು ಸಾಧ್ಯವಿಲ್ಲ. ಆದರೆ, ರೈತರ ಹಿತಾಸಕ್ತಿಯನ್ನು ಖಂಡಿತವಾಗಿ ಕಾಪಾಡುತ್ತೇವೆ ಎಂದು ಭರವಸೆ ನೀಡಿದರು.

## ಅಷಾಢ ಆಚರಣೆಗೆ ಸಕಲ ಸಿದ್ಧತೆ

ಆರಂಭವಾಗಲಿದೆ. ರಾತ್ರಿ 8.30 ಗಂಟೆಗೆ ಕೊನೆಯಾಗಲಿದೆ. ಬೆಟ್ಟದ ಪಾದದಿಂದ ಕಾಲ್ನಡಿಗೆಯಲ್ಲಿ ಬರುವವರಿಗೆ ಬೆಟ್ಟದ ಪಾದದಿಂದ ಬೆಳಿಗ್ಗೆ 5 ಗಂಟೆಯ ನಂತರ ಪ್ರವೇಶ ಕಲ್ಪಿಸಲಾಗಿದೆ. ಸಾರ್ವಜನಿಕರು ಬೆಳಿಗ್ಗೆ 5 ಗಂಟೆಗೆ ಮೊದಲೇ ಬಂದು ಕಾಯುವುದು ಬೇಡ ಎಂದರು.

ಬೆಟ್ಟದ ಮೇಲೆ ಚಪ್ಪಲಿ ಸ್ಟಾಂಡ್ ವ್ಯವಸ್ಥೆ ಇರುವುದಿಲ್ಲ ಚಾಮುಂಡಿ ಬೆಟ್ಟಕ್ಕೆ ಬರುವ ಭಕ್ತಾಧಿಗಳಿಗೆ ಲಲಿತ ಮಹಲ್ ಹ್ಯಾಲಿಪ್ಯಾಡ್ ನಲ್ಲಿ ಹಾಗೂ ನಗರ ಬಸ್ ನಿಲ್ದಾಣದಲ್ಲಿ ಚಪ್ಪಲಿ ಸ್ಟಾಂಡ್ ಗಳ ವ್ಯವಸ್ಥೆ ಮಾಡಲಾಗಿದೆ. ಇದನ್ನು ಸದುಪಯೋಗ ಪಡಿಸಿಕೊಳ್ಳುವುದು. ಚಾಮುಂಡಿ ಬೆಟ್ಟದಲ್ಲಿ ಯಾವುದೇ ಚಪ್ಪಲಿ ಸ್ಟಾಂಡ್ ವ್ಯವಸ್ಥೆ ಇರುವುದಿಲ್ಲ ಎಂದು ಸ್ಪಷ್ಟ ಪಡಿಸಿದರು.

ಕಂಟ್ರೋಲ್ ರೂಂ ಸ್ಥಾಪನೆ: ಸಾರ್ವಜನಿಕ ದರ್ಶನ, 2000 ರೂ. ದರ್ಶನದ ಸರದಿ ಸಾಲುಗಳ ಬಗ್ಗೆ ನಿಗಾ ವಹಿಸಿ ತೊಂದರೆಯಾಗದಂತೆ ವ್ಯವಸ್ಥೆ ಮಾಡಲು ಕಂಟ್ರೋಲ್ ರೂಂ ತೆರೆಯಲಾಗುವುದು. ಮೈಸೂರು ನಗರ ಪೊಲೀಸ್ ಉಪ ಆಯುಕ್ತೆ, ಕೆ.ಎಸ್.ಆರ್.ಟಿ.ಸಿ ನಗರ ವಿಭಾಗದ ಜಿಲ್ಲಾ ನಿಯಂತ್ರಣಾಧಿಕಾರಿ ಹಾಗೂ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ 3 ಅಧಿಕಾರಿಗಳನ್ನೊಳಗೊಂಡ ತಂಡ ಕಂಟ್ರೋಲ್ ರೂಂ.ನಲ್ಲಿ ಕಾರ್ಯನಿರ್ವಹಿಸಲಿದೆ. ಅಧಿಕಾರಿಗಳ ತಂಡವು ಸರದಿ ಸಾಲಿನಲ್ಲಿ ಯಾವುದೇ ನೂಕು ನುಗ್ಗಲು ಉಂಟಾಗದಂತೆ ಎಚ್ಚರಿಕೆ ವಹಿಸಬೇಕು. 2000ರೂ. ಟಿಕೇಟ್ ನ ಸಾಲಿನಲ್ಲಿ ಟಿಕೇಟ್ ಇಲ್ಲದೇ ಇರುವವರು ಪ್ರವೇಶಿಸದಂತೆ ನೋಡಿಕೊಳ್ಳಬೇಕು. ಅಲಲ್ಲಿ ದರ್ಶನಕ್ಕೆ ಬೇಕಾಗುವ ಅಂದಾಜು ವೇಳೆ ಕುರಿತು ಸಾರ್ವಜನಿಕರಿಗೆ ತಿಳಿಯುವಂತೆ ಮಾಹಿತಿ ಫಲಕವನ್ನು ಅನಾವರಣ ಮಾಡಿ ಎಂದರು.

ಅಗತ್ಯವಿರುವ ಕಡೆ ಮೊಬೈಲ್ ಶೌಚಾಲಯ, ಕಸದ ಬುಟ್ಟಿ ಇಡುವ ವ್ಯವಸ್ಥೆಯಾಗಬೇಕು. ಸರತಿ ಸಾಲಿನಲ್ಲಿ ಬರುವವರಿಗೆ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ನಿಗಾ ವಹಿಸಲು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡುವಂತೆ ತಿಳಿಸಿದರು. ಸಭೆಯಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾಲಾಟ್ಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ನಗರ ಪೊಲೀಸ್ ಉಪ ಆಯುಕ್ತೆ ಹರ್ಷ ಪ್ರಿಯಾವರ್ಧನ, ಡಿಸಿಪಿ ಸುಂದರ್ ರಾಜ್, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪ ಸೇರಿ ಇನ್ನಿತರರು ಉಪಸ್ಥಿತರಿದ್ದರು.

## ಪರ-ವಿರೋಧ ಪ್ರತಿಭಟನೆ

ಘೋಷಣೆಗಳು ಮೊಳಗುತ್ತಿದ್ದರೆ, ಮತ್ತೊಂದೆಡೆ ಪರವಾದ ಘೋಷಣೆಗಳು ಕೇಳಿಬಂದವು.

## ಕಲಬುರ್ಗಿ ಕಾರಾಗೃಹದಿಂದ ಮೂವರು ಕೈದಿಗಳು ಪರಾರಿ

ಮಧ್ಯರಾತ್ರಿ ಲಾಕಪ್‌ನಲ್ಲಿ ಇರಬೇಕಾದ ಕೈದಿಗಳನ್ನು ಜೈಲು ಸಿಬ್ಬಂದಿ ಯಾಕೆ ಹೊರಗೆ ಬಿಟ್ಟರು ಎಂಬ ಪ್ರಶ್ನೆ ಮೂಡಿದೆ. ಈ ಮೂಲಕ ಕೈದಿಗಳ ಪರಾರಿಗೆ ಜೈಲಿನ ಹಲವು ಸಿಬ್ಬಂದಿ ಹಾಗೂ ಅಧಿಕಾರಿಗಳು ಸಾಥ್ ನೀಡುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಈ ಕುರಿತು ಫರ್ತಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಿಡದಿ: ಕಬ್ಬು ಬೆಳೆಗಾರ ರೈತರಿಂದ ಪ್ರತಿಭಟನೆ

ಚಾಮರಾಜನಗರ, ಬಿಡದಿ ರೈತರ ಮೇಲೆ ನಡೆದ ದೌರ್ಜನ್ಯ ವನ್ನು ಖಂಡಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರ ಸಂಘದ ಪದಾಧಿಕಾರಿಗಳು

ಸಂಘದ ರಾಜ್ಯ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ. ಮಂಗಳವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು. ಈ ವೇಳೆ ಜಿಲ್ಲಾಧಿಕಾರಿಗಳಿಗೆ ಬಿಡದಿ ಟೌನ್ಶಿಪ್ ಯೋಜನೆಯನ್ನು ತಕ್ಷಣ ಕೈಬಿಡಬೇಕು ಎಂದು ಹಕ್ಕು ಒತ್ತಾಯ ಪತ್ರ ಸಲ್ಲಿಸಲಾಯಿತು ನಂತರ ಮಾತನಾಡಿದ ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಬೆಂಗಳೂರು ಅಭಿವೃದ್ಧಿಯ ನೆಪದಲ್ಲಿ ಬಿಡದಿ ಹೋಬಳಿಯ ಬೈರಮಂಗಲ ಬನ್ನಿ ಗಿರಿ.ಹೊಸೂರು. ಒಡೆರಹಳ್ಳಿ ಕಂಚುಗಾರನಹಳ್ಳಿ. ಕೆಂಪಯ್ಯನ ಪಾಳ್ಯ ಕೆ.ಜಿ ಗೊಲ್ಲರಪಾಳ್ಯ. ಮಂಡಲಹಳ್ಳಿ. ಹರಳ ಸುಸಂದ್ರ ಒಟ್ಟು 9 ಗ್ರಾಮಗಳ ಅಧಿಸೂಚನೆಯನ್ನು 2025ರ ಮಾರ್ಚ್ 12ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. 2026ರ ಮಾರ್ಚ್ ನಗರಾಭಿವೃದ್ಧಿ ಇಲಾಖೆ, ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿದೆ ಈ ಅಂತಿಮ ಅಧಿಸೂಚನೆಯ ಪ್ರಕಾರ ಸದ್ಯ 518 ಎಕರೆ ಭೂಸ್ವಾದಿನಕ್ಕೆ ಕ್ರಮ ಕೈಗೊಳ್ಳಲಾಗಿದೆ ಅಂತಿಮ ಅಧಿಸೂಚನೆಯ ಪ್ರಕಾರ ಗುರುತಿಸಲಾದ ಕೆಂಪಯ್ಯನ ಪಾಳ್ಯ. ಮಂಡಲಹಳ್ಳಿ.ವಡೆರಹಳ್ಳಿ. ಯಲ್ಲಿ ಸುಮಾರು 518 ಎಕರೆ ಭೂಸ್ವಾಧೀನಕ್ಕೆ ಅಂತಿಮ ಆದೇಶ ಹೊರಡಿಸಿಸಲಾಗಿದೆ.




ರೇಷ್ಮೆ. ಮಾವು ತೆಂಗು ಕಬ್ಬು ಬಾಳೆ ಹೈನುಗಾರಿಕೆ. ಇತ್ಯಾದಿ ಉಪಕಸುಗಳ ಹಾಡು ಕುರಿ ಸಾಕಣೆ ಕೋಳಿ ಸಾಕಣೆ ಮಾಡಿಕೊಂಡು ಜೀವನ ನಿರ್ವಹಿಸುತ್ತಿದ್ದಂತಹ ಕುಟುಂಬಗಳನ್ನು ಒಕ್ಕಲು ಹೆಬ್ಬಿಸಿ ಬಂಡವಾಳಶಾಹಿಗಳು ಮತ್ತು ಶ್ರೀಮಂತರ ವಿಲಾಸಿ ಜೀವನಕ್ಕಾಗಿ ಭೂಮಿಯನ್ನು ವಶಪಡಿಸಿಕೊಳ್ಳುವುದು ರೈತರ ಅಭಿವೃದ್ಧಿಗೆ ಪೂರಕವಲ್ಲದ ಯೋಜನೆಯಾಗಿದೆ ಎಂದು ಕಿಡಿಕಾರಿದರು.

ಮಾರಕವಾದ ಯೋಜನೆಗಳಿಂದ ಕೃಷಿಚಟುವಟಿಕೆ ಮತ್ತು ಕೃಷಿ ಕುಟುಂಬಗಳ ಇಳಿಮುಖ ಆಗುತ್ತದೆ ದೇಶದಲ್ಲಿ ಆಹಾರ ಉತ್ಪಾದನೆ ಕುಂಠಿತವಾಗುತ್ತದೆ ಹಣ ಮತ್ತು ಕಂಪ್ಯೂಟರ್ ಮೂಲಕ ಆಹಾರ ಉತ್ಪಾದನೆ ಅಸಾಧ್ಯ ರಾಜ್ಯ ಸರ್ಕಾರವು ಈ ವಿಚಾರವನ್ನು ಮನಗಂಡು ಯಾವುದೇ ಕಾರಣಕ್ಕೂ ಬಿಡದಿ ಟೌನ್ ಶಿಪ್ ಯೋಜನೆಯನ್ನು ಜಾರಿಗೆ ತರಬಾರದು ಎಂದು ಒತ್ತಾಯಿಸಿದರು. ರೈತರ ಮೇಲೆ ಗದ ಪ್ರಹಾರ ಮಾಡಿದಂತಹ ಯಾವುದೇ ಸರ್ಕಾರ ಇಲ್ಲಿಯ ತನಕ ಉಳಿದಿಲ್ಲ . ನೆನ್ನೆ ನಡೆದಂತ ಪ್ರಕರಣದಲ್ಲಿ ಸುಮಾರು 10 ಜನರ ಮೇಲೆ ಪ್ರಕರಣ ದಾಖಲು ಮಾಡಲು ಹೊರಟಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಇಂತಹ ಅಮಾಯಕ ರೈತರೆ ಮೇಲೆ ಪ್ರಕರಣ ದಾಖಲು ಮಾಡುವುದನ್ನು ಕೈ ಬಿಟ್ಟು ಈ ಯೋಜನೆಯನ್ನು ಕೈಬಿಡಬೇಕೆಂದು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್. ತಾಲೂಕು ಅಧ್ಯಕ್ಷ ಮಲಿಯೂರು ಸತೀಶ್. ಹೊನ್ನೇಗೌಡನಹಳ್ಳಿ ಮಹೇಶ್. ಕಿಲ್ಲಿಪುರ ಶ್ರೀಕಂಠ . ನಂದೀಶ್. ಅರಳಿಕಟ್ಟೆ ಸಿದ್ದಲಿಂಗಪ್ಪ ವೀರಭದ್ರು. ಅರವೆ ಶಿವಪಾದು. ಮುಕುಡಳ್ಳಿ ನಸರತ್ ಗಿರಿಜಮ್ಮ ಶ್ವೇತ. ರಾಜೇಶ್ವರಿ. ಹೇಮಾ. ಮಲಿಯೂರು ಸಿದ್ದರಾಜ್ . ಮಂಜುನಾಥ್. ಮಹೇಶ್. ಬಸವ ಶೆಟ್ಟಿ. ಕಾಲ್ನಂಡಿ ಮಲ್ಲೇಶ್. ಬಸವರಾಜು ಹಿರಿ ಬೇಗೂರು. ಮುಂತಾದ ನೂರಾರು ರೈತರು ಹಾಜರಿದ್ದರು.

ಮೊದಲ ಪುಟದಿಂದ

## ಸಚಿವ ಸ್ಥಾನಕ್ಕಾಗಿ ಲಾಬಿ ಶುರು

ಕುರಿತು ಹೈಕಮಾಂಡ್ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ದೆಹಲಿಗೆ ತೆರಳಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಸಾಧ್ಯವಾದಷ್ಟು ಬೇಗ ಸಚಿವ ಸಂಪುಟ ವಿಸ್ತರಣೆ ಮಾಡಲಾಗುವುದು ಎಂದು ಹೇಳಿದರು. ಎಐಸಿಸಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಕೂಡ ಕೇರಳದಿಂದ ದೆಹಲಿಗೆ ತೆರಳುತ್ತಿದ್ದಾರೆ. ರಾಜ್ಯ ಸಚಿವ ಸಂಪುಟ ವಿಸ್ತರಣೆ ಕುರಿತು ಕಾಂಗ್ರೆಸ್ ಹೈಕಮಾಂಡ್ ಮಹತ್ವದ ಸಭೆ ನಡೆಸುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ರಾಹುಲ್ ಗಾಂಧಿ ಗುರುವಾರ ಡೆಹ್ರಾಡೂನ್‌ಗೆ ತೆರಳುವ ಸಾಧ್ಯತೆ ಇದೆ. ಸೋನಿಯಾ ಗಾಂಧಿ ಸೇರಿದಂತೆ ಕುಟುಂಬ ಸದಸ್ಯರು ವಿಶ್ರಾಂತಿಗಾಗಿ ತಂಗಿದ್ದಾರೆ. ಡೆಹ್ರಾಡೂನ್‌ಗೆ ತೆರಳುವ ಮುನ್ನವೇ ಸಚಿವ ಸಂಪುಟ ವಿಸ್ತರಣೆ ಕುರಿತು ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ. ಸಚಿವ ಸ್ಥಾನಾಕಾಂಕ್ಷಿಗಳ ಚಟುವಟಿಕೆಗಳೂ ಜೋರಾಗಿವೆ. ರಾಮದುರ್ಗ ಶಾಸಕ ಅಶೋಕ್ ಪಟ್ಟಣ, ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡ, ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ತಮ್ಮ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ ಎನ್ನಲಾಗಿದೆ. ರಾಜ್ಯ ಕಾಂಗ್ರೆಸ್‌ನಲ್ಲಿ ಸಚಿವ ಸ್ಥಾನಕ್ಕಾಗಿ ಹಲವು ಶಾಸಕರು ತೀವ್ರ ಲಾಬಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಹೈಕಮಾಂಡ್‌ನ ಅಂತಿಮ ನಿರ್ಧಾರದತ್ತ ಎಲ್ಲರ ಚಿತ್ತ ನೆಟ್ಟಿದೆ.

## ಡಿಕೆಶಿ ವಿರುದ್ಧ ಎಚ್‌ಡಿಡಿ ವಾಗ್ದಾಳಿ

ಕೊಟ್ಟ ಮಾತುಗಳನ್ನು ಈಡೇರಿಸಲು ನಿಮಗೆ ಇನ್ನೂ ಹಲವು ಮಾರ್ಗಗಳಿವೆ. ಆದರೆ, ರೈತರ ಜೀವನೋಪಾಯವನ್ನು ನಾಶ ಮಾಡುವ ದಾರಿಯನ್ನು ಆಯ್ಕೆ ಮಾಡಬೇಡಿ. ರೈತರ ಬದುಕಿನೊಂದಿಗೆ ಆಟವಾಡಬೇಡಿ ಎಂದು ಕಿಡಿಕಾರಿದ್ದಾರೆ. ಬಿಡದಿ ಟೌನ್‌ಶಿಪ್ ಯೋಜನೆ ವಿರುದ್ಧ ಹೋರಾಟ ನಡೆಸುತ್ತಿರುವ ರೈತರ ಬೆಂಬಲಕ್ಕೆ ತಾವು ಕೂಡ ಇಳಿಯಬೇಕಾದ ಪರಿಸ್ಥಿತಿ ನಿರ್ಮಿಸಬೇಡಿ. ನನ್ನನ್ನು ರೈತರೊಂದಿಗೆ ಪ್ರತಿಭಟನಾ ಸ್ಥಳದಲ್ಲಿ ಕುಳಿತುಕೊಳ್ಳುವಂತೆ ಮಾಡಬೇಡಿ. ಅಗತ್ಯ ಬಿದ್ದರೆ ರೈತರ ಪರವಾಗಿ ನಾನು ಕೂಡ ಹೋರಾಟಕ್ಕೆ ಇಳಿಯುತ್ತೇನೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

## 'ಬಿಡದಿಗೆ' ದೇವೇಗೌಡರ ಎಂಟ್ರಿ

ಭೂ ಮಾಫಿಯಾ ಇದೆ ಎಂದು ಆರೋಪಿಸಿದ್ದರು. ಅಲ್ಲದೆ, ಮಧ್ಯಪ್ರವೇಶಿಸುವಂತೆ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದರು.

ಡಿ.ಕೆ.ಶಿವಕುಮಾರ್ ಈ ಯೋಜನೆಯನ್ನು ರಿಯಲ್ ಎಸ್ಟೇಟ್ ವ್ಯವಹಾರವನ್ನಾಗಿ ಪರಿವರ್ತಿಸಿದ್ದಾರೆ ಎಂದು ಆರೋಪಿಸಿರುವ ಕುಮಾರಸ್ವಾಮಿ ಅವರು, ರೈತರಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿದ್ದಾರೆ. ಕುಮಾರಸ್ವಾಮಿ ಹಾಗೂ ದೇವೇಗೌಡರ ಕುಟುಂಬ ಐತಿಹಾಸಿಕವಾಗಿ ರಾಮನಗರ ಮತ್ತು ಚನ್ನಪಟ್ಟಣ ಕ್ಷೇತ್ರಗಳನ್ನು ಪ್ರತಿನಿಧಿಸುತ್ತ ಬಂದಿದ್ದರೆ, ಕನಕಪುರ ಕ್ಷೇತ್ರದಲ್ಲಿ ಡಿ.ಕೆ.ಶಿವಕುಮಾರ್ ಪ್ರಭಾವವಿದೆ. ಈಗ ಈ ಪ್ರದೇಶ ಎರಡೂ ರಾಜಕೀಯ ಪಕ್ಷಗಳ ನೇರ ಹಣಾಹಣಿಯ ಅಖಾಡವಾಗಿದೆ.

## ಸಾಫ್ಟ್‌ವೇರ್ ರಫ್ತಿನಲ್ಲಿ ಪಾಲು ಶೇ.40

ಸೆಂಟರ್ ಗಳು ಕಾರ್ಯನಿರ್ವಹಿಸುತ್ತಿವೆ ಎಂದು ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು. ಎಐ ನಾವೀನ್ಯತೆ, ಕ್ಲೌಡ್ ಕಂಪ್ಯೂ ಟಿಂಗ್ ಮತ್ತು ಉನ್ನತ ಗಣಕ ತಂತ್ರಜ್ಞಾನಕ್ಕೆ ಅಗತ್ಯವಾದ ಡೇಟಾ ಸೆಂಟರ್‌ಗಳು ಸೇರಿದಂತೆ ಡಿಜಿಟಲ್ ಮೂಲಸೌಕರ್ಯವನ್ನು ಸರ್ಕಾರ ಇನ್ನಷ್ಟು ಬಲಪಡಿಸಲಿದೆ ಎಂದು ಅವರು ತಿಳಿಸಿದರು.

## ರೈತರ ವಿರುದ್ಧ ಕಾನೂನುಕ್ರಮ

ಒಪ್ಪಲು ಸಾಧ್ಯವಿಲ್ಲ. ಇಂತಹ ಘಟನೆಗಳ ವಿರುದ್ಧ ಕಾನೂನು ಪ್ರಕಾರ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.

ಸರ್ವೇ ಅಧಿಕಾರಿಗಳ ಮೇಲೆ ಪೊರಕೆಯಿಂದ ಹಲ್ಲೆ ನಡೆಸಲಾಗಿದೆ. ಕಲ್ಲು ತೂರಾಟವೂ ನಡೆದಿದೆ. ಈ ಸಂಬಂಧ ರೈತರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಬಿಡದಿಯಲ್ಲಿ ಟೌನ್‌ಶಿಪ್ ಯೋಜನೆಗೆ ವಿರೋಧ ವ್ಯಕ್ತವಾಗುತ್ತಿರುವುದು ಗೊತ್ತಿದೆ. ರಾಜಕೀಯ ಕಾರಣಗಳಿಂದ ಅಥವಾ ರಾಜಕೀಯ ಒತ್ತಡದ ಮೇರೆಗೆ ಹಿಂಸಾಚಾರಕ್ಕೆ ಮುಂದಾದರೆ, ಸರ್ಕಾರ ಕಾನೂನು ಕ್ರಮ ಕೈಗೊಳ್ಳುತ್ತದೆ ಎಂದರು.

ಸಚಿವ ಸಂಪುಟ ವಿಸ್ತರಣೆ ಕುರಿತು ಮಾತನಾಡಿದ, ಶೀಘ್ರದಲ್ಲೇ ವಿಧಾ ನಮಂಡಲ ಅಧಿವೇಶನ ನಡೆಯುವ ಸಾಧ್ಯತೆ ಇದೆ. ಆದರೆ, ಸಚಿವ ಸಂಪುಟ ವಿಸ್ತರಣೆ ಇನ್ನೂ ಆಗಿಲ್ಲ. ರಾಜ್ಯದಾದ್ಯಂತ ಕೆಲವು ರಾಜಕೀಯ ಬೆಳವಣಿಗೆಗಳು ನಡೆಯಬಹುದು. ಅವೆಲ್ಲವನ್ನೂ ನಾವು ಸಮರ್ಥವಾಗಿ ಎದುರಿಸುತ್ತೇವೆ ಎಂದು ತಿಳಿಸಿದರು. ಸಂಪುಟದಲ್ಲಿ ಇನ್ನೂ 20 ಸಚಿವ ಸ್ಥಾನಗಳು ಖಾಲಿ ಇವೆ. ಅವುಗಳನ್ನು ಭರ್ತಿ ಮಾಡುವ ಕುರಿತು ಪಕ್ಷದ ಹೈಕಮಾಂಡ್ ಈಗಾಗಲೇ ಚರ್ಚೆ ನಡೆಸುತ್ತಿದೆ. ರಾಹುಲ್ ಗಾಂಧಿ ಕೂಡ ವಿದೇಶ ಪ್ರವಾಸದಿಂದ ಮರಳಿದ್ದಾರೆ. ಎಂದರು.

# ವಿಧಾನಸೌಧದ ಎದುರು ಗೂಟ ಹೊಡೆದು ಪ್ರತಿಭಟನೆ

## ಭೂಸ್ವಾಧೀನ ವಿರೋಧಿ ಹೋರಾಟಕ್ಕೆ ಕರ್ನಾಟಕ ನವನಿರ್ಮಾಣ ವೇದಿಕೆ ಬೆಂಬಲ

ರಾಮನಗರ: ಬಿಡದಿ ಹೋಬಳಿಯಲ್ಲಿ ಉದ್ದೇಶಿಸಿರುವ ಸಮಗ್ರ ಉಪನಗರ ಯೋಜನೆಗೆ ಭೂಸ್ವಾಧೀನವನ್ನು ವಿರೋಧಿಸಿ ನಡೆಯುತ್ತಿರುವ ರೈತರ ಹೋರಾಟಕ್ಕೆ ಕರ್ನಾಟಕ ನವ ನಿರ್ಮಾಣ ವೇದಿಕೆ ಬೆಂಬಲವನ್ನು ಘೋಷಿಸಿದೆ. ವಿಧಾನಸೌಧದ ಎದುರು ಗೂಟ ಹೊಡೆದು ಪ್ರತಿಭಟನೆ ನಡೆಸುವುದಾಗಿ ವೇದಿಕೆಯ ರಾಜ್ಯಾಧ್ಯಕ್ಷ ಭೀಮಾ ಶಂಕರ ಪಾಟೀಲ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ನಗರದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಬಂಗಾರಪ್ಪನವರನ್ನು ತಮ್ಮ ರಾಜಕೀಯ ಗುರುಗಳು ಎಂದು ಹಾಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಲವಾರು ಬಾರಿ ಹೇಳಿದ್ದಾರೆ. ಬಂಗಾರಪ್ಪನವರ ಆಡಳಿತಾವಧಿಯಲ್ಲಿ ಬ್ಯಾಂಕ್ ಸಾಲ ಮರುಪಾವತಿಸದ ರೈತರ ವಿರುದ್ಧ ಕ್ರಮಕ್ಕೆ ಮುಂದಾಗಿದ್ದರು. ಆಗ ರೈತರು ತಮ್ಮ ಅಳಲನ್ನು ತೋಡಿಕೊಂಡಿದ್ದರು. ಆಗ ಬಂಗಾರಪ್ಪನವರು ಗೂಟ ತೆಗೆದುಕೊಂಡು ಹೊಡೆಯಿರಿ ಎಂದು ಕರೆ ಕೊಟ್ಟಿದ್ದರು. ಬಂಗಾರಪ್ಪನವರ ಈ ಮಾತುಗಳನ್ನು ಡಿ.ಕೆ.ಶಿವಕುಮಾರ್ ಅವರಿಗೆ ನೆನಪಿಸುತ್ತಿದ್ದೇವೆ. ವಿಧಾನಸೌಧದ ಮುಂದೆಯೂ ಗೂಟ ಹೊಡೆದು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ರೈತರ ನೋವನ್ನು ಅರ್ಥಮಾಡಿಸಿಕೊಡುವುದಾಗಿ ತಿಳಿಸಿದರು.

**ಅಭಿವೃದ್ಧಿ ಹೆಸರಲ್ಲಿ ಲೂಟಿಗೆ ಅವಕಾಶ ಕೊಡಬೇಡಿ**




### ಬಿಡದಿ ಮತ್ತೊಂದು ನರಗುಂದ ಆಗೋದು ಬೇಡ!

ರೈತರ ಭೂಮಿಯನ್ನು ವಶಪಡಿಸಿಕೊಂಡು ಎಷ್ಟು ಅಭಿವೃದ್ಧಿ ಮಾಡಿದ್ದೀರಿ ಎಂಬ ಅಂಕಿ–ಅಂಶಗಳು ನಮ್ಮ ಬಳಿ ಇವೆ. ಕೆ.ಐ.ಎಡಿಬಿ ಯಿಂದ ಯಾವರೀತಿ ಜನರಿಗೆ ಮೋಸವಾಗಿದೆ. ಕೆ.ಎಚ್.ಬಿಯಿಂದ ಜನರಿಗೆ ಯಾವ ರೀತಿ ಮೋಸವಾಗಿದೆ. ಕಾರ್ಖಾನೆಗಳಿಂದ ಯಾವ ರೀತಿ ಮೋಸ ಆಗ್ತಿದೆ ಎಂಬುದನ್ನು ಕನ್ನಡಿಗರು, ಹೋರಾಟಗಾರರು ಮರೆತಿಲ್ಲ. ಸರ್ಕಾರ ಇಂದು ತಾವು ನಡೆದಿದ್ದೇ ದಾರಿ ಅದು ಮೂರ್ಖ ತನದ ಪರಮಾವಧಿ ಎಂದರು. ರೈತರನ್ನು ಎದುರು ಹಾಕಿಕೊಂಡ ಸರ್ಕಾರ ಆಡಳಿತ ಮಾಡಿದ ಉದಾಹರಣೆಗಳು ಇಲ್ಲ ಎಂಬುದು ಇತಿಹಾಸದ ಪುಟಗಳಲ್ಲಿ ಇದೆ. ನರಗುಂದದ ಬಂಡಾಯ ಯಾವ ಕಾರಣಕ್ಕಾಯಿತು ಎಂಬುದು ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲವೆ? ಬಿಡದಿ ಮತ್ತೊಂದು ನರಗುಂದದ ಪ್ರತಿರೂಪ ಆಗಬೇಕು ಎಂಬುದು ನಿಮ್ಮ ಮನಸ್ಸಲ್ಲಿ ಇದ್ದಂತಿದೆ. ನರಗುಂದದ ಬಂಡಾಯದ ಸಂದರ್ಭ ದಲ್ಲಿ ರಾಜಕೀಯದಲ್ಲಿ ಯಾವ್ಯಾವ ವ್ಯತ್ಯಾಸಗಳಾಯಿತು? ಕರ್ನಾಟಕದ ರಾಜಕೀಯ ಪರಿಸ್ಥಿತಿ ಏನಾಯ್ತು? ರಾಜಕರಣೆಗಳಿಗೆ ಯಾವ ರೀತಿಯ ಸಂದಗ್ದ ಪರಿಸ್ಥಿತಿ ಆಯುತ ಎಂಬುದನ್ನು ಆಡಳಿತ ದಲ್ಲಿರುವವರು ಯೋಚನೆ ಮಾಡಬೇಕು ಎಂದು ತೀಕ್ಷ್ಣ ಮಾತುಗಳನ್ನಾಡಿದರು. ಸರ್ಕಾರಕ್ಕೆ ರೈತರ ಪರ ಬದ್ದತೆ ಇರಬೇಕು, ಕನ್ನಡಿಗರಿಗಾಗಿ ಸರ್ಕಾರ ಇರಬೇಕು, ರಿಯಲ್ ಎಸ್ಟೇಟ್ ಮಾಫಿಯಾ ದವರಿಗಾಗಿ ಅಲ್ಲ. ಬಿಡದಿ ಸಮಗ್ರ ಉಪನಗರಕ್ಕೆ ಭೂಸ್ವಾಧೀನ ಮತ್ತೊಂದು ನರಗುಂದ ಆಗೋಕ್ಕೆ ಮುನ್ನುಡಿ ಬರೆಯುವಂತಾಗಬಾರದು ಎಂದು ಭೀಮಾ ಶಂಕರ ಪಾಟೀಲ್ ರಾಜ್ಯ ಸರ್ಕಾರಕ್ಕೆ ತಿಳಿ ಹೇಳಿದರು.

ಕರ್ನಾಟಕ ಶಾಂತಿಯ ನೆಲ, ಕಾವೇರಿ ಹರಿಯುತ್ತಿರುವ ಪುಣ್ಯ ಭೂಮಿ, ಈ ಪವಿತ್ರವಾದ ಮಣ್ಣನ್ನು ರಿಯಲ್ ಎಸ್ಟೇಟ್‌ಗಾಗಿ ಮಾರಾಟ ಮಾಡುವ ನೀಚ ಕೆಲಸಕ್ಕೆ ಕೈಹಾಕಬಾರದು. ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಲೂಟಿಗೆ ಅವಕಾಶ ಮಾಡಿಕೊಡಬಾರದು ಎಂದರು.

ಡಿ.ಕೆ.ಶಿವಕುಮಾರ್ ಅವರ ಬದ್ದತೆ, ನಿಷ್ಠ, ಪಕ್ಷನಿಷ್ಟೆ, ಗಟ್ಟಿ ತನದ ವಿಚಾರಗಳನ್ನು ತಾವು ಸಹ ಗಮನಿಸಿರುವುದಾಗಿ, ಹಲವಾರು ಭಾರಿ ಶುಭಾಶಯ ಕೋರಿರುವುದಾಗಿ ತಿಳಿಸಿದರು. ಆದರೆ ಅವರೀಗ ರೈತರ ವಿಚಾರದಲ್ಲಿ ಇಟ್ಟಿರುವ ಹೆಜ್ಜೆ ಸರಿಯಲ್ಲ. ಇದ ಅವರ ರಾಜಕೀಯ ಅವನತಿಗೆ ದಾರಿಯಾಗುತ್ತದೆ ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ನವ ನಿರ್ಮಾಣ ವೇದಿಕೆಯ ಜಿಲ್ಲಾಧ್ಯಕ್ಷ ನಾರಾಯಣ ಗೌಡ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಗೋವಿಂದರಾಜು, ನೆಲಮಂಗಲ ಘಟಕದ ಅಧ್ಯಕ್ಷ ನಾರಾಯಣ ಸ್ವಾಮಿ ಉಪಸ್ಥಿತರಿದ್ದರು.

### ಹೋರಾಟಗಾರರಿಗೆ ಸಲಹೆ

ರೈತರು ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಅಂತ ಬಣಗಳನ್ನು ಸೃಷ್ಟಿ ಮಾಡಿಕೊಳ್ಳುವುದು ಬೇಡ. ತಲೆ ತಲಾಂತರದಿಂದ ಬಂದ ಇತಿಹಾಸವನ್ನು ರಾಜಕಾರಣಿಗಳಿಗೆ ಬಲಿ ಕೊಡುವುದು ಬೇಡ ಯಾವುದೇ ಪಕ್ಷವನ್ನು, ವ್ಯಕ್ತಿಯನ್ನು ಬೆಂಬಲಿಸದೆ, ಧಾರ್ಮಾತೀತ, ಪಕ್ಷಾತೀತ, ಜಾತ್ಯಾತೀತ ಹೋರಾಟ ಮಾಡಿ. ರಾಜಕಾರಣಿಗಳ ಹುಸಿ ಮಾತುಗಳನ್ನು ನಂಬಬೇಡಿ. ನಾವು ನಿಮ್ಮ ಜೊತೆ ನಿಲ್ತೀವಿ. ಹೋರಾಟದಿಂದ ಹಿಂದೆ ಸರಿಯೋಲ್ಲ ಎಂದು ಭರವಸೆ ನೀಡಿದರು.

### ನ್ಯಾಯಾಲಯದ ಮೊರೆ

ಸಮಗ್ರ ಉಪನಗರ ಯೋಜನೆಗೆ ಯಾವುದೇ ಕಾರಣಕ್ಕೂ ರೈತರ ಭೂಮಿಯನ್ನು ಬಲವಂತದಿಂದ ಕಿತ್ತುಕೊಳ್ಳಲು ನಮ್ಮ ವೇದಿಕೆ ಬಿಡೋಲ್ಲ. ಕಾನೂನಿನ ಮೂಲಕವೇ ಸರ್ಕಾರಕ್ಕೆ ಉತ್ತರ ಕೊಡಬೇಕು ಎಂಬುದು ನಮ್ಮ ಉದ್ದೇಶ. ಈಗಾಗಲೆ ವಕೀಲರುಗಳ ತಂಡದ ಬಳಿ ಚರ್ಚೆ ಮಾಡಿದ್ದೇನೆ. ಇನ್ನು ಕಲವೇ ದಿನಗಳಲ್ಲಿ ಈ ವಿಚಾರವನ್ನು ಇಟ್ಟುಕೊಂಡು ನ್ಯಾಯಾಲಯದ ಮುಂದೆಯೂ ಹೋಗುತ್ತೇವೆ. ರೈತರ ಪರ ನಿಲ್ಲ ಬೇಕು ಎಂಬುದು ನಮ್ಮ ಸ್ಪಷ್ಟ ತೀರ್ಮಾನ ಎಂದರು.

### ಪೊರಕೆ ಆಯ್ತು, ಒನಕೆ ಸೇವೆ

ಭೂಸ್ವಾಧೀನದ ವಿಚಾರದಲ್ಲಿ ಸರ್ಕಾರ ಬದ್ದತೆಯ ಹೆಜ್ಜೆ ಇಡಬೇಕು. ಪೊಲೀಸ್ ಬಲ ಮತ್ತು ಅಧಿಕಾರದ ದರ್ಪದದಿಂದ ಭೂಮಿ ಸ್ವಾಧೀನಕ್ಕೆ ಮುಂದಾದರೆ, ಅಧಿಕಾರಿಗಳಿಗೆ ನಿನ್ನ ಪೊರಕೆ ಸೇವೆ ಆಗಿದೆ, ಮುಂದಿನ ದಿನಗಳಲ್ಲಿ ಒನಕೆ ಸೇವೆಯನ್ನು ಮಾಡ್ತಾರೆ ಎಂದು ಎಚ್ಚರಿಸಿದರು. ಅಧಿಕಾರಿಗಳೂ ಸರ್ವಾಧಿಕಾರಿಗಳಲ್ಲ, ಜನರು ಕೊಟ್ಟ ಬಿಕ್ಷೆಯಲ್ಲಿ ಸಂಬಳ ಪಡೆಯುತ್ತಿದ್ದಾರೆ. ಭೂಸ್ವಾಧೀನಕ್ಕೆ ಗುರುತಾಗಿರುವ ಭೂಮಿ ಈಗ ವಿವಾದಿತ ಪ್ರದೇಶ. ವಿವಾದಿತ ಪ್ರದೇಶದಲ್ಲಿ ಅಧಿಕಾರಿಗಳು, ದರ್ಪ, ದೌರ್ಜನ್ಯ ಮಾಡಿ ಸರ್ವೆಗೆ ಹೋಗಿದ್ದಾರೆ. ವಿಧಾನಸೌಧ ನಮ್ಮ (ಜನರ) ಆಸ್ತಿ. ಸರ್ವೆ ಮಾಡ್ತೀವಿ ಅಂತ ರೈತರನ್ನೇ ಕರೆದುಕೊಂಡು ಹೋಗ್ತೀವಿ, ಬಿಡ್ತೀರಾ? ಎಂದು ಪ್ರಶ್ನಿಸಿದರು.

### ರೈತರ ವಿರುದ್ಧ ಪ್ರಕರಣ ದಾಖಲಿಸಬೇಡಿ, ಆಗ್ರಹ


ನಿನ್ನೆ ಬಿಡದಿ ಹೋಬಳಿ ಮಂಡಲಹಳ್ಳಿ ಪ್ರಕರಣದಲ್ಲಿ ರೈತರ ವಿರುದ್ದ ಪ್ರಕರಣ ದಾಖಲಿಸಬಾರದು, ದಾಖಲಿಸಲು ಸರ್ಕಾರವೂ ಅವಕಾಶ ಕೊಡಬಾರದು. ನಿನ್ನೆ ನಡೆದಿದ್ದು ರೈತರ ಆಕ್ರೋಶದ ಕಿಚ್ಚಲ್ಲ, ಸ್ವಾಭಿಮಾನದ ಕಿಚ್ಚು. ನಿನ್ನೆ ನಡೆದ ಹೋರಾಟ ನಿಜಕ್ಕೂ ಸ್ವಾಭಿಮಾನ ಇರುವ ರೈತರು ಮಾಡಿದ ಹೋರಾಟ. ನೋವಿನಿಂದ ಆದ ಘಟನೆ. ರೈತರಿಗೆ ಬೆಂಬಲ ಕೊಡಿ, ಆಗ್ರಹ. ನಮ್ಮ ಸಂಘಟನೆ ಕೂಡ ರೈತರ ಬೆಂಬಲಕ್ಕೆ ನಿಲ್ಲುತ್ತದೆ. ಆದರೆ ಯಾವುದೇ ಕರಣಕ್ಕೂ ಶಾಂತಿಗೆ ಭಂಗವಾಗುವುದು ಬೇಡ. ಕಾನೂನು ಬದ್ದವಾದ ಹೋರಾಟಗಳು ನಡೆಯಲಿ ಎಂದು ಪ್ರತಿಭಟನಾಕಾರರಿಗೆ ಕರೆ ನೀಡಿದರು.

### ಗಡಿ ಶಾಲೆಗಳಿಗೆ ಪುಸ್ತಕ ಕೊಡಿ

ರಾಜ್ಯದ ಗಡಿ ಪ್ರದೇಶಗಳಲ್ಲಿರುವ ಹಲವಾರು ಸರ್ಕಾರಿ ಶಾಲೆಗಳಿಗೆ ಕನ್ನಡ ಪಠ್ಯಪುಸ್ತಕಗಳು ಸರಬರಾಜು ಆಗಿಲ್ಲ. ಸರ್ಕಾರ ಮೊದಲು ಪಠ್ಯ ಪುಸ್ತಕಗಳನ್ನು ಕೊಡಬೇಕು ಎಂದು ಆಗ್ರಹಿಸಿದರು.

## ರಸ್ತೆ ದಾಟಿದ ಆನೆಗಳ ಹಿಂಡು

ಗುಂಡ್ಲುಪೇಟೆ: ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಆನೆಗಳ ಹಿಂಡು ರಾಷ್ಟ್ರೀಯ ಹೆದ್ದಾರಿ ದಾಟಿದ ಪರಿಣಾಮ ಬಂಡೀಪುರ?ಮದುಮಲೈ ರಸ್ತೆಯಲ್ಲಿ ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತಗೊಂಡ ಘಟನೆ ಸೋಮವಾರ ನಡೆದಿದೆ.



ಬಂಡೀಪುರದಿಂದ ಮದುಮಲೈ ಕಡೆಗೆ ಸಾಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಆನೆಗಳ ಕುಟುಂಬ ರಸ್ತೆ ದಾಟುತ್ತಿದ್ದ ಹಿನ್ನೆಲೆಯಲ್ಲಿ ಸುರಕ್ಷತೆಯ ದೃಷ್ಟಿಯಿಂದ ಅರಣ್ಯ ಇಲಾಖೆ ಸಿಬ್ಬಂದಿ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದರು. ಪರಿಣಾಮ ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತು ಕೆಲಕಾಲ ಟ್ರಾಫಿಕ್ ಜಾಮ್ ಉಂಟಾಯಿತು. ಬಂಡೀಪುರ?ಮದುಮಲೈ ರಾಷ್ಟ್ರೀಯ ಹೆದ್ದಾರಿಯಲ್ಲಿ ವನ್ಯಜೀವಿಗಳ ಓಡಾಟ ಸಾಮಾನ್ಯವಾಗಿರುವ ಹಿನ್ನೆಲೆ ಯಲ್ಲಿ ಅರಣ್ಯ ಇಲಾಖೆ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುವಂತೆ ವಾಹನ ಸವಾರರಿಗೆ ಸೂಚಿಸಿದೆ.


**ಪುರಸಭಾ ಕಾರ್ಯಾಲಯ, ಟಿ.ನರಸೀಪುರ**
**ಮೈಸೂರು ಜಿಲ್ಲೆ. ದೂ: 08227–261232**
ಇ–ಮೇಲ್: ka.tnarasipura.tmc@gmail.com, ವೆಬ್‌ಸೈಟ್: www.tnarasipuratown.gov.in

**ಸಂಖ್ಯೆ:** ಪುಸ/ಟಿನಪುರ/ಆ.ಶಾ/ಟೆಂಡರ್/03/2026–27 **ದಿನಾಂಕ:** 09.07.2026

**ಮರು ಟೆಂಡರ್ ಪ್ರಕಟಣೆ**

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000 ನಿಯಮದ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ಟಿ.ನರಸೀಪುರ ಪುರಸಭೆಯಿಂದ ಈ ಕೆಳಕಂಡ ಕಾಮಗಾರಿಗೆ ಮರು ಟೆಂಡರ್ ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಮರು ಟೆಂಡರ್ ಷೆಡ್ಯೂಲ್ ದಿನಾಂಕಗಳ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ನೋಡಬಹುದು ಮತ್ತು ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 08227–261232 ಅನ್ನು ಸಂಪರ್ಕಿಸಿ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

| ಕ್ರ. ಸಂ. | ವಿವರ | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) |
|---|---|---|---|
| 1. | Providing Master Helath Chekcup for Pourakarmika's, Sanitary workers and Drivers Working in TMC T.Narasipura. **Indent No: DMA/2026-27/SE7774/Call-2** | 2.50 | 6,250.00 |
| 2. | Supply of Loaders and Cleaners on Outsource Basis for Health Section of TMC T.Narasipura **Indent No: DMA/2026-27/ SE7775/Call-2** | 26.20 | 52,400.00 |
| 3. | Manpower on Outsource basis for SWM plant, MRF plant and Dog Shelter of TMC T Narasipura **Indent No: DMA/2026-27/SE7777/Call-2** | 27.67 | 55,400.00 |

DIPR/MYS/442/SA/2026-27 ಸಹಿ/– ಮುಖ್ಯಾಧಿಕಾರಿ, ಪುರಸಭೆ, ಟಿ.ನರಸೀಪುರ


## ಮೈಸೂರಲ್ಲಿ ಕಂಬಳ ಕೈ ಬಿಡುವಂತೆ ಮನವಿ

ಮೈಸೂರು: ನಾಡಹಬ್ಬ ದಸರೆಯಲ್ಲಿ ಕಂಬಳ ಕ್ರೀಡೆ ಆಯೋಜನೆಗೆ ಮುಂದಾಗಿರುವ ಸರ್ಕಾರದ ನಡೆಯನ್ನು ಕೈ ಬಿಡುವಂತೆ ಪರಿಸರಕ್ಕಾಗಿ ನಾವು ಸಂಘಟನೆ ಅಪಾರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದೆ.

ಅಪಾರ ಸಂಖ್ಯೆಯ ಜನರು ಸೇರುವ ಕಂಬಳ ಕ್ರೀಡೆಯ ಆಯೋಜನೆ ಮೈಸೂರಿನ ಲಕ್ಷಾಂತರ ಜನರಲ್ಲಿ ತೀವ್ರ ಅಸಮಾಧಾನ ಮತ್ತು ಆಕ್ರೋಶ ಮೂಡಿಸಲು ಕಾರಣವಾಗುತ್ತದೆ. ಕಂಬಳ ಕ್ರೀಡೆ ಕರಾವಳಿ ಪ್ರದೇಶದ ( ತುಳುನಾಡಿನ ) ಜನಪ್ರಿಯ ಗ್ರಾಮೀಣ ಕ್ರೀಡೆ. 800 ವರ್ಷಗಳ ಹಿಂದೆ ತುಳುನಾಡಿನ ರೈತರು ಭತ್ತದ ಸುಗ್ಗಿ ಕೊಯ್ಲು ಮಾಡಿದ ನಂತರ ದೇವರಿಗೆ ಕೃತಜ್ಞತೆ ಸಲ್ಲಿಸಲು ಈ ಕೆಸರು ಗದ್ದೆ ಓಟ ಪ್ರಾರಂಭಿಸಿದರು. ಇಲ್ಲಿನ ಭೌಗೋಳಿಕ ಅಂಶಗಳು ಈ ಕ್ರೀಡೆ ಹುಟ್ಟಲು ಪ್ರಮುಖ ಕಾರಣ. ಈ ಕ್ರೀಡೆಯು ಕರಾವಳಿಯ ಪ್ರಾದೇಶಿಕ ಸೊಗಡನ್ನು, ಸಾಂಸ್ಕೃತಿಕ ವೈಶಿಷ್ಟ್ಯ, ಧಾರ್ಮಿಕ ಆಚರಣೆಗಳನ್ನು ಒಳಗೊಂಡಿದೆ. ತುಂಬಾ ನೇಮ ನಿಷ್ಠೆಯಿಂದ ಕಂಬಳವನ್ನು ನಡೆಸುತ್ತಾರೆ. ಇಂತಹ ಕಂಬಳವನ್ನು ಕರಾವಳಿ ಪ್ರದೇಶದಿಂದ ಮೈಸೂರಿನ ದಸರಾ ಸಂದರ್ಭದಲ್ಲಿ ತಂದು ಹೇರುವುದು ಯಾವುದೇ ಕಾರಣಕ್ಕೂ ಸಮರ್ಥನೀಯ ಅಲ್ಲ. ಇದನ್ನು ಮೈಸೂರಿನ ಜನರು ವಿರೋಧಿಸುವಂತೆ ಕರಾವಳಿ ಭಾಗದ ಜನರೂ ವಿರೋಧಿಸುತ್ತಿದ್ದಾರೆಂದರು.



ಜುಲೈ ತಿಂಗಳ ಅರ್ಧ ಭಾಗ ಕಳೆದರೂ ಮಳೆ ಬರದೆ ಹಲವು ಜಿಲ್ಲೆಗಳಲ್ಲಿ ಬರದ ಛಾಯೆ ಆವರಿಸಿದೆ. ಕೆಲವು ಕಡೆ ರೈತರು ಬಿತ್ತನೆ ಮಾಡಲಾಗುತ್ತಿಲ್ಲ, ಬಿತ್ತನೆ ಮಾಡಿರುವ ಕಡೆ ಮಳೆ ಇಲ್ಲದೆ ಬೆಳೆಗಳು ಒಣಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ರೈತರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸ ಸರ್ಕಾರದ ಆದ್ಯತೆಯಾಗಬೇಕು. ಹಾಗಾಗಿ ಮೇಲಿನ ಅಂಶಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ದಸರಾ ಸಂದರ್ಭದಲ್ಲಿ ಕಂಬಳ ಕ್ರೀಡೆ ಆಯೋಜಿಸುವುದನ್ನು ಕೈಬಿಡಬೇಕೆಂದು ಆಗ್ರಹಿಸಿ ಪತ್ರಬರೆದಿದ್ದಾರೆ. ಮನವಿಗೆ ಸ್ಪಂದಿಸದಿದ್ದರೆ ಪ್ರತಿಭಟನೆಗೆ ಮುಂದಾಗುವುದಾಗಿ ತಿಳಿಸಿದ್ದಾರೆ. ಪರಿಸರಕ್ಕಾಗಿ ನಾವು ಸಂಘಟನೆಯ ಪರಶುರಾಮೇಗೌಡ ಇತರರು ಅಪಾರ ಜಿಲ್ಲಾಧಿಕಾರಿ ಐಶ್ವರ್ಯರಿಗೆ ಮನವಿ ಸಲ್ಲಿಸಿದರು.

## ಹುಲಿ ದಾಳಿ ಹಸು ಬಲಿ

ಗುಂಡ್ಲುಪೇಟೆ: ತಾಲೂಕಿನ ವಡೆಯನಪುರ ಗ್ರಾಮದಲ್ಲಿ ಸೋಮವಾರ ಹಗಲು ಹೊತ್ತಲ್ಲೇ ಹುಲಿ ದಾಳಿ ನಡೆಸಿ ಹಸುವೊಂದನ್ನು ಕೊಂದು ಹಾಕಿದೆ. ಘಟನೆಯಿಂದ ಗ್ರಾಮಸ್ಥರಲ್ಲಿ ತೀವ್ರ ಆತಂಕ ಮನೆ ಮಾಡಿದ್ದು, ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ.

ಗ್ರಾಮದ ರೈತ ಪುಟ್ಟಶೆಟ್ಟಿ ಅವರಿಗೆ ಸೇರಿದ ಹಸುವನ್ನು ಎಂದಿನಂತೆ ಮೇಯಲು ಬಿಟ್ಟಿದ್ದ ವೇಳೆ ಹುಲಿ ದಾಳಿ ನಡೆಸಿದೆ. ಇತ್ತೀಚಿನ ದಿನಗಳಲ್ಲಿ ಈ ಭಾಗದಲ್ಲಿ ಹುಲಿ ಪದೇಪದೇ ಕಾಣಿಸಿಕೊಳ್ಳುತ್ತಿದ್ದು, ಜಾನುವಾರುಗಳ ಮೇಲೆ ನಿರಂತರವಾಗಿ ದಾಳಿ ನಡೆಸುತ್ತಿರುವುದಾಗಿ ಗ್ರಾಮಸ್ಥರು ಆರೋಪಿಸಿದ್ದಾರೆ.

ಹುಲಿ ಗ್ರಾಮದ ಸುತ್ತಮುತ್ತ ನಿರಂತರವಾಗಿ ಸಂಚರಿಸುತ್ತಿರುವುದರಿಂದ ರೈತರು ಜಮೀನುಗಳಿಗೆ ತೆರಳಲು ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಕೃಷಿ ಚಟುವಟಿಕೆಗಳಿಗೂ ಅಡಚಣೆ ಉಂಟಾಗಿದ್ದು, ಗ್ರಾಮಸ್ಥರು ಜೀವಭಯದಲ್ಲೇ ದಿನ ಕಳೆಯುವಂತಾಗಿದೆ. ಪದೇಪದೇ ಹುಲಿ ದಾಳಿ ನಡೆದರೂ ಅರಣ್ಯ ಇಲಾಖೆ ಸಮರ್ಪಕ



ಕ್ರಮ ಕೈಗೊಳ್ಳುತ್ತಿಲ್ಲ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೂಡಲೇ ಹುಲಿಯನ್ನು ಸೆರೆ ಹಿಡಿದು ಗ್ರಾಮಸ್ಥರ ಆತಂಕ ನಿವಾರಿಸಬೇಕು ಹಾಗೂ ಹಸು ಕಳೆದುಕೊಂಡ ರೈತ ಪುಟ್ಟಶೆಟ್ಟಿ ಅವರಿಗೆ ಸರ್ಕಾರದಿಂದ ಸೂಕ್ತ ಪರಿಹಾರವನ್ನು ಶೀಘ್ರವಾಗಿ ಮಂಜೂರು ಮಾಡಬೇಕು ಎಂದು ಅವರು ಆಗ್ರಹಿಸಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

## ವಕೀಲರ ಸಂಘದ ಅಭಿವೃದ್ಧಿಗೆ ಮನವಿ

ಮೈಸೂರು: ಮೈಸೂರು ವಕೀಲರ ಸಂಘದ ಮೇಲ್ದರ್ಜೆಗೇರಿಸಲು, ಗ್ರಂಥಾಲಯ ಆಧುನೀಕರಿಸಿ ಡಿಜಿಟಲ್ ಸೌಲಭ್ಯ ಒದಗಿಸಿ ಮೂಲಭೂತ ಸೌಕರ್ಯ ಒದಗಿಸಲು ಹೆಚ್ಚುವರಿ 10 ಕೋಟಿ ರೂ.ಗಳ ಅನುದಾನವನ್ನು ನೀಡುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗೆ ಮೈಸೂರು ವಕೀಲರ ಸಂಘ ಮನವಿ ಮಾಡಿದೆ.

ಬೆಂಗಳೂರಿನ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರನ್ನು ಭೇಟಿ ಮಾಡಿರುವ ವಕೀಲರ ಸಂಘದ ತಂಡ ವಕೀಲರ ಸಮುದಾಯದ ಅಭಿವೃದ್ಧಿಗೆ ವಿಶೇಷ ಕಾಳಜಿವಹಿಸಿರುವುದು ನಮಗೆ ಪ್ರೇರಣೆಯಾಗಿದೆ. ಮೈಸೂರು ವಕೀಲರ ಸಂಘ ತಮಗೆ ಸದಾ ಜತೆಯಾಗಿರುತ್ತಿದೆ. ಈಗಾಗಲೇ ರಾಜ್ಯ ಸರ್ಕಾರ ಮಂಜೂರು ಮಾಡಿರುವ 10 ಕೋಟಿ ಅನುದಾನದಡಿಯಲ್ಲಿ ಸ್ವತಂತ್ರ ವಕೀಲರ ಭವನ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಇದಕ್ಕೆ ತಮ್ಮ ಸರ್ಕಾರಕ್ಕೆ ಸಂಘದ ಪರವಾಗಿ ಅಭಿನಂದನೆ ಸಲ್ಲಿಸುತ್ತೇವೆ.

ಪ್ರಸ್ತುತ ಗ್ರಂಥಾಲಯ ಆಧುನೀಕರಿಸುವುದು, ಡಿಜಿಟಲ್ ಸೌಲಭ್ಯ, ಮೂಲಸೌಕರ್ಯದ ಅಭಿವೃದ್ಧಿ ಪಡಿಸಿ ಸಂಘ ಮೇಲ್ದರ್ಜೆಗೇರಿಸುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿಯಲ್ಲಿ ವಕೀಲರ ಸಂಘಕ್ಕೆ 10 ಕೋಟಿ ರೂ. ಮಂಜೂರು ಮಾಡಿ



ಬಿಡುಗಡೆಗೊಳಿಸಬೇಕಾಗಿ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ಮಾನ್ಯ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂತೋಷದಿಂದ ಒಪ್ಪಿಗೆ ಸೂಚಿಸಿ, ಶೀಘ್ರದಲ್ಲೇ ಅನುದಾನ ಬಿಡುಗಡೆ ಮಾಡುವ ಪ್ರಕ್ರಿಯೆಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಇದೇ ವೇಳೆ, ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಬೆಂಗಳೂರು ವಕೀಲರ ಸಂಘವು ಮೇಲ್ಮನವಿ ಸಲ್ಲಿಸುವ ಸಾಧ್ಯತೆಯ ಬಗ್ಗೆ ಮುಖ್ಯಮಂತ್ರಿಯವರ ಗಮನ ಸೆಳೆಯಲಾಯಿತು. ಮೈಸೂರು ವಕೀಲರ ಸಂಘದ ಪ್ರದಾನ ಕಾರ್ಯದರ್ಶಿಗಳಾದ ಎ.ಜಿ.ಸುದೀರ್, ಹಿರಿಯ ಸಮಿತಿ ಸದಸ್ಯ ಜಿ.ಎಸ್.ಶಿವಸ್ವಾಮಿ, ಹಿರಿಯ ವಕೀಲರಾದ ಎಚ್. ಅರವಿಂದ್, ಸುರೇಶ್ ಪಡುವಾರಹಳ್ಳಿ, ವೆಂಕಟೇಶ್ ದಾಸನಕೊಪ್ಪಲು ಇತರರು ಉಪಸ್ಥಿತರಿದ್ದರು.

## ಚಾಲಕರ ಸಂಬಳ ಹೆಚ್ಚಿಸಿದ ಟ್ರಾವೆಲ್ಸ್ ಅಸೋಸಿಯೇಷನ್‌ಗೆ ಅಭಿನಂದನೆ



**ಮೈಸೂರು:** ಜಿಲ್ಲಾ ಪ್ರವಾಸಿ ವಾಹನ ಚಾಲಕರ ಬಾಟಾ ಹೆಚ್ಚಳಕ್ಕೆ ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಸಮ್ಮತಿಸಿರುವುದು ಸಂತಸದ ಸಂಗತಿಯಾಗಿದ್ದು, ಅಸೋಸಿಯೇಷನ್ ನಿರ್ಧಾರಕ್ಕೆ ಎಲ್ಲರೂ ಅಭಿನಂದನೆ ತಿಳಿಸುತ್ತಿರುವುದಾಗಿ ಮೈಸೂರು ಜಿಲ್ಲಾ ಪ್ರವಾಸಿ ವಾಹನ ಚಾಲಕರ ಮತ್ತು ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ನಾಗರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬಾಟಾವನ್ನು ಸೆಡಾನ್‌ಗೆ 350 ರೂ., ಇನ್ನೋವಾ ಕ್ರಿಸ್ಟಾ ಎಕ್‌ಯುವಿಗೆ 400 ರೂ, ಮಿನಿ ಬಸ್, ಟೆಂಪೋ ಟ್ರಾವೆಲರ್‌ಗೆ 500 ರೂ. ನೈಟ್ ಹಾಲ್ಟಿಂಗ್ ಮಾಡುವ ಚಾಲಕರಿಗೆ ದಿನಕ್ಕೆ 200 ರೂ, ಎಲ್ಲಾ ವಾಹನಗಳಿಗೆ ಕನಿಷ್ಠ ಕಿ.ಮೀ ಮಿತಿ ದಿನಕ್ಕೆ 300 ರೂ, ನಿಗದಿ ಪಡಿರುವುದರಿಂದ ಚಾಲಕರಿಗೆ ಅನುಕೂಲವಾಗಲಿದೆ. ಇದನ್ನು ಇತರರು ಸಹಾ ಪಾಲಿಸಬೇಕೆಂದು ಕೋರಿದರು. ಇದೇ ವೇಳೆ ಪ್ಯಾನಿಕ್ ಬಟನ್ ಕಡ್ಡಾಯ ಗೊಳಿಸಿರುವುದು ಸರಿಯಲ್ಲ. ಕೆಲವೊಂದು ರಾಜ್ಯಗಲಲ್ಲಿ ಇದಕ್ಕೆ ವಿನಾಯಿತಿ ನೀಡಲಾ ಗಿದೆ. ಅಲ್ಲದೆ, ಇದನ್ನು ನಿರ್ವಹಿಸಲುಬೇಕಾದ ವ್ಯವಸ್ಥೆ ರಾಜ್ಯದಲ್ಲಿಲ್ಲ. ಹೀಗಾಗಿ ಇದನ್ನು ಸರ್ಕಾರ ಮರು ಪರಿಶೀಲನೆ ಮಾಡಬೇಕೆಂದು ಕೋರಿದರು. ಇನ್ನಿತರ ಪದಾಧಿಕಾರಿಗಳಾದ ಕೆ.ಟಿ. ದಿವಾಕರ್, ಪುಟ್ಟಬುದ್ಧಿ, ಮೊಹಮ್ಮದ್ ಅಲಿ, ಶಿವು, ನಾಗರಾಜ್, ರಂಗಸ್ವಾಮಿ ಇದ್ದರು.

ಜು.19 ರಂದು ನಗರದ ವರ್ತಕರ ಭವನದಲ್ಲಿ ಪತ್ರಿಕಾ ದಿನಾಚರಣೆ ಕಾರ್ಯಕ್ರಮ

## ಪತ್ರಿಕಾ ದಿನಾಚರಣೆ : ದತ್ತಿ ಪ್ರಶಸ್ತಿಗಳಿಗೆ ಪತ್ರಕರ್ತರ ಆಯ್ಕೆ

ಚಾಮರಾಜನಗರ, ಪತ್ರಿಕಾ ದಿನಾಚರಣೆ ಅಂಗವಾಗಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ಸ್ಥಾಪಿಸಿರುವ ವಿವಿಧ ದತ್ತಿ ಪ್ರಶಸ್ತಿಗಳಿಗೆ 6 ಪತ್ರಕರ್ತರನ್ನು ಆಯ್ಕೆ ಮಾಡಲಾಗಿದೆ. ಜು.19 ರಂದು ನಗರದ ವರ್ತಕರ ಭವನದಲ್ಲಿ ಆಯೋಜಿಸಿರುವ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು.








ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸಲ್ಲಿಸಿರುವ ಅತ್ಯುತ್ತಮ ಸೇವೆಯನ್ನು ಪರಿಗಣಿಸಿ ವಿಶೇಷ ದತ್ತಿ ಪ್ರಶಸ್ತಿಗಳಿಗೆ ಜಿಲ್ಲೆಯ 6 ಪತ್ರಕರ್ತರನ್ನು ಆಯ್ಕೆ ಮಾಡಲಾಗಿದೆ.

ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ತಮ್ಮ ತಂದೆ–ತಾಯಿಯವರ ಹೆಸರಿನಲ್ಲಿ ಸ್ಥಾಪಿಸಿರುವ ಶ್ರೀಮತಿ ಗೌರಮ್ಮ– ಬಿ.ರಾಚಯ್ಯ ದತ್ತಿ ಪ್ರಶಸ್ತಿಗೆ ಸುದ್ದಿಸಂಜೆ ಪತ್ರಿಕೆಯ ವರದಿಗಾರರಾದ ಎಂ.ಬಸವರಾಜು ಆಯ್ಕೆಯಾಗಿದ್ದಾರೆ.

ಕೊಳ್ಳೇಗಾಲದ ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ.ದತ್ತೇಶ್ ಕುಮಾರ್ ತಮ್ಮ ತಂದೆ ತಾಯಿ ಹೆಸರಿನಲ್ಲಿ ಸ್ಥಾಪಿಸಿರುವ ಲಿಂಗಮ್ಮ ಮತ್ತು ಆರ್. ಸಿದ್ದೇಗೌಡ ದತ್ತಿ ಪ್ರಶಸ್ತಿಗೆ ಹನೂರು ತಾಲ್ಲೂಕಿನ ಆಂದೋಲನ ಪತ್ರಿಕೆ ವರದಿಗಾರ ಎಂ. ಮಹಾದೇಶ ಆಯ್ಕೆಯಾಗಿದ್ದಾರೆ.

ಚಾಮರಾಜನಗರದ ಗುತ್ತಿಗೆದಾರರಾದ ಹೊಸೂರು ಜಗದೀಶ್ ತಮ್ಮ ತಂದೆಯ ಸ್ಮರಣಾರ್ಥ ಸ್ಥಾಪಿಸಿರುವ ಸಿದ್ದಲಿಂಗ ದೇವರು ಹಿರಿಯ ಛಾಯಾಗ್ರಾಹಕ ಪ್ರಶಸ್ತಿಗೆ ಪತ್ರಿಕಾ ಛಾಯಾಗ್ರಾಹಕರಾದ ಬದನಗುಪ್ಪೆ ಮಲ್ಲಣ್ಣ ಆಯ್ಕೆಯಾಗಿದ್ದಾರೆ.

ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಚ್.ಎಂ ಗಣೇಶ್‌ಪ್ರಸಾದ್ ತಮ್ಮ ತಂದೆ ಸ್ಮರಣಾರ್ಥ ಸ್ಥಾಪಿಸಿರುವ ಮಾಜಿ ಸಚಿವ ಎಚ್.ಎಸ್. ಮಹದೇವ ಪ್ರಸಾದ್ ದತ್ತಿ ಪ್ರಶಸ್ತಿಗೆ ಗುಂಡ್ಲುಪೇಟೆ ತಾಲ್ಲೂಕಿನ ವಿಜಯ ಕರ್ನಾಟಕ ಪತ್ರಿಕೆಯ ಬೇಗೂರು ವರದಿಗಾರ ಮಣಿಕಂಠ ಬೇಗೂರು ಆಯ್ಕೆಯಾಗಿದ್ದಾರೆ.

ಮಾಜಿ ಸಚಿವರಾದ ಎನ್.ಮಹೇಶ್ ತಮ್ಮ ಪತ್ನಿ ಹಾಗೂ ಲೇಖಕಿ ಎಚ್.ಕೆ.ವಿಜಯಾ ಅವರ ಸ್ಮರಣಾರ್ಥ ಸ್ಥಾಪಿಸಿರುವ ದತ್ತಿ ಪ್ರಶಸ್ತಿಗೆ ಆರ್.ಮ್ಯಾಕ್ಸ್ ನ್ಯೂಸ್ ವರದಿಗಾರರಾದ ಕೊಳ್ಳೇಗಾಲದ ಸಿ.ಬಸಂತ್ ಕುಮಾರ್ ಆಯ್ಕೆಯಾಗಿದ್ದಾರೆ.

ಉದ್ಯಮಿ ವೃಷಬೇಂದ್ರಪ್ಪ ತಮ್ಮ ತಂದೆ ಸ್ಮರಣಾರ್ಥ ಸ್ಥಾಪಿಸಿರುವ ಹೊನ್ನಹಳ್ಳಿ ಪಟೇಲ್ ಎಚ್.ಎಂ. ಪುಟ್ಟಮಾದಪ್ಪ ದತ್ತಿ ಪ್ರಶಸ್ತಿಗೆ ಗೊರುಕನ ಪತ್ರಿಕೆಯ ಯಳಂದೂರು ತಾಲ್ಲೂಕು ವರದಿಗಾರರಾದ ವೈ.ಎಂ.ಭಾನುಪ್ರಕಾಶ್ ಆಯ್ಕೆಯಾಗಿದ್ದಾರೆ ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಎಸ್. ಲಕ್ಕೂರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಶಸ್ತಿ ಪುರಸ್ಕೃತರನ್ನು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಎಸ್.ಲಕ್ಕೂರು ಹಾಗೂ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

ಪಿಡಿಓ ಅಮಾನತು

## ಹೋರಾಟಕ್ಕೆ ಸಂದ ಜಯ

ಮೈಸೂರು: ಮೈಸೂರು ತಾಲ್ಲೂಕಿನ ಸಿಂಧುವಳ್ಳಿ ಗ್ರಾಪಂನಲ್ಲಿ ನಡೆದಿರುವ ಅವ್ಯವಹಾರ ವಿರುದ್ಧದ ತಮ್ಮ ಹೋರಾಟಕ್ಕೆ ಜಯ ಸಂದಿದೆ, ಹೀಗಾಗಿ ಪಿಡಿಓ ಅಮಾನತಾಗಿದ್ದಾರೆ ಎಂದು ಗ್ರಾಪಂನ ಮಾಜಿ ಉಪಾಧ್ಯಕ್ಷ ಡಾ.ಉಮಾಪತಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಗ್ರಾಪಂನಲ್ಲಿ ವ್ಯಾಪಕ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆದಿತ್ತು. ಕಾನೂನು ಉಲ್ಲಂಘಿಸಿ ಹೈಮಾಸ್ಕ್ ದೀಪ, ಬೀದಿ ದೀಪ, ಲ್ಯಾಪ್‌ಟಾಪ್, ಸಿಸಿ ಟಿವಿ ಕ್ಯಾಮೆರಾ, ಕಸ ವಿಲೇವಾರಿ ಬಕೆಟ್ ಮೊದಲಾದವನ್ನು ಖರೀದಿಸಲಾಗಿತ್ತು. ಈ ಕುರಿತು ತಾವು ತನಿಖೆ ನಡೆಸುವಂತೆ ಜಿಪಂ ಸಿಇಓ ಅವರಿಗೆ ದೂರು ಸಲ್ಲಿಸಿದ್ದೆ. ಅದರಂತೆ ತನಿಖಾ ತಂಡ ರಚಿಸಿ, ಈಗ ಪಿಡಿಓ ಶಿವಕುಮಾರ್ ಅವರನ್ನು ಅಮಾನತುಗೊಳಿಸಲಾಗಿದೆ. ಇದಲ್ಲದೆ, ಗ್ರಾಪಂನಲ್ಲಿ ನಡೆದಿರುವ ಅನೇಕ ಅವ್ಯವಹಾರಗಳಲ್ಲಿ ಇತರರು ಸಹಾ ಶಾಮೀಲಾಗಿರುವ ಶಂಕೆಯಿದ್ದು, ಇವರೆಲ್ಲರ ವಿರುದ್ಧ ಕ್ರಮ ಕೈಗೊಂಡು, ನಡೆದಿರುವ ಸುಮಾರು 1 ಕೋಟಿ ಹಣ ದುರುಪಯೋಗವನ್ನು ಆರೋಪಿಗಳಿಂದ ಗ್ರಾಪಂಗೆ ವಸೂಲಿ ಮಾಡಿಕೊಡಬೇಕೆಂದು ಕೋರುವುದಾಗಿ ತಿಳಿಸಿದರು. ಮಾಜಿ ಸದಸ್ಯರಾದ ನಂಜುಂಡ, ಚಲುವರಾಜು, ರಾಮಲಿಂಗು, ಯುವ ಮುಖಂಡ ಡಿ.ಎನ್. ಮಹೇಶ್ ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿ ಶಿವಕುಮಾರ್ ಸಿಂಧುವಳ್ಳಿ ಇದ್ದರು.



# ಸುತ್ತೂರು ಶ್ರೀಗಳು ದಸರಾ ಉದ್ಘಾಟನೆ ಮಾಡಲಿ



ಚಾಮರಾಜನಗರ, ಈ ಬಾರಿಯ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಯನ್ನು ಸುತ್ತೂರು ಸಂಸ್ಥಾನದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಜೀ ರವರ ಅಮೃತ ಹಸ್ತದಿಂದ ಮಾಡಿಸುವಂತೆ ಕೋರಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರ ಮುಖಾಂತರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಕನ್ನಡ ಮಹಾಸಭಾದ ಅಧ್ಯಕ್ಷ ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಪದಾಧಿಕಾರಿಗಳು ಜಿಲ್ಲಾಧಿಕಾರಿ ಶ್ರೀರೂಪ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಮೈಸೂರು ವಿಶ್ವವಿಖ್ಯಾತ ದಸರಾ ಮಹೋತ್ಸವಕ್ಕೆ ಪ್ರಪಂಚದ ಮೂಲೆ ಮೂಲೆಗಳಿಂಲೂ ಲಕ್ಷಾಂತರ ಜನರು ಆಗಮಿಸುತ್ತಾರೆ ಮತ್ತು ಈ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಈ ಹಿಂದೆ ನಮ್ಮ ದೇಶದ ಅತ್ಯುನ್ನತ ವ್ಯಕ್ತಿಗಳು ಮತ್ತು ನಮ್ಮ ನಾಡಿನ ಅತ್ಯುನ್ನತ ವ್ಯಕ್ತಿಗಳು ಉದ್ಘಾಟಿಸಿ ಅದಕ್ಕೆ ಒಂದು ಮೆರಗನ್ನು ತಂದಿದ್ದಾರೆ ಮತ್ತು ಈ ಹಿಂದೆ ಈ ದಸರಾ ಉದ್ಘಾಟನೆಯನ್ನು ಸಾಮಾನ್ಯ ರೈತರೊಬ್ಬರು ಉದ್ಘಾಟನೆ ಮಾಡಿರುವುದು ಇತಿಹಾಸವೇ ಸರಿ. ಅದರಂತೆಯೆ ಈ ಸಾರಿ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಯನ್ನು ಬಹಳಷ್ಟು ವರ್ಷಗಳಿಂದ ಈ ನಾಡಿನ ಸರ್ವತೋನ್ಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ ಮತ್ತು ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಇಡೀ ದೇಶದಲ್ಲೇ ಇತಿಹಾಸವನ್ನು ನಿರ್ಮಿಸಿ ನಮ್ಮ ರಾಜ್ಯ, ದೇಶ ಹಾಗೂ ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದರ ಮೂಲಕ ಕೋಟ್ಯಾಂತರ ವಿದ್ಯಾರ್ಥಿಗಳಿಗೆ ಭವಿಷ್ಯವನ್ನು ನಿರ್ಮಿಸಿರುವ ಮತ್ತು ಅನ್ನದಾಸೋಹ, ಆರೋಗ್ಯ, ಇನ್ನಿತರ ಸಮಾಜಮುಖಿ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸದಾ ಜನರೊಡನೆ ಇರುವ ಸುತ್ತೂರು ಸಂಸ್ಥಾನದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಜಿಗಳವರ ಅಮೃತ ಹಸ್ತದಿಂದ ಉದ್ಘಾಟನೆ ಮಾಡಿಸಬೇಕಾಗಿ ನಾಡಿನ ಸಮಸ್ತ ಜನತೆಯ ಪರವಾಗಿ ಮುಖ್ಯಮಂತ್ರಿ ಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮನವಿ ಮಾಡಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಪಣ್ಯದಹುಂಡಿ ರಾಜು, ಕೃಷ್ಣಕುಮಾರ್, ಶಿವಣ್ಣ ಹೊಸೂರು, ರವಿಚಂದ್ರಪ್ರಸಾದ್ ಕಹಳೆ, ಆಟೋ ಲಿಂಗರಾಜು, ಅರುಣಕುಮಾರ್ ಗೌಡ, ಸುಬ್ಬಯ್ಯ, ಮಹೇಶ್, ಅಮಚವಾಡಿ ರಾಜು, ತಾಂಡವಮೂರ್ತಿ, ವೀರಭದ್ರ, ರಾಚಪ್ಪ, ಚಾ.ಸಿ.ಸಿದ್ದರಾಜು, ರಂಗಸ್ವಾಮಿ ಇತರರು ಹಾಜರಿದ್ದರು.

# ಮತದಾರರ ಪಟ್ಟಿ ಜಾಗೃತಿಯಿರಲಿ



ಮೈಸೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಅರ್ಜಿ ಭರ್ತಿ ಮಾಡಲು ಭಯಬೇಡ, ಜಾಗೃತಿಯಿರಲಿ ಎಂದು ಕಾರ್ಯನಿರ್ವಾಹಕ ಅಧಿಕಾರಿ ಡಿ.ಬಿ.ಸುನಿಲ್ ಕುಮಾರ್ ತಿಳಿಸಿದರು.

ಸೋಮವಾರ ತಾಲ್ಲೂಕು ಪಂಚಾಯಿತಿ ತಾಲ್ಲೂಕು ಸ್ವೀಪ್ ಸಮಿತಿವತಿಯಿಂದ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಆಯೋಜಿಸಿದ್ದ ಸ್ವ-ಸಹಾಯ ಸಂಘದ ಸದಸ್ಯರಿಂದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಜಾಗೃತಿ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದರು. ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಅರ್ಜಿ ಭರ್ತಿ ಸಂಬಂಧ ಅನೇಕರಲ್ಲಿ ಗೊಂದಲವುಂಟಾಗಿ ಭಯಪಟ್ಟಿದ್ದಾರೆ. ಆ ಭಯವನ್ನು ಹೋಗಲಾಡಿಸುವ ಉದ್ದೇಶದಿಂದ ಸ್ವ-ಸಹಾಯ ಸಂಘದ ಮಹಿಳೆಯರಿಗೆ ವಿಶೇಷವಾಗಿ ಈ ದಿನ ತರಬೇತಿ ನೀಡಲಾಗಿದೆ. ಮಹಿಳೆಯರು ಮಾಹಿತಿ ಪಡೆದುಕೊಂಡರೆ ಇಡೀ ಕುಟುಂಬವೇ ಮತದಾರರ ಪಟ್ಟಿಯಿಂದ ಹೊರಗುಳಿಯುವುದರಿಂದ ತಪ್ಪುತ್ತದೆ ಎಂದರು.

ತಹಶೀಲ್ದಾರ್ ನಿಸರ್ಗ ಪ್ರಿಯ ಮಾತನಾಡಿ, ಎಸ್ಐಆರ್ ಸಂಬಂಧಿಸಿದಂತೆ ಸಂಪೂರ್ಣವಾಗಿ ತಿಳಿದು ಕೊಳ್ಳುವ ಮೂಲಕ ನಿಮ್ಮ ಸ್ವ-ಸಹಾಯ ಸಂಘದ ಸದಸ್ಯರಿಗೂ ಹಾಗೂ ನಿಮ್ಮ ಸುತ್ತಮುತ್ತಲಿನ ಜನರಿಗೂ ಈ ಕುರಿತು ಜಾಗೃತಿ ಮೂಡಿಸಿ ಎಂದು ಸಲಹೆ ನೀಡಿದರು. ಬೆಟ್ಟದಪುರ ಸರ್ಕಾರಿ ಪದವಿ ಕಾಲೇಜು ಪ್ರಾಧ್ಯಾಪಕ ಶಾಕೀರ್ ಮಾತನಾಡಿದರು. ಜಾಥಾದಲ್ಲಿ ಎನ್ಆರ್ ಎಲ್ ಎಂ ವಲಯ ಮೇಲ್ವಿಚಾರಕಿ ರೋಸಿ, ಐಇಸಿ ಸಂಯೋಜಕ ರವಿಕುಮಾರ್ ಇತರರು ಭಾಗವಹಿಸಿದ್ದರು.

## ಚಾಮರಾಜನಗರ ಕ್ಷೇತ್ರದ ಅಭಿವೃದ್ಧಿಗಾಗಿ
# 3 ವರ್ಷಗಳ ಅವಧಿಯಲ್ಲಿ 2 ಸಾವಿರಕ್ಕೂ ಹೆಚ್ಚು ಕೋಟಿ ವಿನಿಯೋಗ
**ಸಿ.ಪುಟ್ಟರಂಗಶೆಟ್ಟಿ ಹೇಳಿಕೆ**
**ಪತ್ರಕರ್ತರ ಸಂವಾದ ಕಾರ್ಯಕ್ರಮದಲ್ಲಿ ಮಾಹಿತಿ**



ಚಾಮರಾಜನಗರ, ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗಾಗಿ 3 ವರ್ಷಗಳ ಅವಧಿಯಲ್ಲಿ 2 ಸಾವಿರಕ್ಕೂ ಹೆಚ್ಚು ಕೋಟಿ ವಿನಿಯೋಗಿಸಲಾಗಿದ್ದು, ಕ್ಷೇತ್ರದ ಸಮಗ್ರ ಅಭಿವೃದ್ಧಿ ಗೆ ಒತ್ತು ನೀಡಲಾಗಿದೆ ಎಂದು ಎಂಎಸ್ಐಎಲ್ ಅಧ್ಯಕ್ಷ, ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸಂಘದ ವತಿಯಿಂದ ಅಯೋಜಿಸಿದ ಪತ್ರಕರ್ತರ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕ್ಷೇತ್ರದಲ್ಲಿ ವಿವಿಧ ಇಲಾಖೆಗಳಿಂದ ಮೂರು ವರ್ಷಗಳ ಅವಧಿಯಲ್ಲಿ ಪರಿಶಿಷ್ಠ ವರ್ಗಗಳ ಕಲ್ಯಾಣ ಇಲಾಖೆಯಿಂದ 20 ಕೋಟಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ 58.71 ಕೋಟಿ,ಕಾರ್ಮಿಕ ಇಲಾಖೆಯಿಂದ 40.1 ಕೋಟಿ, ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯಿಂದ 20.93 ಕೋಟಿ, ಅರಣ್ಯ ಇಲಾಖೆ 42.58 ಕೋಟಿ,

- **ಸಣ್ಣ ನೀರಾವರಿ ಇಲಾಖೆ ಯಿಂದ 19.55 ಕೋಟಿ, ಸಣ್ಣ**
- **ಸಮಾಜ ಕಲ್ಯಾಣ ಇಲಾಖೆಯಿಂದ 19.46 ಕೋಟಿ,**
- **ಕಾವೇರಿ ನಿಗಮದಿಂದ 783.85 ಕೋಟಿ,**
- **ಸೆಸ್ಕಾಂ 32.42 ಕೋಟಿ.**
- **ಕೆಪಿಟಿಸಿಎಲ್ ನಿಂದ 38.65 ಕೋಟಿ,**
- **ಕೆಐಎಡಿಬಿ ಯಿಂದ 219.15 ಕೋಟಿ,**
- **ಅಂಗವಿಕಲರ ಕಲ್ಯಾಣ ಇಲಾಖೆಯಿಂದ 211 ಕೋಟಿ**

ಮಲೆನಾಡು ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 11.5 ಕೋಟಿ ಸೇರಿ ಒಟ್ಟು ಎರಡು ಸಾವಿರದ ಹನ್ನೆರಡು ಕೋಟಿ ಅರವತ್ತು ಮೂರು ಲಕ್ಷದ ಹದಿನೆಂಟು ಸಾವಿರ ವೆಚ್ಚ ಮಾಡಲಾಗಿದೆ ಎಂದರು. ಅಲ್ಲದೆ ಕ್ಷೇತ್ರದ ವ್ಯಾಪ್ತಿಯ ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರು, ಸಮುದಾಯ ಭವನಗಳು, ಸಿಮೆಂಟ್ ರಸ್ತೆ, ಚರಂಡಿ, ಗ್ರಾಮಗಳ ಗ್ರಾಮಗಳ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ, ನಿರ್ಮಾಣ, ರಸ್ತೆ ಅಭಿವೃದ್ಧಿ,, ಶಾಲಾ, ಕಾಲೇಜು, ಆಸ್ಪತ್ರೆ, ಅಂಗನವಾಡಿಗಳ ಅಭಿವೃದ್ಧಿಗೆ ಒತ್ತು ನೀಡಿ ಮಾದರಿ ಕ್ಷೇತ್ರವಾಗಿ ಮಾಡಲು ಶ್ರಮಿಸಿದ್ದೇನೆ ಅದೇ ರೀತಿ ನಗರದ ನಗರಸಭಾ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ, ಅಗಲೀಕರಣ, ಮಳೆನೀರು ಹಾದು ಹೋಗುವ ಕಾಲುವೆಗಳ ಅಭಿವೃದ್ಧಿ, ಒಳ ಚರಂಡಿ ನಿರ್ಮಾಣ, ಹೊಸ ಬಡಾವಣೆ ಗಳಿಗೆ ಯುಜಿಡಿ, ಕುಡಿಯುವ ನೀರು, ರಸ್ತೆ ಅಭಿವೃದ್ಧಿ ಗೆ ಅನುದಾನ ನೀಡಿದ್ದರೂ ಸಹ ಸಾರ್ವಜನಿಕ ಅಸಹಕಾರ, ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗಿರುವುದರಿಂದ ಬಿ.ರಾಚಯ್ಯ, ನ್ಯಾಯಾಲಯ ರಸ್ತೆ, ಕರಿನಂಜನಪುರ ಮಾರ್ಗದ ರಸ್ತೆ ಸೇರಿದಂತೆ ಅನೇಕ ಕಡೆ ರಸ್ತೆ ಅಭಿವೃದ್ಧಿ ತೊಡಕಾಗಿದೆ ಇದರಿಂದ ಪಟ್ಟಣವನ್ನು ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಮಾಡಲು ಸಾಧ್ಯವಾಗುತ್ತಿಲ್ಲ ಎಂದರು. ಸಂವಾದದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಎಸ್.ಲಕ್ಕೂರು, ಪತ್ರಕರ್ತರು ಭಾಗವಹಿಸಿದ್ದರು.

# ಜೂಜು ಅಡ್ಡೆ ಮೇಲೆ ದಾಳಿ

ಗುಂಡ್ಲುಪೇಟೆ: ತಾಲೂಕಿನ ಕೂತನೂರು ಗ್ರಾಮದ ಮಲ್ಲಯ್ಯನಪುರ ಗುಡ್ಡದ ಬಳಿ ನಡೆಯುತ್ತಿದ್ದ ಅಕ್ರಮ ಜೂಜು ಅಡ್ಡೆ ಮೇಲೆ ಗುಂಡ್ಲುಪೇಟೆ ಪೊಲೀಸರು ದಾಳಿ ನಡೆಸಿ ಐವರು ಆರೋಪಿಗಳನ್ನು ಬಂಧಿಸಿ, ಪಣಕ್ಕಿಟ್ಟಿದ್ದ ?15,200 ನಗದನ್ನು ವಶಪಡಿಸಿಕೊಂಡಿದ್ದಾರೆ.

ಅಕ್ರಮ ಜೂಜಾಟ ನಡೆಯುತ್ತಿರುವ ಕುರಿತು ದೊರೆತ ಖಚಿತ ಮಾಹಿತಿ ಮೇರೆಗೆ ಪೊಲೀಸ್ ಇನ್ಸ್ಪೆಕ್ಟರ್ ಜಯಕುಮಾರ್ ನೇತೃತ್ವದ ತಂಡ ದಾಳಿ ನಡೆಸಿತು. ಕಾರ್ಯಾಚರಣೆಯಲ್ಲಿ ಬಂಗಾರನಾಯಕ, ಮಾರಶೆಟ್ಟಿ, ಸ್ವಾಮಿ, ರವಿ ಹಾಗೂ ಸಾಧಿಕ್ ಅವರನ್ನು ಬಂಧಿಸಲಾಯಿತು. ಬಂಧಿತರಿಂದ ಜೂಜಾಟಕ್ಕೆ ಬಳಸಲಾಗಿದ್ದ ನಗದು ಸೇರಿದಂತೆ ಇತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ. ಕಾರ್ಯಾಚರಣೆಯಲ್ಲಿ ಪೊಲೀಸ್ ಪೇದೆ ನಟೇಶ್ ಸೇರಿದಂತೆ ಪೊಲೀಸ್ ಸಿಬ್ಬಂದಿ ಪಾಲ್ಗೊಂಡಿದ್ದರು

# ರಾಜ್ಯಸರ್ಕಾರ ದಿವಾಳಿಯಾಗಿದೆ
## ವಿಪಕ್ಷ ನಾಯಕ ಆರ್.ಅಶೋಕ್ ಆರೋಪ | ಮತದಾರರ ಪಟ್ಟಿ ಪರಿಷ್ಕರಣೆ ಹೈಜಾಕ್ ಹುನ್ನಾರ



ಚಾಮರಾಜನಗರ: ರಾಜ್ಯ ಕಾಂಗ್ರೆಸ್ ಸರ್ಕಾರವು ಮತದಾರರ ಪಟ್ಟಿ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಯನ್ನು ಹೈಜಾಕ್ ಮಾಡಲು ಹುನ್ನಾರ ನಡೆಸುತ್ತಿದೆ ಎಂದು ವಿಧಾನಸಭೆಯ ವಿಪಕ್ಷ ನಾಯಕ ಆರ್. ಅಶೋಕ್ ಅವರು ಗಂಭೀರವಾಗಿ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಮತದಾರರ ಪರಿಷ್ಕರಣೆಯಲ್ಲಿ ಭಾರತೀಯರಿಗೆ ಮಾತ್ರ ಮತದಾನದ ಹಕ್ಕು ಸಿಗಬೇಕೆಂಬುದು ಬಿಜೆಪಿಯ ಉದ್ದೇಶವಾಗಿದೆ. ಆದರೆ, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳೇ ಕಳೆದಿದ್ದರೂ, ಮೊದಲ ಬಾರಿಗೆ ಕರ್ನಾಟಕ ಸರ್ಕಾರ ಶಾಶ್ವತ ವಾಸಸ್ಥಳ ದೃಢೀಕರಣ ಪತ್ರವನ್ನು ನೀಡಲು ಮುಂದಾಗಿದೆ. ಇಷ್ಟು ದಿನ ನಾವೆಲ್ಲರೂ ಭಾರತದಲ್ಲಿ ಶಾಶ್ವತವಾಗಿರಲಿಲ್ಲವೇ? ಎಂದು ಪ್ರಶ್ನಿಸಿದ ಅವರು, ಈ ದೃಢೀಕರಣ ಪತ್ರ ನೀಡುವ ಮೂಲಕ ಮತದಾರರ ಪಟ್ಟಿ ಪರಿಷ್ಕರಣೆಯನ್ನು ಕಾಂಗ್ರೆಸ್ ತನ್ನತ್ತ ಹೈಜಾಕ್ ಮಾಡುತ್ತಿದೆ ಎಂದು ಕಿಡಿಕಾರಿದರು.

**ಡಿ.ಕೆ.ಶಿವಕುಮಾರ್‌ಗೆ ತಾವೇ ಹಿಂದುನೋ ಅಲ್ಲವೋ ಎಂಬ ಅನುಮಾನ**

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ವಾಗ್ದಾಳಿ ನಡೆಸಿದ ಅಶೋಕ್, ಡಿಕೆಶಿಗೆ ತಾನು ಹಿಂದುನೋ ಅಲ್ಲವೋ ಎಂಬ ಅನುಮಾನ ಶುರುವಾಗಿದೆ. ದೇವಸ್ಥಾನಗಳಿಗೆ ಹೋಗುವುದು, ಹಣೆಗೆ ಪಟ್ಟಿ ಎಳೆದುಕೊಳ್ಳುವುದು, ಸ್ವಾಮೀಜಿಗಳ ಕಾಲಿಗೆ ಬೀಳುವುದನ್ನು ಕೇವಲ ತೋರಿಕೆಗಾಗಿ ಮಾಡುತ್ತಿದ್ದಾರೆ. ಮೊದಲು ಇವೆಲ್ಲವನ್ನು ಬಿಟ್ಟು ರೈತರ ಸಂಕಷ್ಟಕ್ಕೆ ಸ್ಪಂದಿಸುವಂತೆ ತಾಕೀತು ಮಾಡಿದರು. ಸಿದ್ದರಾಮಯ್ಯ ಮೂರು ವರ್ಷ ಟೆಂಡರ್ ಸಿಎಂ ಆಗಿದ್ದರು, ಈಗ ಡಿಕೆಶಿ ಟೆಂಡರ್ ಸಿಎಂ ಆಗಿದ್ದಾರೆ. ಇನ್ನೂ ಸಚಿವ ಸಂಪುಟವೇ ಸರಿಯಾಗಿ ರಚನೆಯಾಗಿಲ್ಲ ಎಂದು ವ್ಯಂಗ್ಯವಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ. ಎಸ್. ನಿರಂಜನ್ ಕುಮಾರ್, ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಮಾಜಿ ವಿಧಾನ ಪರಿಷತ್ ಸದಸ್ಯ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಉಸ್ತುವಾರಿ ಕಾರ್ಯದರ್ಶಿ ಲಕ್ಷ್ಮೀ, ಜಿಲ್ಲಾ ಮಾಜಿ ಅಧ್ಯಕ್ಷ ನಾರಾಯಣ ಪ್ರಸಾದ್ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಉಪಸ್ಥಿತರಿದ್ದರು.

### ವೋಟ್ ಬ್ಯಾಂಕ್ ರಾಜಕಾರಣ, ಅಕ್ರಮ ವಲಸಿಗರ ಬಗ್ಗೆ ಆತಂಕ

ಎಸ್ಐಆರ್ ಪ್ರಕ್ರಿಯೆಯ ಉದ್ದೇಶ ದೇಶದ ನೈಜ ಪ್ರಜೆಗಳಿಗೆ ಮತದಾನದ ಹಕ್ಕು ನೀಡುವುದಾಗಿದೆ. ಆದರೆ, ಸಮೀಕ್ಷೆಗಳ ಪ್ರಕಾರ ಭಾರತದಲ್ಲಿ 2 ಕೋಟಿಗೂ ಹೆಚ್ಚು ಹಾಗೂ ಕರ್ನಾಟಕದಲ್ಲಿ 20-30 ಲಕ್ಷದಷ್ಟು ಬಾಂಗ್ಲಾದೇಶಿ ಅಕ್ರಮ ವಲಸಿಗರಿದ್ದಾರೆ. ಇವರಿಗೆಲ್ಲಾ ಶಾಶ್ವತ ವಾಸಸ್ಥಳ ದೃಢೀಕರಣ ನೀಡಿ ಪರ್ಮನೆಂಟ್ ಮಾಡುತ್ತೀರಾ? ರೇಷನ್ ಕಾರ್ಡ್, ಹೆಲ್ತ್ ಕಾರ್ಡ್, ಆಶ್ರಯ ಹಾಗೂ ಅಂಬೇಡ್ಕರ್ ಮನೆ ಎಲ್ಲವನ್ನೂ ನೀಡಿದ ಮೇಲೆ ಅವರನ್ನು ಇಲ್ಲಿ ಶಾಶ್ವತವಾಗಿ ಉಳಿಸಿಕೊಳ್ಳುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ವೋಟ್ ಬ್ಯಾಂಕ್ಗೋಸ್ಕರ ಅಲ್ಪಸಂಖ್ಯಾತರನ್ನು ಓಲೈಸುವ ದೊಡ್ಡ ಹುನ್ನಾರ ಇದಾಗಿದೆ ಎಂದು ಅಶೋಕ್ ಆಕ್ರೋಶ ವ್ಯಕ್ತಪಡಿಸಿದರು. ದೇಶದ ಪ್ರಜೆಯನ್ನು ಗುರುತಿಸುವ ಮತ್ತು ವಿದೇಶಿಯರನ್ನು ಹೊರಹಾಕುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರವಿದ್ದು, ರಾಜ್ಯ ಸರ್ಕಾರಕ್ಕೆ ಈ ಅಧಿಕಾರವಿಲ್ಲ ಎಂದು ಸ್ಪಷ್ಟಪಡಿಸಿದರು.

### ಬರದ ಬಗ್ಗೆ ಸಿಎಂ ನಿರ್ಲಕ್ಷ್ಯ

ರಾಜ್ಯದಲ್ಲಿ ಭೀಕರ ಬರಗಾಲವಿದ್ದು, ಮಂಡ್ಯ ಜಿಲ್ಲೆಯಲ್ಲಿ ಹಸಿರಾಗಿದ್ದ ಕಬ್ಬಿನ ಫಸಲು ಒಣಗುತ್ತಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಇದರ ಬಗ್ಗೆ ಯಾವುದೇ ತಲೆಬಿಸಿಯಿಲ್ಲ. ಸಭೆ ನಡೆಸಿ ರಾಜ್ಯದಲ್ಲಿ ಬರ ಘೋಷಣೆ ಮಾಡಬೇಕಿದ್ದ ಸರ್ಕಾರ, ಅದನ್ನು ಮಾಡದೆ ಕೇಂದ್ರದಿಂದ 10 ಸಾವಿರ ಕೋಟಿ ರೂ. ಪರಿಹಾರ ಕೇಳುತ್ತಿರುವುದು ಬೇಜವಾಬ್ದಾರಿತನವಾಗಿದೆ. ಮುಖ್ಯಮಂತ್ರಿಗಳಿಂದ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳಾಗುತ್ತಿಲ್ಲ. ಬರೀ ಫೋಟೋ ತೆಗೆಸಿಕೊಳ್ಳುವುದು ಹಾಗೂ ಶೋ ಮಾಡುವುದಷ್ಟೇ ಅವರ ಕೆಲಸವಾಗಿದೆ ಎಂದು ತರಾಟೆಗೆ ತೆಗೆದುಕೊಂಡರು.

ಸುಮಾರು 30 ಲಕ್ಷ ರೇಷನ್ ಕಾರ್ಡ್ಗಳನ್ನು ರದ್ದುಪಡಿಸುತ್ತಿರುವುದು ಹಾಗೂ 20 ಲಕ್ಷಕ್ಕೂ ಹೆಚ್ಚು ಜನರ ಪಿಂಚಣಿ ನಿಲ್ಲಿಸಿರುವುದು ಜನಪರ ಆಡಳಿತವೇ ಎಂದು ಅವರು ಪ್ರಶ್ನಿಸಿದರು.

### ಆರ್ಥಿಕ ದಿವಾಳಿ-ಗ್ಯಾರಂಟಿ ಯೋಜನೆಗಳ ಟೀಕೆ

ರಾಜ್ಯ ಕಾಂಗ್ರೆಸ್ ಸರ್ಕಾರವು ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ರಾಜ್ಯದ ಜನತೆಗೆ ಮಂಕು ಬೂದಿ ಎರಚುವ ಕೆಲಸ ಮಾಡಿದೆ. ಸರ್ಕಾರದ ಆರ್ಥಿಕ ವ್ಯವಸ್ಥೆ ಸಂಪೂರ್ಣವಾಗಿ ಹಳ್ಳ ಹಿಡಿದಿದ್ದು, ರಾಜ್ಯ ಸರ್ಕಾರ ದಿವಾಳಿಯಾಗಿದೆ. ಈ ದೋಖಾ ಸರ್ಕಾರ ಹೆಚ್ಚು ದಿನ ಉಳಿಯುವುದಿಲ್ಲ ಎಂದು ಭವಿಷ್ಯ ನುಡಿದರು.

# ಯಶಸ್ಸಿಗೆ ಶಿಸ್ತು ಸಹ ಮುಖ್ಯ

ಮೈಸೂರು: ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ನಿರಂತರ ಪ್ರಯತ್ನದ ಜೊತೆಗೆ ತಾಳ್ಮೆ, ಶಿಸ್ತು ಮತ್ತು ಸಂಯಮ ಪ್ರಜ್ಞೆ ಅತ್ಯಗತ್ಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಹೇಳಿದರು.

ನಗರದ ನಜರ್ಬಾದ್‌ನ ಪೀಪಲ್ಸ್ ಪಾರ್ಕ್ ಆವರಣದಲ್ಲಿರುವ ನಗರ ಕೇಂದ್ರ ಗ್ರಂಥಾಲಂ ಸಭಾಂಗಣದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆವತಿಯಿಂದ ಮಂಗಳವಾರ ಆಯೋಜಿಸಿದ್ದ ಅಣಕು ಪರೀಕ್ಷೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಪ್ರತಿಯೊಬ್ಬರೂ ಮೊದಲ ಪ್ರಯತ್ನದಲ್ಲೇ ಯಶಸ್ಸು ಸಾಧಿಸುವುದಿಲ್ಲ. ಸಾಮರ್ಥ್ಯದ ಜೊತೆಗೆ ಓದುವ ಛಲ ಹಾಗೂ ನಿರಂತರ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಇದಕ್ಕೆ ಸೂಕ್ತ ಮಾರ್ಗದರ್ಶನವೂ ಅಗತ್ಯ ಎಂದರು. ಆದಾಯ ತೆರಿಗೆ ಇಲಾಖೆಯ ನಿವೃತ್ತ ಆಯುಕ್ತ ರಮೇಶ್ ನರಸಯ್ಯ ಮಾತನಾಡಿದರು. ಕೇಂದ್ರ ಗ್ರಂಥಾಲಯ ಇಲಾಖೆ ಉಪ ನಿರ್ದೇಶಕ ಮಂಜುನಾಥ್ ಸೇರಿ ಇತರರು ಹಾಜರಿದ್ದರು



# ಎಸ್ಐಆರ್ ಜಾಗೃತಿ ಮೂಡಿಸಲು ಜಾಥಾ



ಎಚ್.ಡಿ.ಕೋಟೆ: ಮತದಾರರ ಪಟ್ಟಿಯನ್ನು ನಿಖರ ಹಾಗೂ ಸಮಗ್ರಗೊಳಿಸುವ ಉದ್ದೇಶದಿಂದ ಭಾರತ ಚುನಾವಣಾ ಆಯೋಗ ಹಮ್ಮಿಕೊಂಡಿರುವ ಎಸ್.ಐ. ಆರ್ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪಟ್ಟಣದಲ್ಲಿ ಆದಿಚುಂಚನಗಿರಿ ಹಾಗೂ ಸೇಂಟ್ ಮೇರಿಸ್ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಜಾಗೃತಿ ಜಾಥಾ ನಡೆಯಿತು.

ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ರವಿಚಂದ್ರ, 18 ವರ್ಷ ಪೂರ್ಣಗೊಂಡಿರುವ ಎಲ್ಲ ಯುವಕ, ಯುವತಿಯರು ಕಡ್ಡಾಯವಾಗಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಮನೆಗೆ ಭೇಟಿ ನೀಡುವ ಅಧಿಕಾರಿಗಳಿಗೆ ಸೂಕ್ತ ದಾಖಲೆಗಳನ್ನು ನೀಡಿ ಅವರಿಗೆ ಸಹಕರಿಸಬೇಕು. ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಯಶಸ್ವಿಯಾಗಲು ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ. ಪಟ್ಟಣ ಪ್ರದೇಶಗಳಲ್ಲಿ ಮಾತ್ರವಲ್ಲ, ತಾಲೂಕಿನ 26 ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲೂ ಮನೆ ಮನೆಗೆ ಭೇಟಿ ನೀಡಿ ಎಸ್ಐಆರ್ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ಹೇಳಿದರು.

ನಮ್ಮ ತಾಲೂಕಿನಲ್ಲಿ ಸರಿಸುಮಾರು 160 ಹಾಡಿಗಳಿವೆ. ಕೆಲವರು ಜೀವನೋಪಾಯಕ್ಕಾಗಿ ಕೊಡಗು ಸೇರಿದಂತೆ ಹೊರ ಜಿಲ್ಲೆಗಳಿಗೆ ಹೋಗಿರುತ್ತಾರೆ. ಹೀಗಾಗಿ ಮತದಾರರ ಪಟ್ಟಿಯಿಂದ ಯಾರ ಹೆಸರು ಕೂಡ ಕೈಬಿಡಬಾರದು ಎಂಬ ಸದ್ದುದ್ದೇಶದಿಂದ ಬಿಎಲ್ ಒ ಗಳ ಜೊತೆಗೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು , ಡೇಟಾ ಅಪರೇಟರ್ಸ್ ಹಾಗೂ ನಮ್ಮ ಇಲಾಖೆಯ ಸಿಬ್ಬಂದಿಯನ್ನು ನಿಯೋಜನೆ ಮಾಡಿದ್ದೇವೆ. ಹೀಗಾಗಿ ಎಲ್ಲೂ ಕೂಡ ಇಲ್ಲಿಯವರೆಗೆ ಗೊಂದಲ ಕಂಡುಬಂದಿಲ್ಲ. ಎಲ್ಲವು ಕೂಡ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿದೆ. ಬಲಿಷ್ಠ ಪ್ರಜಾಪ್ರಭುತ್ವಕ್ಕೆ ಎಸ್ ಐ ಆರ್ ಅಡಿಗಲ್ಲು ಆಗಿರುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕೂಡ ಸಹಕಾರ ನೀಡುತ್ತಿದ್ದಾರೆ ಎಂದರು. ಜಾಥಾದಲ್ಲಿ ತುಂಬಸೋಗೆ ಗ್ರಾಮ ಪಂಚಾಯತ್ ಪಿಡಿಒ ರವಿ, ಶಿಕ್ಷಕರಾದ ರಾಜೇಗೌಡ, ರಾಜುಕುಮಾರ್, ಕೈಶರ್ ಪಾಷಾ, ಶಿವಕುಮಾರ್, ಶ್ರುತಿ , ವಾರ್ಡನ್ ಸುವರ್ಣಾ, ಕಂಪ್ಯೂಟರ್ ಆಪರೇಟರ್ ಮಹೇಶ್ ಸೇರಿದಂತೆ ವಿವಿಧ ಶಾಲೆಗಳ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

## ಬಿಡದಿಯಲ್ಲಿ ಪ್ರತಿಭಟನಾನಿರತರ ಮೇಲೆ ಪೊಲೀಸ್ ದೌರ್ಜನ್ಯ ಖಂಡಿಸಿ ಪ್ರತಿಭಟನೆ
# ಬಿಡದಿ ಟೌನ್‌ಶಿಪ್ ಯೋಜನೆ ಕೈಬಿಡಲು ಮಹಾದೇವಸ್ವಾಮಿ ಆಗ್ರಹ




ಚಾಮರಾಜನಗರ, ಬಿಡದಿ ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿಯ ಶಾಂತಿಯುತ ಪ್ರತಿಭಟನಾನಿರತರ ಮೇಲೆ ಪೊಲೀಸ್ ದೌರ್ಜನ್ಯ, ದಬ್ಬಾಳಿಕೆ ಹಾಗೂ ಲಾಠಿ ಪ್ರಹಾರ ಖಂಡಿಸಿ. ರಾಜ್ಯ ಕಬ್ಬು ಬೆಳೆಗಾರ ಸಂಘದ ಜಿಲ್ಲಾ ಪದಾಧಿಕಾರಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರ ಉದ್ಯಾನವನ ಮುಂಭಾಗದಲ್ಲಿ ಜಯಾಯಿಸಿದ ಪ್ರತಿಭಟನಾನಿರತರು ಅಲ್ಲಿಂದ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿ, ರಾಜ್ಯ ಸರ್ಕಾರ ವಿರುದ್ಧ ಅಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ರಾಜ್ಯ ಕಬ್ಬು ಬೆಳೆಗಾರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಮೂಕಳ್ಳಿಮಹದೇವಸ್ವಾಮಿ ಮಾತನಾಡಿ, ಸೋಮವಾರ ರಾಮನಗರ ಜಿಲ್ಲೆಯ ಬಿಡದಿ ಹೋಬಳಿಯ ಬೈರಮಂಗಲ, ಮಂಡಲಹಳ್ಳಿ ಸೇರಿದಂತೆ ವಿವಿಧ ಹಳ್ಳಿಗಳಲ್ಲಿ ಉದ್ದೇಶಿತ ಹೈಟೆಕ್ 'ಐಟಿ/ಎಐ ಟೌನ್‌ಶಿಪ್ ಯೋಜನೆಗಾಗಿ ರೈತರ ಫಲವತ್ತಾದ ಕೃಷಿ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಮುಂದಾಗಿರುವುದನ್ನು ವಿರೋಧಿಸಿ ಬಿಡದಿ ಭೂ ಸ್ವಾಧೀನ ಹೋರಾಟ ಸಮಿತಿಯ ನೇತೃತ್ವದಲ್ಲಿ ಕಳೆದ 460ಕ್ಕೂಹೆಚ್ಚು ದಿನಗಳಿ ನಿರಂತರವಾಗಿ ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸಲಾಗುತ್ತಿದೆ. ನಿನ್ನೆ ಜಂಟಿ ಅಳತೆ ಸಮಿತಿಯ ಕಂದಾಯ ಅಧಿಕಾರಿಗಳು ರೈತರ ಅನುಮತಿ ಪಡೆಯದೇ ಏಕಪಕ್ಷೀಯವಾಗಿ ಮಂಡಲಹಳ್ಳಿ ಗ್ರಾಮದಲ್ಲಿ ಭೂ ಸರ್ವೇ ಕಾರ್ಯ ನಡೆಸಲು ಬಂದಾಗ ಪ್ರತಿಭಟನಾ ನಿರತ ರೈತರು, ತಮ್ಮ ಜೀವನಾಧಾರವಾಗಿರುವ ಜಮೀನನ್ನು ಉಳಿಸಿಕೊ ಉಳಿಸಿಕೊಳ್ಳಲು ಮಹಿಳೆಯರು ಮತ್ತು ಹಿರಿಯ ರೈತರು ಸೇರಿದಂತೆ ನೂರಾರು ಹೋರಾಟಗಾರರು ಅಧಿಕಾರಿಗಳ ವಾಹನವನ್ನು ತಡೆದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.ಈ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಜಮಾಯಿಸಿದ್ದ ಪೊಲೀಸ್ ಸಿಬ್ಬಂದಿಯು ಪ್ರತಿಭಟನಾ ನಿರತರನ್ನು ಚದುರಿಸುವ ನೆಪದಲ್ಲಿ ಲಾಟಿಚಾರ್ಜ್ ಮಾಡಿ ವಯೋವೃದ್ಧರು ಮತ್ತು ಮಹಿಳೆಯರ ಮೇಲೂ ದಯೆಯಿಲ್ಲದೆ ಬಲಪ್ರಯೋಗ ಹಾಗೂ ಲಾಠಿ ಪ್ರಹಾರ ನಡೆಸಿದ್ದಾರೆ. ಪೊಲೀಸರ ಈ ದೌರ್ಜನ್ಯ, ದಬ್ಬಾಳಿಕೆ ಖಂಡನೀಯ. ಹಲವು ರೈತರು ಹಾಗೂ ಮಹಿಳಾ ಪ್ರತಿಭಟನಾಕಾರರು ಗಾಯಗೊಂಡಿದ್ದು, ಅಸ್ಪತ್ರೆಗೆ ಸೇರಿಸಲಾಗಿದೆ. ಹೋರಾಟಗಾರರನ್ನು ಬಲವಂತವಾಗಿ ಬಂಧಿಸಲು ಯತ್ನಿಸಲಾಗಿದೆ. ಹಲವರ ಮೇಲೆ ಪೊಲೀಸ್ ಮೊಕದ್ದಮೆ ದಾಖಲಾಗಿಸಿರುವುದು ಖಂಡನೀಯವಾದದ್ದು ಎಂದರು.

ತಲತಲಾಂತರದಿಂದ ನಂಬಿ ಬದುಕಿರುವ ಲಕ್ಷಾಂತರ ತೆಂಗು, ಮಾವಿನ ಮರಗಳುಳ್ಳ ಬೆಂಗಳೂರಿಗೆ ದಿನನಿತ್ಯ ಲಕ್ಷಾಂತರ ಲೀಟರ್ ಹಾಲು ಪೂರೈಸುವ ಈ ಫಲವತ್ತಾದ ಕೃಷಿ ಭೂಮಿಯ ಸ್ವಾಧೀನ ಪ್ರಕ್ರಿಯೆಯ ಅಂತಿಮ ಅಧಿಸೂಚನೆಯನ್ನು ತಕ್ಷಣವೇ ಹಿಂಪಡೆಯಬೇಕು. ರಾಜ್ಯದಲ್ಲಿ ಮಳೆ ಇಲ್ಲದ ಕಾರಣ ಬರಗಾಲ ಎಂದು ಘೋಷಣೆ ಮಾಡಿ ರೈತರ ಸಾಲ ಮನ್ನಾ ಮಾಡ ಬೆಳೆದಂತಹ ಬೆಳೆಗಳಿಗೆ ಸೂಕ್ತ ಪರಿಹಾರ ಕೊಡಬೇಕು. ಶಾಂತಿಯುತವಾಗಿ ಹಕ್ಕೊತ್ತಾಯ ಮಂಡಿಸುತ್ತಿದ್ದ ಅನ್ನದಾತರ ಮೇಲೆ ಮತ್ತು ಮಹಿಳೆಯರ ಮೇಲೆ ಅಮಾನವೀಯವಾಗಿ ಲಾಠಿ ಬೀಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕಠಿಣ ಶಿಸ್ತುಕ್ರಮ ಜರುಗಿಸಬೇಕು. ಪ್ರತಿಭಟನೆಯ ವೇಳೆ ವಶಕ್ಕೆ ಪಡೆದಿರುವ ಎಲ್ಲಾ ರೈತ ಮುಖಂಡರನ್ನು ಮತ್ತು ಹೋರಾಟಗಾರರನ್ನು ಬೇಷರತ್ತಾಗಿ ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಮಹಾದೇವಸ್ವಾಮಿ ಒತ್ತಾಯಿಸಿದರು.

ಪ್ರತಿಭಟನೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಉಡಿಗಾಲ ರೇವಣ್ಣ, ಜಿಲ್ಲಾ ಉಪಾಧ್ಯಕ್ಷ ಮೂಡಲಪುರ ಶಿವಮೂರ್ತಿ, ತಾಲೂಕು ಅಧ್ಯಕ್ಷ ನಂಜೇದೇವನಪುರ ಸತೀಶ್, ಯಳಂದೂರು ತಾಲೂಕು ಅಧ್ಯಕ್ಷ ಗೌಡಹಳ್ಳಿಷಡಕ್ಷರಸ್ವಾಮಿ, ಅಮಚವಾಡಿ ವಿಜಯಕುಮಾರ್, ಯರಿಯೂರು ಮಹೇಶ್, ಮೆಳ್ಳಹಳ್ಳಿ ಚಂದ್ರಶೇಖರ್ ಮೂರ್ತಿ, ಶ್ರೀಕಂಠಮೂರ್ತಿ, ವೀರನಪುರ ನವೀನ್, ನಂಜಪುರ ಸಿದ್ದಪ್ಪ, ಬಿಸಲವಾಡಿ ನಾಗರಾಜು ಭಾಗವಹಿಸಿದ್ದರು.

# ಕಬ್ಬು ಬೆಳೆ ಹಾಗೂ ಕೆರೆ-ಕಟ್ಟೆಗಳಿಗೆ ನೀರು ಬಿಡಲು ರೈತರ ಆಗ್ರಹ

## ಸಿಎಂ ಜೊತೆ ಚರ್ಚಿಸಿ ನಾಲೆಗಳಿಗೆ ನೀರು: ಎನ್. ಚಲುವರಾಯಸ್ವಾಮಿ

**ಬೆಂಗಳೂರು/ಮಂಡ್ಯ:** ಜಿಲ್ಲೆಯಲ್ಲಿ ಬೆಳೆದು ನಿಂತಿರುವ ಕಬ್ಬಿಗೆ ಹಾಗೂ ಕೆರೆ-ಕಟ್ಟೆಗಳಿಗೆ ನೀರು ಬಿಡಬೇಕು ಎಂಬ ರೈತರ ಬೇಡಿಕೆ ನ್ಯಾಯಯುತವಾಗಿದೆ. ಈ ಬಗ್ಗೆ ವಿರೋಧಪಕ್ಷಗಳು ಕೂಡ ಸರ್ಕಾರವನ್ನು ಆಗ್ರಹಿಸುತ್ತಿವೆ.

ಸಂಕಷ್ಟದ ಸಮಯದಲ್ಲಿ ರೈತರ ಪರವಾಗಿ ನಿಲ್ಲುವುದು ಪ್ರತಿಯೊಬ್ಬ ಜನಪ್ರತಿನಿಧಿಯ ಕರ್ತವ್ಯ. ರೈತರ ಹಿತ ಕಾಯುವುದು ನಮ್ಮ ಮೊದಲ ಆದ್ಯತೆ. ಆದರೆ ಈ ವರ್ಷ ನಿರೀಕ್ಷಿತ ಮಟ್ಟದಲ್ಲಿ ಮಳೆಯಾಗದೆ ಜಲಾಶಯಗಳಲ್ಲಿ ನೀರಿನ ಕೊರತೆಯಾಗಿದೆ. ಇಂತಹ ಸಂದರ್ಭದಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರಿಕೆ ವಹಿಸುವುದು ಕೂಡ ನಮ್ಮ ಜವಾಬ್ದಾರಿಯಾಗಿದೆ.

ಈಗಾಗಲೇ ಜಿಲ್ಲೆಯ ಎಲ್ಲಾ ಶಾಸಕರು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿದ್ದೇವೆ. ಮುಖ್ಯಮಂತ್ರಿಗಳು ಈ ವಿಷಯವನ್ನು ಸಕಾರಾತ್ಮಕವಾಗಿ ಸ್ಪಂದಿಸಿ, ನಾಳಿನ ನೀರಾವರಿ ಸಲಹಾ ಸಮಿತಿ ಸಭೆಯನ್ನು ನೋಡಿಕೊಂಡು ನೀರು ಬಿಡೋಣ ಎಂದು ಭರವಸೆ ನೀಡಿದ್ದಾರೆ.



ನಾಳೆ ದೆಹಲಿಯಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (CWMA) ಮತ್ತು ಕಾವೇರಿ ನೀರು ನಿಯಂತ್ರಣ ಸಮಿತಿ (CWRC) ಸಭೆ ನಡೆಯಲಿದೆ. ಈ ಮಹತ್ವದ ಸಭೆಯಲ್ಲಿ ನಮ್ಮ ರಾಜ್ಯದ ಅಧಿಕಾರಿಗಳು ರಾಜ್ಯದ ವಸ್ತುಸ್ಥಿತಿಯನ್ನು, ಕುಡಿಯುವ ನೀರು ಹಾಗೂ ಬೆಳೆಗಳ ಪರಿಸ್ಥಿತಿಯನ್ನು ಸಮರ್ಥವಾಗಿ ಮಂಡಿಸಲಿದ್ದಾರೆ.

ಈ ಸಭೆಯ ತೀರ್ಮಾನ ಏನಾಗುತ್ತದೆ ಎಂಬುದನ್ನು ನೋಡಿಕೊಂಡು, ತಕ್ಷಣವೇ ಮುಖ್ಯಮಂತ್ರಿಗಳು ಹಾಗೂ ಜಲಸಂಪನ್ಮೂಲ ಸಚಿವರ ಜೊತೆ ಚರ್ಚಿಸಿ ನೀರು ಬಿಡುವ ಕುರಿತು ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು.

ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಮುಂದಿನ ದಿನಗಳಲ್ಲಿ ಮಳೆ ಬರುವ ಸಂಭವ ಕೂಡ ಇದೆ. ಕೆಆರ್‌ಎಸ್ ಜಲಾಶಯ ತುಂಬುವ ಆಶಯ ಕೂಡ ನಮಗಿದೆ. ರೈತರು ಬಿತ್ತನೆಗೆ ಇನ್ನೂ ಅವಕಾಶ ಇದೆ, ಆದ್ದರಿಂದ ಜಿಲ್ಲೆಯ ರೈತ ಬಾಂಧವರು ಯಾವುದೇ ಕಾರಣಕ್ಕೂ ಧೃತಿಗೆಡಬಾರದು.

ಇದು ರೈತರ ಬದುಕು-ಸಾವಿನ ಪ್ರಶ್ನೆ. ಈ ಸೂಕ್ಷ್ಮ ವಿಷಯದಲ್ಲಿ ಯಾರೂ ರಾಜಕೀಯ ಮಾಡುವುದು ಬೇಡ ಎಂದು ಎಲ್ಲಾ ಪಕ್ಷದ ನಾಯಕರಲ್ಲಿ ಚಲುವರಾಯಸ್ವಾಮಿ ಮನವಿ ಮಾಡಿದ್ದಾರೆ.

ಜಿಲ್ಲೆಯ ರೈತ ಬಾಂಧವರು ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಸರ್ಕಾರದ ಜೊತೆ ಸಹಕರಿಸಬೇಕು. ಸರ್ಕಾರ ನಿಮ್ಮ ಜೊತೆಗಿದೆ ಎಂದು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಕೆ.ವಿ.ಶಂಕರಗೌಡ ಜನ್ಮೋತ್ಸವ ಅಂಗವಾಗಿ ನಮನ ಕಾರ್ಯಕ್ರಮ

ಮಂಡ್ಯ: ಕರ್ನಾಟಕ ಸಂಘದ ವತಿಯಿಂದ ನಿತ್ಯಸಚಿವ ಕೆ.ವಿ.ಶಂಕರಗೌಡ ಜನ್ಮೋತ್ಸವದ ಅಂಗವಾಗಿ ಶಂಕರ ನಮನ ಕಾರ್ಯಕ್ರಮವನ್ನು ಜು.15ರಂದು ಸಂಜೆ 5 ಗಂಟೆಗೆ ನಗರದ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ರಂಗಗೀತೆ, ಭಾವಗೀತೆ, ಜನಪದಗೀತೆ ಹಾಗೂ ತತ್ವಪದಗಳ ಗಾಯನದ ಮೂಲಕ ನಿತ್ಯಸಚಿವರಿಗೆ ನಮನ ಸಲ್ಲಿಸಲಾಗುವುದು ಎಂದರು.

ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಕೊಮ್ಮೇರಹಳ್ಳಿಯ ವಿಶ್ವಮಾನವ ಕ್ಷೇತ್ರದ ಪುರುಷೋತ್ತಮಾನಂದನಾಥ ಸ್ವಾಮೀಜಿ ಸಾನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಮಹಿಳಾ ಉದ್ಯಮಿ ಡಾ.ರಚನಾ ಮಹೇಶ್ ಭಾಗವಹಿವಹಿಸುವರು. ಪಿಇಎಸ್ ಕಾಲೇಜಿನ ಉಪನ್ಯಾಸಕಿ ಡಾ.ಎಂ.ಎಸ್.ಅನಿತಾ ಕೆ.ವಿ.ಶಂಕರಗೌಡರಿಗೆ ನುಡಿನಮನ ಸಲ್ಲಿಸುವರು. ಬಿ.ಟಿ.ಪುಟ್ಟರಾಜು, ಗಂಗಾಧರ್ ರಂಗಗೀತೆಗಳನ್ನು, ಹುರುಗಲವಾಡಿ ರಾಮಯ್ಯ, ಮಂಜುಳಾ ಜನಪದ ಗೀತೆಗಳನ್ನು, ಸಿದ್ದಮ್ಮ ಮತ್ತು ತಂಡದಿಂದ ತತ್ವಪದಗಳನ್ನು ಪ್ರಸ್ತುತ ಪಡಿಸಲಾಗುವುದು ಎಂದು ವಿವರಿಸಿದರು.

ತತ್ವಪದ ತರಬೇತಿ ಶಿಬಿರದ ನಿರ್ದೇಶಕರಾದ ಗಾಮನಹಳ್ಳಿ ಸ್ವಾಮಿ, ಹನುಮಂತು ಉಪಸ್ಥಿತರಿರಲಿದ್ದು, ಉಪನ್ಯಾಸಕಿ ಆಶಾ ಸಂಚಿಕೆಯ ನಿರ್ವಹಣೆ ಮಾಡುವರು ಎಂದು ಹೇಳಿದರು.

# ಒತ್ತುವರಿ ತೆರವಿನ ಮಧ್ಯೆ ಬೀದಿ ವ್ಯಾಪಾರಿಗಳ ಬದುಕು ಬೀದಿಗೆ

**ಮೈಸೂರು:** ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ನಗರಪಾಲಿಕೆಯು ನಗರದ ಪ್ರಮುಖ ರಸ್ತೆ ಮತ್ತು ಫುಟ್‌ಪಾತ್‌ಗಳಲ್ಲಿನ ಒತ್ತುವರಿ ತೆರವು ಕಾರ್ಯಾಚರಣೆಯನ್ನು ತೀವ್ರಗೊಳಿಸಿದೆ. ಆದರೆ ಈ ಕಾರ್ಯಾಚರಣೆಯ ಹಿಂದೆ ನೂರಾರು ಕುಟುಂಬಗಳ ಜೀವನೋಪಾಯದ ಪ್ರಶ್ನೆ ಅಡಗಿದ್ದು, ಬೀದಿಬದಿ ವ್ಯಾಪಾರಿಗಳು ಆತಂಕದಲ್ಲಿ ದಿನ ಕಳೆಯುವಂತಾಗಿದೆ. ಆನ್‌ಲೈನ್ಸುದ್ದಿ

ಕಳೆದ ಎರಡು ದಿನಗಳಿಂದ ನಡೆದ ಫುಟ್‌ಪಾತ್ ಒತ್ತುವರಿ ಕಾರ್ಯಾಚರಣೆಯಲ್ಲಿ ಹಲವು ಪೆಟ್ಟಿಗೆ ಅಂಗಡಿಗಳು ಮತ್ತು ತಾತ್ಕಾಲಿಕ ವ್ಯಾಪಾರ ಮಳಿಗೆಗಳನ್ನು ತೆರವುಗೊಳಿಸಲಾಗಿದೆ. ಒಂದು ಕಡೆ ಒತ್ತುವರಿ ತೆರವು ನಡೆಯುತ್ತಿದ್ದರೆ, ಮತ್ತೊಂದೆಡೆ ವ್ಯಾಪಾರಿಗಳ ಪುನರ್ವಸತಿಗಾಗಿ ವರ್ಷಗಳ ಹಿಂದೆ ನಿರ್ಮಿಸಲಾದ ವ್ಯಾಪಾರ ಕೇಂದ್ರಗಳು ಬಳಕೆಯಾಗದೆ ಅನಾಥವಾಗಿ ಉಳಿದಿವೆ ಎಂಬುದು ವ್ಯಾಪಾರಿಗಳ ಆಕ್ರೋಶಕ್ಕೆ ಕಾರಣವಾಗಿದೆ.



**ಖಾಲಿ ಉಳಿದಿವೆ ವ್ಯಾಪಾರ ಕೇಂದ್ರಗಳು:** ಹಿಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ವತಿಯಿಂದ ಸಣ್ಣ ರೈತರು ಮತ್ತು ಸ್ಥಳೀಯ ಉತ್ಪಾದಕರು ನೇರವಾಗಿ ಗ್ರಾಹಕರಿಗೆ ಉತ್ಪನ್ನ ಮಾರಾಟ ಮಾಡಲು ನಗರದ ವಿವಿಧೆಡೆ ವ್ಯಾಪಾರ ಕೇಂದ್ರಗಳನ್ನು ನಿರ್ಮಿಸಲಾಗಿತ್ತು. ಅಶೋಕಪುರಂ ಅಶೋಕ(ಬಲ್ಲಾಳ್) ವೃತ್ತ, ಶಕ್ತಿನಗರ, ವಾಲ್ಮೀಕಿ ಭವನದ ಸಮೀಪ ಮತ್ತು ಶಾರದಾದೇವಿ ನಗರದಲ್ಲಿ ನಿರ್ಮಿಸಲಾದ ಈ ಕೇಂದ್ರಗಳು ನಿರೀಕ್ಷಿತ ಮಟ್ಟದಲ್ಲಿ ಬಳಕೆಯಾಗದೆ ದುಸ್ಥಿತಿಗೆ ತಲುಪಿವೆ.

ಸಣ್ಣ ರೈತರಿಗೆ ಮಾರುಕಟ್ಟೆ ಕಲ್ಪಿಸುವ ಉದ್ದೇಶದಿಂದ ನಿರ್ಮಾಣವಾದ ಈ ಕೇಂದ್ರಗಳಲ್ಲಿ ವ್ಯಾಪಾರ ಚಟುವಟಿಕೆಗಳು ನಡೆಯದ ಕಾರಣ ಕ್ರಮೇಣ ನಿರ್ಲಕ್ಷ್ಯಕ್ಕೆ ಒಳಗಾದವು. ಕೆಲವೆಡೆ ನಿರ್ವಹಣೆ ಕೊರತೆ, ಇನ್ನೂ ಕೆಲವೆಡೆ ರೈತರ ಆಸಕ್ತಿಯ ಕೊರತೆಯಿಂದ ಸಾರ್ವಜನಿಕ ಹಣದಲ್ಲಿ ನಿರ್ಮಿಸಲಾದ ಮೂಲಸೌಕರ್ಯಗಳು ಇಂದು ಖಾಲಿ ಉಳಿದಿವೆ.

**ಪರ್ಯಾಯ ವ್ಯವಸ್ಥೆ ನೀಡಿ? ಎಂಬ ವ್ಯಾಪಾರಿಗಳ ಮನವಿ:** ಪಾಲಿಕೆಯ ತೆರವು ಕಾರ್ಯಾಚರಣೆಯಿಂದ ಸಂಕಷ್ಟಕ್ಕೆ ಸಿಲುಕಿರುವ ಬೀದಿ ಬದಿ ವ್ಯಾಪಾರಿಗಳಿಗೆ ಇದೇ ಖಾಲಿ ಕೇಂದ್ರಗಳನ್ನು ಪರ್ಯಾಯವಾಗಿ ನೀಡಬಹುದೇ ಎಂಬ ಪ್ರಶ್ನೆ ಉದ್ಭವಿಸಿದೆ. ಆದರೆ ಮುಡಾ ನಿರ್ಮಿಸಿರುವ ಈ ಕೇಂದ್ರಗಳು ಇನ್ನೂ ಸಂಪೂರ್ಣವಾಗಿ ನಗರಪಾಲಿಕೆ ಆಡಳಿತ ವ್ಯಾಪ್ತಿಗೆ ಬಂದಿಲ್ಲ ಎನ್ನಲಾಗಿದ್ದು, ತಕ್ಷಣ ಹಂಚಿಕೆ ಮಾಡಲು ಆಡಳಿತಾತ್ಮಕ ಅಡಚಣೆಗಳಿವೆ. ನಮ್ಮ ಬಳಿ ಅಂಗಡಿ ಕಟ್ಟುವಷ್ಟು ಹಣವಿಲ್ಲ. ಪ್ರತಿದಿನ ದುಡಿದರೆ ಮಾತ್ರ ಕುಟುಂಬಕ್ಕೆ ಊಟ. ಈಗ ಗಾಡಿಯನ್ನೂ ತೆರವುಗೊಳಿಸಿದರೆ ನಾವು ಏನು ಮಾಡಬೇಕು? ಹೀಗಾಗಿ ಒಂದೇ ಸಾಲಿನಲ್ಲಿ ಕುಳಿತು ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಿ ಎಂದು ವ್ಯಾಪಾರಿಗಳು ಪಾಲಿಕೆ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಹಲವು ವರ್ಷಗಳಿಂದ ತಿಂಡಿ ಮಾರಾಟ ಮಾಡಿ ಮಕ್ಕಳನ್ನು ಓದಿಸುತ್ತಿದ್ದೇವೆ. ನಮಗೆ ಒಂದು ನಿಗದಿತ ಜಾಗ ಕೊಟ್ಟರೆ ಅಲ್ಲೇ ವ್ಯಾಪಾರ ಮಾಡುತ್ತೇವೆ. ಆದರೆ ಬದುಕಿಗೆ ಪರ್ಯಾಯ ವ್ಯವಸ್ಥೆ ಇಲ್ಲದೆ ತೆರವು ಮಾಡುವುದು ಅನ್ಯಾಯ ಎಂದು ವ್ಯಾಪಾರಸ್ಥರು ಅಳಲು ತೋಡಿಕೊಂಡರು.


2 ಲಕ್ಷ ರೂ. ವೆಚ್ಚದ ಹೊಸ ವ್ಯಾಪಾರ ವಲಯದ ಪ್ರಸ್ತಾವ:ಬಲ್ಲಾಳ್ ವೃತ್ತದ ಇನ್ನೊಂದು ಭಾಗದ ಫುಟ್‌ಪಾತ್‌ನಲ್ಲಿ ಸುಮಾರು 2 ಲಕ್ಷ ರೂ. ವೆಚ್ಚದಲ್ಲಿ ವ್ಯಾಪಾರ ವಲಯ ನಿರ್ಮಿಸುವ ಕುರಿತು ಪಾಲಿಕೆಯ ಎರಡನೇ ವಲಯ ಕಚೇರಿ ಅಧಿಕಾರಿಗಳು ರೂಪರೇಷೆ ತಯಾರಿಸಿ ಆಯುಕ್ತರಿಗೆ ಸಲ್ಲಿಸಿದ್ದಾರೆ ಎಂದು ಮಾರಾಟಗಾರರ ಸಂಘದ ಮೂಲಗಳು ತಿಳಿಸಿವೆ.

**ಸರ್ಕಾರ, ಮುಡಾ, ಪಾಲಿಕೆ ಸಮನ್ವಯಕ್ಕೆ ಒತ್ತಾಯ:** ಅಶೋಕ ವೃತ್ತ, ಕಲ್ಯಾಣಗಿರಿ, ವಾಲ್ಮೀಕಿ ಭವನದ ಸಮೀಪ ಮತ್ತು ಶಾರದಾದೇವಿ ನಗರದಲ್ಲಿ ಈಗಾಗಲೇ ನಿರ್ಮಾಣಗೊಂಡು ಖಾಲಿ ಉಳಿದಿರುವ ವ್ಯಾಪಾರ ಕೇಂದ್ರಗಳನ್ನು ಪುನರುಜ್ಜೀವನಗೊಳಿಸಿ ಫುಟ್‌ಪಾತ್ ವ್ಯಾಪಾರಿಗಳಿಗೆ ಹಂಚಿಕೆ ಮಾಡುವ ಕುರಿತು ಸರ್ಕಾರ, ಮುಡಾ ಮತ್ತು ನಗರಪಾಲಿಕೆ ಸಮನ್ವಯದೊಂದಿಗೆ ತ್ವರಿತ ನಿರ್ಧಾರ ಕೈಗೊಳ್ಳಬೇಕು ಎಂಬ ಒತ್ತಾಯ ಕೇಳಿಬಂದಿದೆ.

# ಕವಿರತ್ನ ಕಾಳಿದಾಸ

ಸಂಸ್ಕೃತದ ಶ್ರೇಷ್ಠ ಕವಿ ಹಾಗೂ ನಾಟಕಕಾರರಾದ ಮಹಾಕವಿ ಕಾಳಿದಾಸರ ಜನ್ಮದಿನವನ್ನು 'ಕಾಳಿದಾಸ ಜಯಂತಿ' ಎಂದು ಆಚರಿಸಲಾಗುತ್ತದೆ. ಸಾಮಾನ್ಯವಾಗಿ ಇದನ್ನು ಆಷಾಡ ಮಾಸದ ಶುಕ್ಲ ಪಕ್ಷದ ಪ್ರಥಮ (ಪಾಡ್ಯ) ತಿಂಗಳಲ್ಲಿ ಆಚರಿಸಲಾಗುತ್ತದೆ

ಸಂಸ್ಕೃತ ಸಾಹಿತ್ಯದ ಅತ್ಯುನ್ನತ ಕವಿ ಮತ್ತು ನಾಟಕಕಾರರಾದ ಮಹಾಕವಿ ಕಾಳಿದಾಸರ ಸಾಹಿತ್ಯಿಕ ಕೊಡುಗೆಗಳನ್ನು ಸ್ಮರಿಸಲು ಮತ್ತು ಅವರ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ಈ ದಿನ ಅತ್ಯಂತ ಮಹತ್ವದ್ದಾಗಿದೆ. ಕೇವಲ ಭಾರತಕ್ಕಷ್ಟೇ ಸೀಮಿತವಾಗದೆ, ಜಾಗತಿಕ ಮಟ್ಟದಲ್ಲಿ ಸಾಹಿತ್ಯದ ದಿಕ್ಕನ್ನು ಬದಲಿಸಿದ ಮಹಾತ್ಮರಲ್ಲಿ ಕಾಳಿದಾಸರು ಪ್ರಮುಖರಾಗಿದ್ದಾರೆ.



1. **ಜನ್ಮಸ್ಥಳ:** ಕಾಳಿದಾಸರ ನಿಖರವಾದ ಜನ್ಮಸ್ಥಳದ ಬಗ್ಗೆ ಇತಿಹಾಸಕಾರರಲ್ಲಿ ಇಂದಿಗೂ ಭಿನ್ನಾಭಿಪ್ರಾಯಗಳಿವೆ. ಅವರ ಕೃತಿಗಳಲ್ಲಿ ಕಂಡುಬರುವ ಭೌಗೋಳಿಕ ವರ್ಣನೆಗಳನ್ನು ಆಧರಿಸಿ, ಅವರು ಮಧ್ಯಪ್ರದೇಶದ ಉಜ್ಜಯಿನಿ ನಗರದವರಾಗಿರಬಹುದು ಎಂದು ಬಹುತೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇನ್ನು ಕೆಲವು ಸಂಶೋಧಕರು ಅವರ ಹಿಮಾಲಯದ ಮೇಲಿನ ಪ್ರೀತಿಯನ್ನು ಕಂಡು ಕಾಶ್ಮೀರ ಅಥವಾ ಪ್ರಕೃತಿಯ ವರ್ಣನೆಗಳನ್ನು ಆಧರಿಸಿ ಕಳಿಂಗ (ಒಡಿಶಾ) ಪ್ರಾಂತ್ಯಕ್ಕೆ ಸೇರಿದವರೆಂದೂ ವಾದಿಸುತ್ತಾರೆ. ಆದಾಗ್ಯೂ, ಉಜ್ಜಯಿನಿಯೇ ಅವರ ಸಾಹಿತ್ಯಿಕ ಕರ್ಮಭೂಮಿಯಾಗಿತ್ತು ಎಂಬುದಕ್ಕೆ ಬಲವಾದ ಪುರಾವೆಗಳಿವೆ.
2. **ಕಾಲಾವಧಿ:** ಕಾಳಿದಾಸರು ಜೀವಿಸಿದ್ದ ಕಾಲದ ಬಗ್ಗೆಯೂ ಸ್ಪಷ್ಟವಾದ ಲಿಖಿತ ದಾಖಲೆಗಳಿಲ್ಲ. ಆದರೆ, ಅವರು ಗುಪ್ತ ಸಾಮ್ರಾಜ್ಯದ ಸುಪ್ರಸಿದ್ಧ ರಾಜನಾದ ಎರಡನೇ ಚಂದ್ರಗುಪ್ತ (ವಿಕ್ರಮಾದಿತ್ಯ) ನ ಆಸ್ಥಾನದ ನವರತ್ನಗಳಲ್ಲಿ ಒಬ್ಬರಾಗಿದ್ದರು ಎಂಬುದು ವ್ಯಾಪಕವಾಗಿ ಒಪ್ಪಿತವಾಗಿರುವ ಅಂಶವಾಗಿದೆ. ಇದರ ಆಧಾರದ ಮೇಲೆ ಅವರ ಕಾಲಾವಧಿಯು ಪ್ರಮುಖವಾಗಿ ಕ್ರಿ.ಶ. 4ನೇ ಶತಮಾನದಿಂದ 5ನೇ ಶತಮಾನದ ನಡುವಿನ ಅವಧಿ ಎಂದು ಇತಿಹಾಸಕಾರರು ಗುರುತಿಸುತ್ತಾರೆ.
3. **ಕೃತಿಗಳು:** ಕಾಳಿದಾಸರ ಕಾವ್ಯಶೈಲಿ, ಉಪಮಾ ಅಲಂಕಾರಗಳು ಮತ್ತು ಪ್ರಕೃತಿಯ ಸೌಂದರ್ಯೀಕರಣವು ಅದ್ವಿತೀಯವಾದದ್ದು. ಅವರ ಪ್ರಮುಖ ಕೃತಿಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು:

✷ ಮಹಾಕಾವ್ಯಗಳು: ಶ್ರೀರಾಮನ ವಂಶಾವಳಿಯನ್ನು ವರ್ಣಿಸುವ 'ರಘುವಂಶ' ಮತ್ತು ಶಿವ-ಪಾರ್ವತಿಯರ ಪುತ್ರ ಕಾರ್ತಿಕೇಯನ ಜನನವನ್ನು ಆಧರಿಸಿದ 'ಕುಮಾರಸಂಭವ'.

✷ ಖಂಡಕಾವ್ಯಗಳು (ಗೀತಕಾವ್ಯ): ವಿರಹಿ ಯಕ್ಷನೊಬ್ಬನು ಮೋಡದ ಮೂಲಕ ತನ್ನ ಪತ್ನಿಗೆ ಸಂದೇಶ ಕಳುಹಿಸುವ ಅಪೂರ್ವ ಕಲ್ಪನೆಯ 'ಮೇಘದೂತ' ಮತ್ತು ಆರು ಋತುಗಳ ಸೌಂದರ್ಯವನ್ನು ವರ್ಣಿಸುವ 'ಋತುಸಂಹಾರ'.

✷ ನಾಟಕಗಳು: ವಿಶ್ವವಿಖ್ಯಾತ 'ಅಭಿಜ್ಞಾನ ಶಾಕುಂತಲ' (ದುಷ್ಯಂತ-ಶಕುಂತಲೆಯರ ಕಥೆ), 'ಮಾಳವಿಕಾಗ್ನಿಮಿತ್ರ' ಮತ್ತು 'ವಿಕ್ರಮೋರ್ವಶೀಯ'.



4. **ದಂತಕಥೆಗಳು:** ಕಾಳಿದಾಸರ ವೈಯಕ್ತಿಕ ಜೀವನದ ಸುತ್ತ ಅನೇಕ ಆಸಕ್ತಿದಾಯಕ ದಂತಕಥೆಗಳಿವೆ. ಜನಪದ ನಂಬಿಕೆಗಳ ಪ್ರಕಾರ, ಆರಂಭದಲ್ಲಿ ಕಾಳಿದಾಸರು ತೀರಾ ಅವಿದ್ಯಾವಂತರಾಗಿದ್ದರು. ರಾಜ್ಯದ ವಿದ್ವತ್‌ಪೂರ್ಣ ರಾಜಕುಮಾರಿ 'ವಿದ್ಯೋತ್ತಮೆ'ಯನ್ನು ಉಪಾಯದಿಂದ ಇವರಿಗೆ ವಿವಾಹ ಮಾಡಿಸಲಾಯಿತು. ತನ್ನ ಪತಿಯ ಮೂರ್ಖತನವನ್ನು ತಿಳಿದ ರಾಜಕುಮಾರಿ ಇವರನ್ನು ಮನೆಯಿಂದ ಹೊರಹಾಕಿದಾಗ, ಕಾಳಿದಾಸರು ಕಾಳಿ ದೇವಿಯ ಆರಾಧನೆ ಮಾಡಿದರು. ಕಾಳಿ ದೇವಿಯ ಕೃಪೆಯಿಂದ ಅವರಿಗೆ ಪರಮ ಜ್ಞಾನ ಮತ್ತು ಕಾವ್ಯಶಕ್ತಿ ಸಿದ್ಧಿಸಿತು, ಹೀಗಾಗಿಯೇ ಅವರು 'ಕಾಳಿದಾಸ' (ಕಾಳಿಯ ದಾಸ) ಎಂಬ ಹೆಸರು ಪಡೆದರು ಎಂಬ ಕಥೆ ಭಾರತೀಯ ಸಂಸ್ಕೃತಿಯಲ್ಲಿ ಜನಪ್ರಿಯವಾಗಿದೆ.
5. ಕಾಳಿದಾಸ ಮತ್ತು ಶೇಕ್ಸ್‌ಪಿಯರ್: ಒಂದು ಸಾಹಿತ್ಯಿಕ ಅವಲೋಕನ

ಪಾಶ್ಚಾತ್ಯ ವಿದ್ವಾಂಸರು ಕಾಳಿದಾಸರನ್ನು "ಭಾರತದ ಶೇಕ್ಸ್‌ಪಿಯರ್" ಎಂದು ಕರೆಯುವುದು ರೂಢಿ. ಇಬ್ಬರೂ ತಮ್ಮ ಭಾಷೆಗಳ (ಸಂಸ್ಕೃತ ಮತ್ತು ಇಂಗ್ಲಿಷ್) ಶ್ರೇಷ್ಠ ನಾಟಕಕಾರರಾಗಿದ್ದರಿಂದ ಮತ್ತು ಮಾನವ ಸಹಜ ಭಾವನೆಗಳನ್ನು ಅದ್ಭುತವಾಗಿ ಚಿತ್ರಿಸಿದ್ದರಿಂದ ಈ ಹೋಲಿಕೆ ಮಾಡಲಾಗುತ್ತದೆ.

**ಕೃತಿಗಳ ಹೋಲಿಕೆ ಮತ್ತು ವ್ಯತ್ಯಾಸಗಳು:**

✷ ಭಾವನಾತ್ಮಕ ಜಗತ್ತು: ವಿಲಿಯಂ ಶೇಕ್ಸ್‌ಪಿಯರ್ ಅವರ ನಾಟಕಗಳು (ಉದಾಹರಣೆಗೆ ಹ್ಯಾಮ್ಲೆಟ್, ಮ್ಯಾಕ್‌ಬೆತ್) ಹೆಚ್ಚಾಗಿ ದುರಂತ (Tragedy), ಆಂತರಿಕ ಸಂಘರ್ಷ, ದ್ವೇಷ ಮತ್ತು ಅಧಿಕಾರದ ಹಪಾಹಪಿಯನ್ನು ತೀವ್ರವಾಗಿ ಚಿತ್ರಿಸುತ್ತವೆ. ಆದರೆ ಕಾಳಿದಾಸರ ಕೃತಿಗಳು ಪ್ರಕೃತಿ, ಪ್ರೇಮ, ಆಧ್ಯಾತ್ಮಿಕತೆ ಮತ್ತು ಸೌಂದರ್ಯದ ಆರಾಧನೆಗೆ ಪ್ರಾಧಾನ್ಯತೆ ನೀಡುತ್ತವೆ. ಭಾರತೀಯ ನಾಟ್ಯಶಾಸ್ತ್ರದ ನಿಯಮಗಳಂತೆ ಅವರ ನಾಟಕಗಳು ದುರಂತದಲ್ಲಿ ಕೊನೆಗೊಳ್ಳದೆ, ಸೌಹಾರ್ದತೆ ಮತ್ತು ಪುನರ್ಮಿಲನದಲ್ಲಿ ಕೊನೆಗೊಳ್ಳುತ್ತವೆ.

**ಕಾಲದ ಅಂತರ:** ಕಾಳಿದಾಸರು ಜೀವಿಸಿದ್ದು ಕ್ರಿ.ಶ. 4-5ನೇ ಶತಮಾನದಲ್ಲಿ, ಅಂದರೆ ಶೇಕ್ಸ್‌ಪಿಯರ್‌ಗಿಂತ (16ನೇ ಶತಮಾನ) ಸುಮಾರು 1200 ವರ್ಷಗಳಿಗಿಂತಲೂ ಮುಂಚೆ!

ಈ ಇಬ್ಬರು ಮಹನೀಯರನ್ನು ಒಬ್ಬರಿಗೊಬ್ಬರು ಹೋಲಿಸುವುದು ಸಾಹಿತ್ಯಿಕವಾಗಿ ತರ್ಕಬದ್ಧವಲ್ಲ. ಇಬ್ಬರೂ ವಿಭಿನ್ನ ಕಾಲಘಟ್ಟ, ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆ ಮತ್ತು ವಿಭಿನ್ನ ಭಾಷಾ ಶೈಲಿಗಳಲ್ಲಿ ಬರೆದವರು. ಕಾಳಿದಾಸ ಮತ್ತು ಶೇಕ್ಸ್‌ಪಿಯರ್ ಇಬ್ಬರೂ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಜಾಗತಿಕ ಸಾಹಿತ್ಯದ ದ್ರುವತಾರೆಗಳಾಗಿದ್ದು, ಯಾರೂ ಯಾರಿಗೂ ಕಮ್ಮಿಯಿಲ್ಲದಂತೆ ಸ್ವತಂತ್ರವಾಗಿ ಶ್ರೇಷ್ಠರಾಗಿದ್ದಾರೆ.

6. **ಜಾಗತಿಕ ಪ್ರಭಾವ:** ಕಾಳಿದಾಸರ ಸಾಹಿತ್ಯವು ಪಾಶ್ಚಾತ್ಯ (ವೆಸ್ಟರ್ನ್) ಸಾಹಿತ್ಯದ ಮೇಲೂ ಆಳವಾದ ಪ್ರಭಾವ ಬೀರಿದೆ:

✷ ವಿಲಿಯಂ ಜೋನ್ಸ್ ಅನುವಾದ: 1789 ರಲ್ಲಿ ಸರ್ ವಿಲಿಯಂ ಜೋನ್ಸ್ ಅವರು 'ಅಭಿಜ್ಞಾನ ಶಾಕುಂತಲ' ನಾಟಕವನ್ನು ಇಂಗ್ಲಿಷ್‌ಗೆ ಅನುವಾದಿಸಿದಾಗ ಅದು ಪಾಶ್ಚಾತ್ಯ ಜಗತ್ತಿಗೆ ಹೊಸ ಸಾಹಿತ್ಯಿಕ ದರ್ಶನ ಮಾಡಿಸಿತು.

✷ ಗಯಟೆಯ ಪ್ರಶಂಸೆ: ಜರ್ಮನಿಯ ಮಹಾನ್ ಕವಿ ಗಯಟೆ (ಉಂಜಣುಜ) ಅವರು ಶಾಕುಂತಲ ನಾಟಕದಿಂದ ಎಷ್ಟು ಪ್ರಭಾವಿತರಾಗಿದ್ದರೆಂದರೆ, ಅವರು "ಭೂಮಿ ಮತ್ತು ಸ್ವರ್ಗವನ್ನು ಒಂದೇ ಹೆಸರಿನಲ್ಲಿ ನೋಡಬೇಕಾದರೆ ಅದು ಶಾಕುಂತಲದಲ್ಲಿದೆ" ಎಂದು ಕೊಂಡಾಡಿದ್ದರು.

✷ ಯುರೋಪಿನ ರೋಮ್ಯಾಂಟಿಕ್ ಚಳವಳಿಯ ಕವಿಗಳಾದ ಹರ್ಡರ್ ಮತ್ತು ಫ್ರೆಡ್ರಿಕ್ ಷ್ಲೆಗೆಲ್ ಅವರಂತಹ ಚಿಂತಕರು ಕಾಳಿದಾಸರ ಪ್ರಕೃತಿ ವರ್ಣನೆಯ ಆಳದಿಂದ ಪ್ರೇರಿತರಾಗಿದ್ದರು.

7. **ವಿಮರ್ಶಾತ್ಮಕ ಕೀರ್ತಿ:** ಸಂಸ್ಕೃತ ಸಾಹಿತ್ಯದಲ್ಲಿ "ಉಪಮಾ ಕಾಳಿದಾಸಸ್ಯ" ಎಂಬ ಜನಪ್ರಿಯ ನಾಣ್ಣುಡಿಯಿದೆ, ಅಂದರೆ ಹೋಲಿಕೆ ಅಥವಾ ಉಪಮಾ ಅಲಂಕಾರವನ್ನು ಬಳಸುವುದರಲ್ಲಿ ಕಾಳಿದಾಸರಿಗೆ ಸಾಟಿಯಿಲ್ಲ. ಮಾನವನ ಸಂಕೀರ್ಣ ಭಾವನೆಗಳನ್ನು, ಪ್ರಕೃತಿಯ ಜೊತೆಗಿನ ಸಂಬಂಧವನ್ನು ಮತ್ತು ಧರ್ಮ-ನೀತಿಗಳನ್ನು ಅತ್ಯಂತ ಸರಳ ಹಾಗೂ ಸುಂದರ ಶೈಲಿಯಲ್ಲಿ ಮಂಡಿಸುವ ಅವರ ಕಲೆಗೆ ಜಾಗತಿಕ ಸಾಹಿತ್ಯ ವಿಮರ್ಶಕರು ಅತ್ಯುನ್ನತ ಶ್ರೇಯಾಂಕವನ್ನು ನೀಡಿದ್ದಾರೆ.

ಕಾಳಿದಾಸರ ಪರಂಪರೆಯು ಭಾರತೀಯ ಚಿತ್ರರಂಗ, ನಾಟಕ ರಂಗಭೂಮಿ ಮತ್ತು ನೃತ್ಯ ಕಲೆಗಳ ಮೇಲೆ ಇಂದಿಗೂ ಪ್ರಭಾವ ಬೀರುತ್ತಿದೆ. ಭಾರತ ಸರ್ಕಾರವು ಅವರ ನೆನಪಿನಲ್ಲಿ 'ಪ್ರತಿಷ್ಠಿತ ಕಾಳಿದಾಸ ಸಮ್ಮಾನ್' ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ.


ಆದಾಗ್ಯೂ, ಇಂದಿನ ಯುವ ಪೀಳಿಗೆಯಲ್ಲಿ ಇಂತಹ ಶಾಸ್ತ್ರೀಯ ಸಾಹಿತ್ಯದ ಕಡೆಗೆ ಆಸಕ್ತಿ ಕಡಿಮೆಯಾಗುತ್ತಿರುವುದು ಒಂದು ಸವಾಲಾಗಿದೆ. ಕಾಳಿದಾಸರ ಕಾವ್ಯಗಳ ಸೌಂದರ್ಯವನ್ನು ಉಳಿಸಲು ಇಂದಿನ ಸರಳ ಪ್ರಾದೇಶಿಕ ಭಾಷೆಗಳಿಗೆ ಹಾಗೂ ಇಂಗ್ಲಿಷ್‌ಗೆ ಇವರ ಕೃತಿಗಳನ್ನು ಹೆಚ್ಚು ಹೆಚ್ಚಾಗಿ ಮರು-ಅನುವಾದ ಮಾಡಬೇಕಾಗಿದೆ. ಶಾಲಾ-ಕಾಲೇಜುಗಳ ಪಠ್ಯಕ್ರಮದಲ್ಲಿ ಇವರ ನಾಟಕಗಳ ಸರಳ ರೂಪಗಳನ್ನು ಅಳವಡಿಸುವುದು ಮತ್ತು ಇಂದಿನ ಡಿಜಿಟಲ್ ಮಾಧ್ಯಮಗಳು, ಅನಿಮೇಷನ್ ಹಾಗೂ ಆಡಿಯೋ ಬುಕ್‌ಗಳ ಮೂಲಕ ಇವರ ಕಥೆಗಳನ್ನು ದೃಶ್ಯ ರೂಪದಲ್ಲಿ ಪ್ರಸ್ತುತಪಡಿಸುವುದು ಇಂದಿನ ಅಗತ್ಯವಾಗಿದೆ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ಆಷಾಢದ ಆಗಮನ ಮತ್ತು ಕಾಳಿದಾಸನ 'ಮೇಘದೂತ'

ಸಾಹಿತ್ಯ ಸಿಂಚನ




| ಜ್ಯೋತಿ ಪ್ರಸಾದ್
(ಇಂಜಿನಿಯರ್, ಕವಯಿತ್ರಿ ಹಾಗೂ ಲೇಖಕಿ)

ಆಷಾಢ ಮಾಸದ ಆರಂಭವೆಂದರೆ ಪ್ರಕೃತಿಯಲ್ಲಿ ಹೊಸ ಚೇತನ, ಭೂಮಿಗೆ ಮಳೆಯ ಸಿಂಚನ. ಆದರೆ ಸಾಹಿತ್ಯಾಸಕ್ತರಿಗೆ ಆಷಾಢದ ಮೊದಲ ದಿನ ತಟ್ಟನೆ ನೆನಪಿಸುವುದು ಮಹಾಕವಿ ಕಾಳಿದಾಸನ ಅಮರ ಕಾವ್ಯ ಮೇಘದೂತ ವನ್ನು. ಇದೇ ಕಾರಣಕ್ಕೆ ಆಷಾಢದ ಮೊದಲ ದಿನವನ್ನು ಕಾಳಿದಾಸ ದಿನ ಎಂದೂ ಆಚರಿಸಲಾಗುತ್ತದೆ.

ಸಂಸ್ಕೃತ ಸಾಹಿತ್ಯದ ಮಹಾಕವಿ ಕಾಳಿದಾಸನ ಅತ್ಯಂತ ಪ್ರಸಿದ್ಧ ಹಾಗೂ ಸುಂದರ ಕೃತಿಗಳಲ್ಲಿ ಮೇಘದೂತ ಅಗ್ರಪಂಕ್ತಿಯಲ್ಲಿ ನಿಲ್ಲುತ್ತದೆ. ಇದು ಸಂಸ್ಕೃತ ಸಾಹಿತ್ಯದ ಒಂದು ಅಪೂರ್ವ ಖಂಡಕಾವ್ಯ ಹಾಗೂ ಸಂದೇಶ ಕಾವ್ಯವಾಗಿದೆ. ಮಳೆಗಾಲದ ಮೋಡವನ್ನೇ ದೂತನನ್ನಾಗಿ ಮಾಡಿಕೊಂಡು ರಚಿಸಲಾದ ಈ ಕಾವ್ಯವು ವಿಶ್ವದ ಪ್ರೇಮ ಸಾಹಿತ್ಯದಲ್ಲಿಯೇ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಆದಾಗ್ಯೂ, ಮೇಘದೂತ ಕೇವಲ ಒಂದು ಪ್ರೇಮಕಥೆಯಾಗಿರದೇ, ಪ್ರಕೃತಿ, ಭೌಗೋಳಿಕತೆ, ಸಂಸ್ಕೃತಿ ಮತ್ತು ಮಾನವನ ಸೂಕ್ಷ್ಮ ಭಾವನೆಗಳನ್ನು ಒಂದೇ ಕಾವ್ಯದಲ್ಲಿ ಹೆಣೆದಿರುವ ಅದ್ಭುತ ಕಾವ್ಯಶಿಲ್ಪವಾಗಿದೆ. ಈ ಕೃತಿಯಲ್ಲಿ ಕಾಳಿದಾಸನ ಕಾವ್ಯಪ್ರತಿಭೆ ಅತ್ಯಂತ ಪರಿಣಾಮಕಾರಿಯಾಗಿ ಅಭಿವ್ಯಕ್ತವಾಗಿದೆ.

**ಕಾವ್ಯದ ಕಥಾವಸ್ತು:** ಕುಬೇರನ ರಾಜಧಾನಿಯಾದ ಅಲಕಾಪುರಿಯಲ್ಲಿ ಒಬ್ಬ ಯಕ್ಷನಿದ್ದ. ತನ್ನ ಪತ್ನಿಯ ಮೇಲಿನ ಅತಿಯಾದ ಪ್ರೀತಿಯಿಂದ ಅವನು ತನ್ನ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿ ಪತ್ನಿಯೊಡನೆ ಸಮಯ ಕಳೆಯುತ್ತಿದ್ದ. ಇದರಿಂದ ಕೋಪಗೊಂಡ ಕುಬೇರನು ಅವನಿಗೆ ಒಂದು ವರ್ಷ ಕಾಲ ಪತ್ನಿಯಿಂದ ದೂರವಿರಬೇಕೆಂಬ ಶಾಪ ನೀಡಿ, ಅವನನ್ನು ರಾಮಗಿರಿ



ಆಶ್ರಮಕ್ಕೆ (ಇಂದಿನ ಮಧ್ಯಭಾರತದ ವಿಂಧ್ಯಗಿರಿ ಪರ್ವತಶ್ರೇಣಿ ಎನ್ನಲಾಗುತ್ತದೆ) ಗಡೀಪಾರು ಮಾಡುತ್ತಾನೆ.

ಪತ್ನಿಯಿಂದ ದೂರಾಗಿ ಕಂಗೆಟ್ಟು ಯಕ್ಷನು ಎಂಟು ತಿಂಗಳುಗಳನ್ನು ಕಳೆಯುತ್ತಾನೆ. ತದನಂತರ, ಆಷಾಢ ಮಾಸದ ಮೊದಲ ದಿನ ಗಿರಿಯನ್ನು ತಬ್ಬಿರುವ ಸುಂದರವಾದ ಮೋಡವೊಂದನ್ನು ನೋಡುತ್ತಾನೆ. ಪತ್ನಿಯ ನೆನಪಿನಲ್ಲಿ ಬೆಂದಿದ್ದ ಅವನ ವಿರಹವೇದನೆ ಮತ್ತಷ್ಟು ತೀವ್ರಗೊಂಡು, ಆತ ಆ ಮೋಡವನ್ನೇ ದೂತನನ್ನಾಗಿ ಮಾಡಿಕೊಂಡು ಅಲಕಾಪುರಿಯಲ್ಲಿರುವ ತನ್ನ ಪ್ರಿಯ ಪತ್ನಿಗೆ ಸಂದೇಶವನ್ನು ತಲುಪಿಸುವಂತೆ ವಿನಂತಿಸುತ್ತಾನೆ. ಈ ವಿನೂತನ ಕಲ್ಪನೆಯೇ ಮೇಘದೂತ ಕಾವ್ಯದ ಮೂಲಾಧಾರವಾಗಿದೆ.

ಈ ಖಂಡಕಾವ್ಯದ ಶ್ಲೋಕಗಳು

ಮೇಘದೂತದಲ್ಲಿ ಒಟ್ಟು ಸುಮಾರು 111 ರಿಂದ 121 ಶ್ಲೋಕಗಳಿವೆ. ವಿವಿಧ ಆವೃತ್ತಿಗಳು ಮತ್ತು ವ್ಯಾಖ್ಯಾನಗಳ ಪ್ರಕಾರ ಈ ಸಂಖ್ಯೆಯಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಪ್ರಸಿದ್ಧ ವ್ಯಾಖ್ಯಾನಕಾರ ಮಲ್ಲಿನಾಥರ ಅಭಿಪ್ರಾಯದಂತೆ, ಈ ಕಾವ್ಯದಲ್ಲಿ 111 ಶ್ಲೋಕಗಳು ಅಧಿಕೃತವಾಗಿದ್ದು, ಉಳಿದ ಕೆಲವು ಶ್ಲೋಕಗಳನ್ನು ನಂತರದ ಕಾಲದಲ್ಲಿ ಸೇರಿಸಲಾದ ಪ್ರಕ್ಷಿಪ್ತ (ನಂತರ ಸೇರ್ಪಡೆಯಾದ) ಶ್ಲೋಕಗಳು ಎಂದು ಪರಿಗಣಿಸಲಾಗಿದೆ. ಸಂಪೂರ್ಣ ಮೇಘದೂತವನ್ನು ಸಂಸ್ಕೃತದ ಮಂದಾಕ್ರಾಂತ ಛಂದಸ್ಸಿನಲ್ಲಿ ರಚಿಸಲಾಗಿದೆ.

**ಕಾವ್ಯದ ಪ್ರಮುಖ ವಿಭಾಗಗಳು**

ಕಥೆಯ ಹರಿವು ಮತ್ತು ಭೌಗೋಳಿಕ ಹಿನ್ನೆಲೆಯನ್ನು ಆಧರಿಸಿ ಕಾವ್ಯವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ:

1. **ಪೂರ್ವಮೇಘ:** ಪ್ರಕೃತಿ ಮತ್ತು ಪ್ರಯಾಣದ ಮಾರ್ಗ
ಕುಬೇರನ ಶಾಪದಿಂದಾಗಿ ರಾಮಗಿರಿಯಲ್ಲಿ ವಾಸಿಸುತ್ತಿರುವ ಯಕ್ಷನು, ಆಷಾಢ ಮಾಸದ ಮೊದಲ ದಿನ ಮೋಡವನ್ನು ಕಂಡು ತನ್ನ ಸಂದೇಶವನ್ನು ಹೊತ್ತೊಯ್ಯುವಂತೆ ಬೇಡಿಕೊಳ್ಳುವುದು ಇಲ್ಲಿಂದಲೇ. ತದನಂತರ ಆತ, ಮೋಡಕ್ಕೆ ರಾಮಗಿರಿಯಿಂದ ಹಿಡಿದು ಹಿಮಾಲಯದ ತಪ್ಪಲಿನ ಅಲಕಾಪುರಿಯವರೆಗೆ ಸಾಗಬೇಕಾದ ಸಂಪೂರ್ಣ ಮಾರ್ಗವನ್ನು ಅತ್ಯಂತ ಸವಿಸ್ತಾರವಾಗಿ ವಿವರಿಸುತ್ತಾನೆ.
ಈ ಪ್ರಯಾಣದ ಹಾದಿಯಲ್ಲಿ ಬರುವ ನರ್ಮದಾ, ವೇತ್ರವತಿ ಮುಂತಾದ ಪುಣ್ಯ ನದಿಗಳು, ಸುಂದರ ಪರ್ವತಶ್ರೇಣಿಗಳು, ವೈಭವದ ಉಜ್ಜಯಿನಿ ನಗರಿ ಹಾಗೂ ಪವಿತ್ರ ಮಹಾಕಾಲೇಶ್ವರ ದೇವಾಲಯದ ಭೌಗೋಳಿಕ ಮತ್ತು ಸಾಂಸ್ಕೃತಿಕ ವೈಭವವನ್ನು ಕಾಳಿದಾಸನು ಅತ್ಯಂತ ಮನೋಹರವಾಗಿ ಚಿತ್ರಿಸಿದ್ದಾನೆ. ಪ್ರಕೃತಿಯ ಮೇಲಿನ ಕಾಳಿದಾಸನ ಅಪಾರ ಪ್ರೀತಿ, ಭಾರತದ ಭೂಭಾಗದ ಮೇಲಿದ್ದ ಅರಿವು ಮತ್ತು ಸೂಕ್ಷ್ಮ ಅವಲೋಕನಶಕ್ತಿ ಈ ವರ್ಣನೆಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಹೀಗಾಗಿ, ಪೂರ್ವಮೇಘದಲ್ಲಿ ಮುಖ್ಯವಾಗಿ ಭಾರತದ ನಿಸರ್ಗ ಸೌಂದರ್ಯ ಮತ್ತು ಮೋಡದ ಪ್ರಯಾಣದ ಮಾರ್ಗದ ವರ್ಣನೆಯೇ ಪ್ರಧಾನವಾಗಿದೆ.
2. **ಉತ್ತರಮೇಘ:** ಅಲಕಾಪುರಿಯ ವೈಭವ ಮತ್ತು ಪ್ರೇಮ ಸಂದೇಶ
ಈ ಭಾಗದಲ್ಲಿ ಮೋಡವು ಅಲಕಾಪುರಿಯನ್ನು ತಲುಪಿದ ನಂತರದ ಚಿತ್ರಣವಿದೆ. ಅಲಕಾಪುರಿಯ ವೈಭವ, ಯಕ್ಷನ ಭವ್ಯ ಗೃಹ, ಅವನ ಪತ್ನಿಯ ಸೌಂದರ್ಯ ಹಾಗೂ ವಿರಹದ ನೋವಿನಿಂದ ಆಕೆ ಅನುಭವಿಸುತ್ತಿರುವ ತಳಮಳವನ್ನು ಕಾಳಿದಾಸನು ಮನಮುಟ್ಟುವಂತೆ ವರ್ಣಿಸಿದ್ದಾನೆ. ಮಾನವ ಸಹಜವಾದ ಪ್ರೇಮ, ಒಂಟಿತನ ಮತ್ತು ವಿರಹದ ತೀವ್ರತೆಯನ್ನು ಇಲ್ಲಿ ಅತ್ಯಂತ ಕಲಾತ್ಮಕವಾಗಿ ಚಿತ್ರಿಸಲಾಗಿದೆ. ಯಕ್ಷನು ಮೋಡದ ಮೂಲಕ ತನ್ನ ಪತ್ನಿಗೆ ಕಳುಹಿಸುವ ಪ್ರೇಮ ಸಂದೇಶ ಹಾಗೂ ಶಾಪದ ಅವಧಿ ಮುಗಿದ ನಂತರ ಪುನರ್ಮಿಲನವಾಗುವ ಭರವಸೆಯೊಂದಿಗೆ ಕಾವ್ಯವು ಮುಕ್ತಾಯಗೊಳ್ಳುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ:

ಪೂರ್ವಮೇಘ ಸಂದೇಶ ಹೊತ್ತ ಮೋಡದ ಪ್ರಯಾಣದ ದಾರಿ ಮತ್ತು ಪ್ರಕೃತಿ ವರ್ಣನೆ.

ಉತ್ತರಮೇಘ ಮೋಡ ತಲುಪುವ ಗಮ್ಯಸ್ಥಾನವಾದ ಅಲಕಾಪುರಿ ಹಾಗೂ ಪ್ರೇಮ ಸಂದೇಶದ ವರ್ಣನೆ.

ಮೇಘದೂತದ ವಿಶೇಷತೆಗಳು:

ಮಂದಾಕ್ರಾಂತ ಛಂದಸ್ಸು: ಮೇಘದೂತದ ಸಂಪೂರ್ಣ ಕಾವ್ಯವನ್ನು ಮಂದಾಕ್ರಾಂತ ಎಂಬ ವಿಶಿಷ್ಟ ಛಂದಸ್ಸಿನಲ್ಲಿ ರಚಿಸಲಾಗಿದೆ. ಇದರ ಮೃದುವಾದ ಗತಿಯು ವಿರಹ ಮತ್ತು ಕರುಣರಸದ ಅಭಿವ್ಯಕ್ತಿಗೆ ಅತ್ಯಂತ ಸೂಕ್ತವಾಗಿದೆ.

ವಿಪ್ರಲಂಭ ಶೃಂಗಾರ: ಈ ಕಾವ್ಯದ ಪ್ರಧಾನ ರಸ ವಿಪ್ರಲಂಭ ಶೃಂಗಾರ ಅಥವಾ ವಿರಹ ಶೃಂಗಾರವಾಗಿದೆ. ಪ್ರೇಮಿಗಳು ದೂರವಿದ್ದಾಗ ಅನುಭವಿಸುವ ತಳಮಳ, ನೆನಪು ಮತ್ತು ಪ್ರೀತಿಯ ಆಳವನ್ನು ಕಾಳಿದಾಸನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ.

ಪ್ರಕೃತಿ ಮತ್ತು ಭೌಗೋಳಿಕ ವರ್ಣನೆ: ಭಾರತದ ನದಿಗಳು, ಪರ್ವತಗಳು, ನಗರಗಳು ಮತ್ತು ಸಂಸ್ಕೃತಿಯ ವರ್ಣನೆ ಮೇಘದೂತದ ಪ್ರಮುಖ ಆಕರ್ಷಣೆಯಾಗಿದೆ. ಕಾಳಿದಾಸನ ಪ್ರಕೃತಿ ಪ್ರೇಮ ಹಾಗೂ ಭೂಗೋಳದ ಅರಿವು ಈ ಕಾವ್ಯದಲ್ಲಿ ಅದ್ಭುತವಾಗಿ ವ್ಯಕ್ತವಾಗಿದೆ.

ಜಾಗತಿಕ ಪ್ರಭಾವ: ಮೇಘದೂತದ ವಿನೂತನ ಕಲ್ಪನೆ ಮತ್ತು ಕಲಾತ್ಮಕತೆ ಮುಂದಿನ ಅನೇಕ ಕವಿಗಳಿಗೆ ಸ್ಫೂರ್ತಿಯಾಯಿತು. ಇದರ ಪ್ರಭಾವದಿಂದ ಬೇರೆ ಬೇರೆ ಭಾಷೆಗಳಲ್ಲಿಯೂ ಉದ್ಧವದೂತ, ಹಂಸದೂತ, ಪವನದೂತ ಮೊದಲಾದ ಅನೇಕ ದೂತಕಾವ್ಯಗಳು ರಚಿಸಲ್ಪಟ್ಟಿವೆ.

ಮೇಘದೂತ ಕೇವಲ ಒಂದು ವಿರಹಗಾಥೆಯಲ್ಲ; ಅದು ಪ್ರಕೃತಿ, ಪ್ರೇಮ, ಸಂಸ್ಕೃತಿ ಮತ್ತು ಕಲ್ಪನೆಯ ಅದ್ಭುತ ಸಂಗಮವಾಗಿದೆ. ಮೋಡವನ್ನು ದೂತನನ್ನಾಗಿ ಮಾಡಿಕೊಂಡು ಮಾನವ ಹೃದಯದ ಸೂಕ್ಷ್ಮ ಭಾವನೆಗಳನ್ನು ಅಭಿವ್ಯಕ್ತಿಸಿದ ಕಾಳಿದಾಸನ ಪ್ರತಿಭೆ ಈ ಕಾವ್ಯದಲ್ಲಿ ತನ್ನ ಪರಾಕಾಷ್ಠೆಯನ್ನು ತಲುಪಿದೆ. ಆದ್ದರಿಂದಲೇ ಮೇಘದೂತವು ಇಂದಿಗೂ ಸಂಸ್ಕೃತ ಸಾಹಿತ್ಯದ ಅಮರ ಕೃತಿಗಳಲ್ಲಿ ಒಂದಾಗಿ, ಸಾಹಿತ್ಯಾಸಕ್ತರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದಿದೆ.



| ರೂಪ ಮಂಜುನಾಥ ಹೊಳೆನರಸೀಪುರ



# ಇಲಾನ್ ಮಸ್ಕ್: ನಾಳೆಯ ಜಗತ್ತನ್ನು ಇಂದೇ ಸೃಷ್ಟಿಸುತ್ತಿರುವ ದಾರ್ಶನಿಕ

ಜಗತ್ತಿನಲ್ಲಿ ಇಬ್ಬರು ವ್ಯಕ್ತಿಗಳಿರುತ್ತಾರೆ. ಒಬ್ಬರು ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ಬದುಕುವವರು, ಮತ್ತೊಬ್ಬರು ಕಾಲದ ದಿಕ್ಕನ್ನೇ ಬದಲಾಯಿಸುವವರು! ಎರಡನೇ ಸಾಲಿಗೆ ಸೇರಿದ ಜಾಗತಿಕ ತಂತ್ರಜ್ಞಾನದ ದೈತ್ಯನೇ ಇಲಾನ್ ಮಸ್ಕ್. ಸ್ಪೇಸ್‌ಎಕ್ಸ್, ಟೆಸ್ಲಾ, ನ್ಯೂರಾಲಿಂಕ್ ಮುಂತಾದ ಕ್ರಾಂತಿಕಾರಿ ಸಂಸ್ಥೆಗಳ ಮೂಲಕ ಇಡೀ ವಿಶ್ವದ ಗಮನ ಸೆಳೆದಿರುವ ಮಸ್ಕ್ ಅವರ ನಡೆಗಳು ಹಲವು ಬಾರಿ ವಿವಾದಾತ್ಮಕ ಎನಿಸಿದರೂ, ಅವರ ದೂರದೃಷ್ಟಿಯನ್ನು ಯಾರೂ ಪ್ರಶ್ನಿಸುವಂತಿಲ್ಲ. ಭೌತವಿಜ್ಞಾನದ ಮೂಲ ನಿಯಮಗಳನ್ನು ಹಿಡಿದು ಭವಿಷ್ಯದ ಸಾಮ್ರಾಜ್ಯ ಕಟ್ಟುತ್ತಿರುವ ಅವರ ಈ ಅಪ್ರತಿಮ ಮುಂದಾಲೋಚನೆಯ ಹಿಂದಿರುವ ಶಕ್ತಿಯ ಮೂಲ ಎಲ್ಲಿದೆ? ಆ ಕುರಿತಾದ ಒಂದು ಆಳವಾದ ವಿಶ್ಲೇಷಣೆ ನೋಡೋಣ ಬನ್ನಿ."

ಇಲಾನ್ ಮಸ್ಕ್ ಅವರ ಸುದೀರ್ಘ ಹಾಗೂ ರೋಚಕವಾದ ಜೀವನ ಪ್ರಯಾಣವನ್ನು ಅವರ ಬಾಲ್ಯ, ವಿದ್ಯಾಭ್ಯಾಸ, ವೃತ್ತಿಜೀವನ ಮತ್ತು ವೈಯಕ್ತಿಕ ಬದುಕಿನ ಹಿನ್ನೆಲೆಯಲ್ಲಿ ಅತ್ಯಂತ ಸೂಕ್ಷ್ಮವಾಗಿ ತಿಳಿದುಕೊಳ್ಳುವುದಾದರೆ,

ಬಾಲ್ಯದಲ್ಲಿ ಮಸ್ಕ್ ಸವಾಲುಗಳ ನಡುವೆ ಅರಳಿದ ಪ್ರತಿಭೆ! ಇಲಾನ್ ಮಸ್ಕ್ ಜೂನ್ 28, 1971 ರಂದು ದಕ್ಷಿಣ ಆಫ್ರಿಕಾದ ಪ್ರಿಟೋರಿಯಾದಲ್ಲಿ ಜನಿಸಿದರು. ತಂದೆ ಎರ್ರೋಲ್ ಮಸ್ಕ್ (ಇಂಜಿನಿಯರ್) ಮತ್ತು ತಾಯಿ ಮೇಯಿ ಮಸ್ಕ್ (ಮಾಡೆಲ್ ಹಾಗೂ ಪೌಷ್ಟಿಕ ಆಹಾರ ತಜ್ಞೆ). ಬಾಲ್ಯದಲ್ಲಿ ತುಂಬಾ ಅಂತರ್ಮುಖಿಯಾಗಿದ್ದ (Introvert) ಮಸ್ಕ್ ಅವರಿಗೆ ಪುಸ್ತಕಗಳೇ ಜಗತ್ತಾಗಿದ್ದವು. ದಿನಕ್ಕೆ 10 ಗಂಟೆ ಓದುತ್ತಿದ್ದ ಇವರು, ಕೇವಲ 10ನೇ ವಯಸ್ಸಿನಲ್ಲೇ ಕಂಪ್ಯೂಟರ್ ಪ್ರೋಗ್ರಾಮಿಂಗ್ ಅನ್ನು ತಾವೇ ಕಲಿತರು. ಕೇವಲ 12 ವರ್ಷ ವಯಸ್ಸಿನಲ್ಲಿ 'ಬ್ಲಾಸ್ಟಾರ್' (Blastar) ಎಂಬ ವಿಡಿಯೋ ಗೇಮ್ ಸೃಷ್ಟಿಸಿ, ಅದನ್ನು 500 ಡಾಲರ್‌ಗೆ ಮಾರಾಟ ಮಾಡಿದ್ದು ಅವರ ಮೊದಲ ವಾಣಿಜ್ಯ ಯಶಸ್ಸು.

ಶಾಲೆಯಲ್ಲಿ ಸಹಪಾಠಿಗಳಿಂದ ತೀವ್ರವಾಗಿ ಪೀಡನೆಗೆ (Bullying) ಒಳಗಾಗಿದ್ದರು. ಒಮ್ಮೆ ಅವರ ತಂಡ ಇವರನ್ನು ಮೆಟ್ಟಿಲಿನಿಂದ ತಳ್ಳಿ ಆಸ್ಪತ್ರೆಗೆ ಸೇರುವಂತೆ ಮಾಡಿತ್ತು. ತಂದೆ-ತಾಯಿಯ ವಿಚ್ಛೇದನವೂ ಇವರ ಬಾಲ್ಯದ ಮೇಲೆ ಕಹಿ ನೆರಳು ಚಾಚಿತ್ತು.

**ವಿದ್ಯೆ:** ಆ ದಿನಗಳಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಕಡ್ಡಾಯ ಸೇನಾ ತರಬೇತಿಯಿಂದ ತಪ್ಪಿಸಿಕೊಳ್ಳಲು ಮತ್ತು ಅಮೆರಿಕ ತಲುಪುವ ಕನಸಿನೊಂದಿಗೆ ತಮ್ಮ 17ನೇ ವಯಸ್ಸಿನಲ್ಲಿ ತಾಯಿಯ ತಾಯ್ನಾಡಾದ ಕೆನಡಾಕ್ಕೆ ವಲಸೆ ಹೋದರು.

**ಪದವಿಗಳು:** ಕೆನಡಾದ ಕ್ವೀನ್ಸ್ ವಿಶ್ವವಿದ್ಯಾಲಯ ಸೇರಿದ ಇವರು, ನಂತರ ಅಮೆರಿಕದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಂಡು ಅಲ್ಲಿ ಭೌತವಿಜ್ಞಾನ (Physics) ಮತ್ತು ಅರ್ಥಶಾಸ್ತ್ರದಲ್ಲಿ (Economics) ಬಿ.ಎಸ್‌ಸಿ ಪದವಿ ಪಡೆದರು.

**ಪಿಎಚ್‌ಡಿ ತೊರೆದದ್ದು:** 1995 ರಲ್ಲಿ ಕ್ಯಾಲಿಫೋರ್ನಿಯಾದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಭೌತವಿಜ್ಞಾನದಲ್ಲಿ ಪಿಎಚ್‌ಡಿ ಮಾಡಲು ಸೇರಿದರು. ಆದರೆ, ಆ ದಿನಗಳಲ್ಲಿ ಇಂಟರ್ನೆಟ್ ಜಗತ್ತು ಬೆಳೆಯುತ್ತಿದ್ದುದನ್ನು ಕಂಡು, ಕೇವಲ ಎರಡೇ ದಿನಗಳಲ್ಲಿ ಕಾಲೇಜು ತೊರೆದು ಸ್ವಂತ ಉದ್ಯಮದ ಕಡೆ ಮುಖ ಮಾಡಿದರು.

**ನೌಕರಿ ಮತ್ತು ಉದ್ಯಮ:** ಶೂನ್ಯದಿಂದ ಬೃಹತ್ ಸಾಮ್ರಾಜ್ಯ ಕಟ್ಟಿದ ನಾಯಕ ಮಸ್ಕ್! ಮಸ್ಕ್ ಅವರು ಯಾರದೋ ಕೈಕೆಳಗೆ ಸಾಂಪ್ರದಾಯಿಕ ನೌಕರಿ ಮಾಡಿದವರಲ್ಲ; ಬದಲಿಗೆ ತಾವೇ ಉದ್ಯೋಗಗಳನ್ನು ಸೃಷ್ಟಿಸಿದವರು.

**ಜಿಪ್2 (Zip2):** ತಮ್ಮ ಸಹೋದರ ಕಿಂಬಾಲ್ ಜೊತೆ ಸೇರಿ ಆರಂಭಿಸಿದ ಮೊದಲ ಇಂಟರ್ನೆಟ್ ಕಂಪನಿ. ಇದನ್ನು 1999 ರಲ್ಲಿ ಕಾಂಪ್ಯಾಕ್ ಸಂಸ್ಥೆಗೆ ಮಾರಿದಾಗ ಮಸ್ಕ್ ಅವರಿಗೆ 22 ಮಿಲಿಯನ್ ಡಾಲರ್ ಸಿಕ್ಕಿತು.

**ಎಕ್ಸ್.ಕಾಮ್ / ಪೇಪಾಲ್ (PayPal):** ಆನ್‌ಲೈನ್ ಬ್ಯಾಂಕಿಂಗ್ ಕ್ರಾಂತಿ ಆರಂಭಿಸಿದ ಇವರು, ನಂತರ ಅದನ್ನು 'ಪೇಪಾಲ್' ಆಗಿ ಬದಲಾಯಿಸಿದರು. ಇದನ್ನು ಇಬೇ (eBay) ಸಂಸ್ಥೆಗೆ ಮಾರಾಟ ಮಾಡಿದಾಗ ಇವರಿಗೆ ಭಾರಿ ಪ್ರಮಾಣದ ಆಸ್ತಿ ಲಭಿಸಿತು.

**ಸ್ಪೇಸ್‌ಎಕ್ಸ್ ಮತ್ತು ಟೆಸ್ಲಾ (2002–2004):** ಪೇಪಾಲ್‌ನಿಂದ ಬಂದ ಸಂಪೂರ್ಣ ಹಣವನ್ನು ಮರುಬಳಕೆ ಮಾಡಬಹುದಾದ ರಾಕೆಟ್ ತಯಾರಿಸುವ 'ಸ್ಪೇಸ್‌ಎಕ್ಸ್' ಮತ್ತು ಎಲೆಕ್ಟ್ರಿಕ್ ಕಾರುಗಳ 'ಟೆಸ್ಲಾ' ಕಂಪನಿಗಳ ಮೇಲೆ ಪಣಕ್ಕಿಟ್ಟರು. 2008 ರ ವೇಳೆಗೆ ಈ ಎರಡೂ ಕಂಪನಿಗಳು ದಿವಾಳಿಯಾಗುವ ಹಂತ ತಲುಪಿದ್ದರೂ, ಇವರ ಹಠ ಜಗತ್ತಿನ ಅತಿ ದೊಡ್ಡ ಕಂಪನಿಗಳನ್ನಾಗಿ ಇವುಗಳನ್ನು ರೂಪಿಸಿತು.

**ಇತರ ಸಂಸ್ಥೆಗಳು:** ನಂತರ ಮೆದುಳಿನ ತಂತ್ರಜ್ಞಾನದ ನ್ಯೂರೋಲಿಂಕ್, ಸುರಂಗ ಮಾರ್ಗ ನಿರ್ಮಿಸುವ ದಿ ಬೋರಿಂಗ್ ಕಂಪನಿ, ಕೃತಕ ಬುದ್ಧಿಮತ್ತೆಯ ಥಂಖ ಮತ್ತು ಪ್ರಸಿದ್ಧ ಸಾಮಾಜಿಕ ಜಾಲತಾಣ X (ಟ್ವಿಟ್ಟರ್) ಅನ್ನು ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಂಡರು.

ಮಸ್ಕ್ ಅವರದ್ದು ವಿಲಕ್ಷಣ ಮತ್ತು ಸಂಕೀರ್ಣ ಜೀವನಶೈಲಿಯ ಬದುಕು.

**ಕೆಲಸದ ಹುಚ್ಚು:** ವಾರಕ್ಕೆ 100 ರಿಂದ 120 ಗಂಟೆಗಳ ಕಾಲ ಕೆಲಸ ಮಾಡುವ ಇವರು, ಹಲವು ಬಾರಿ ಆಫೀಸ್ ಹಾಗೂ ಫ್ಯಾಕ್ಟರಿಗಳ ನೆಲದ ಮೇಲೆಯೇ ಮಲಗಿದ ಉದಾಹರಣೆಗಳಿವೆ.

**ವೈಯಕ್ತಿಕ ಜೀವನ:** ಇವರ ವೈಯಕ್ತಿಕ ಬದುಕು ಸಾಕಷ್ಟು ಏರಿಳಿತಗಳಿಂದ ಕೂಡಿದೆ. ಜಸ್ಟೀನ್ ವಿಲ್ಸನ್ (ಮೊದಲ ಪತ್ನಿ) ಮತ್ತು ತಲ್ಲುಲಾ ರೇಲಿ ಅವರೊಂದಿಗೆ ವಿವಾಹ ಮುರಿದುಬಿದ್ದಿದೆ. ಗಾಯಕಿ ಗ್ರೈಮ್ಸ್ ಮತ್ತು ಇತರರ ಒಡನಾಟದಿಂದ ಇವರಿಗೆ ಒಟ್ಟು 12 ಕ್ಕೂ ಹೆಚ್ಚು ಮಕ್ಕಳಿದ್ದಾರೆ. ತಮ್ಮ ಮಕ್ಕಳಿಗೂ ವಿಚಿತ್ರವಾದ ಹೆಸರುಗಳನ್ನು (ಉದಾಹರಣೆಗೆ: X Æ A-12) ಇಡುವ ಮೂಲಕ ಸುದ್ದಿಯಾಗುತ್ತಾರೆ.

**ಪ್ರಸ್ತುತ ಸ್ಥಿತಿ:** ಸದ್ಯ ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿಗಳಲ್ಲಿ ಅಗ್ರಸ್ಥಾನದಲ್ಲಿರುವ ಇವರು, ಅಮೆರಿಕದ ರಾಜಕೀಯ ಮತ್ತು ಜಾಗತಿಕ ನಿರ್ಧಾರಗಳ ಮೇಲೂ ತೀವ್ರ ಪ್ರಭಾವ ಬೀರುವ ಶಕ್ತಿಯಾಗಿ ಬೆಳೆದಿದ್ದಾರೆ.

ವಿಜ್ಞಾನದ ಕಲ್ಪನಾ ಕಥೆಗಳನ್ನು (Science Fiction) ಓದುವಾಗ ನಮಗೆ ರೋಮಾಂಚನವಾಗುತ್ತದೆ. ಮಂಗಳ ಗ್ರಹದಲ್ಲಿ ನಗರಗಳು, ಮನುಷ್ಯನ ಮೆದುಳನ್ನು ಸಂಪರ್ಕಿಸುವ ಕಂಪ್ಯೂಟರ್ ಚಿಪ್‌ಗಳು, ಚಾಲಕನೇ ಇಲ್ಲದೆ ಓಡುವ ಕಾರುಗಳು... ಇವೆಲ್ಲವೂ ಕೇವಲ ಪುಸ್ತಕ ಅಥವಾ ಸಿನೆಮಾಗಳಿಗಷ್ಟೇ ಸೀಮಿತ ಅಂದುಕೊಂಡಿದ್ದ ಜಗತ್ತಿಗೆ, ಇವೆಲ್ಲವನ್ನೂ ನಮ್ಮ ಕಣ್ಣೆದುರೇ ವಾಸ್ತವ ಮಾಡುತ್ತಿರುವ ಧೀಮಂತ ವ್ಯಕ್ತಿ ಇಲಾನ್ ಮಸ್ಕ್. ಸಾಮಾನ್ಯ ಉದ್ಯಮಿಗಳು ಮುಂದಿನ ಐದು ವರ್ಷಗಳ ಲಾಭದ ಲೆಕ್ಕಾಚಾರ ಹಾಕಿದರೆ, ಮಸ್ಕ್ ಮುಂದಿನ ಐವತ್ತು ವರ್ಷಗಳ ನಂತರದ ಮಾನವ ಕುಲದ ಅಸ್ತಿತ್ವದ ಬಗ್ಗೆ ಇಂದೇ ತಲೆಕೆಡಿಸಿಕೊಳ್ಳುತ್ತಾರೆ. ಧಾವಿಸುವ ಕಾಲಕ್ಕೆ ಮುನ್ನಡೆಯುವ ದಾರಿದೀಪದಂತಿರುವ ಈ ವ್ಯಕ್ತಿಗೆ ಇಷ್ಟೊಂದು ಅಗಾಧವಾದ ಮುಂದಾಲೋಚನೆ ಹೇಗೆ ಸಾಧ್ಯವಾಯಿತು? ಅವರ ಆಲೋಚನಾ ಶೈಲಿಯ ರಹಸ್ಯವೇನು? ಆ ಕುರಿತಾದ ಒಂದು ಆಳವಾದ ವಿಶ್ಲೇಷಣೆ ಇಲ್ಲಿದೆ.

1. ಫಸ್ಟ್ ಪ್ರಿನ್ಸಿಪಲ್ಸ್ ಥಿಂಕಿಂಗ್ (ಮೂಲಭೂತ ಸತ್ಯದ ಹುಡುಕಾಟ)

ಮಸ್ಕ್ ಅವರ ಯಶಸ್ಸಿನ ಅತ್ಯಂತ ದೊಡ್ಡ ರಹಸ್ಯ ಅವರ ಆಲೋಚನಾ ವಿಧಾನದಲ್ಲಿದೆ. ಅವರು ಯಾವುದೋ ಒಂದು ಸಮಸ್ಯೆಯನ್ನು ನೋಡುವಾಗ, "ಬೇರೆಯವರು ಇದನ್ನು ಹೇಗೆ ಮಾಡಿದ್ದಾರೆ?" ಅಥವಾ "ಇತಿಹಾಸದಲ್ಲಿ ಇದು ಹೇಗೆ ನಡೆದುಕೊಂಡು ಬಂದಿದೆ?" ಎಂದು ಯೋಚಿಸುವುದಿಲ್ಲ. ಬದಲಿಗೆ, ಭೌತವಿಜ್ಞಾನದ ಮೂಲ ತತ್ವಗಳಿಗೆ (First Principles) ಹೋಗುತ್ತಾರೆ.

**ಒಂದು ಉದಾಹರಣೆ:** ಸ್ಪೇಸ್‌ಎಕ್ಸ್ (SpaceX) ಆರಂಭಿಸುವಾಗ ರಾಕೆಟ್‌ಗಳ ಬೆಲೆ ಗಗನಚುಂಬಿಯಾಗಿತ್ತು. ಮಸ್ಕ್ ಅವರು ರಾಕೆಟ್ ಮಾಡಲು ಬೇಕಾಗುವ ಮೂಲ ಕಚ್ಚಾ ಸಾಮಗ್ರಿಗಳ (ಅಲ್ಯೂಮಿನಿಯಂ, ಕಾರ್ಬನ್ ಫೈಬರ್, ತಾಮ್ರ ಇತ್ಯಾದಿ) ಮಾರುಕಟ್ಟೆ ಬೆಲೆಯನ್ನು ಲೆಕ್ಕ ಹಾಕಿದರು. ಆಗ ಅವರಿಗೆ ತಿಳಿದಿದ್ದು ಏನೆಂದರೆ, ಇಡೀ ರಾಕೆಟ್‌ನ ಒಟ್ಟು ಬೆಲೆಯಲ್ಲಿ ಕಚ್ಚಾ ವಸ್ತುಗಳ ಪಾಲು ಕೇವಲ ಶೇಕಡಾ 2 ರಷ್ಟು ಮಾತ್ರ! ಉಳಿದಿದ್ದೆಲ್ಲವೂ ಮಧ್ಯವರ್ತಿಗಳ ಮತ್ತು ಹಳೆಯ ನಿರ್ಮಾಣ ಪದ್ಧತಿಯ ವೆಚ್ಚ. ಈ ಮೂಲ ಸತ್ಯವನ್ನು ಹಿಡಿದು, ಅವರೇ ಸ್ವತಃ ರಾಕೆಟ್ ಬಿಡಿಭಾಗಗಳನ್ನು ತಯಾರಿಸಲು ಆರಂಭಿಸಿದರು ಮತ್ತು ಮರುಬಳಕೆ ಮಾಡಬಹುದಾದ (Reusable) ರಾಕೆಟ್‌ಗಳನ್ನು ಸೃಷ್ಟಿಸಿ ಇಡೀ ಬಾಹ್ಯಾಕಾಶ ರಂಗದ ಚಿತ್ರಣವನ್ನೇ ಬದಲಾಯಿಸಿದರು.

2. ಪುಸ್ತಕಗಳ ವ್ಯಸನ ಮತ್ತು ತೀವ್ರ ಜ್ಞಾನದಾಹ

ಮಸ್ಕ್ ಅವರ ಮುಂದಾಲೋಚನೆಗೆ ಅಡಿಪಾಯ ಹಾಕಿದ್ದು ಅವರ ಬಾಲ್ಯದ ಓದು. ದಕ್ಷಿಣ ಆಫ್ರಿಕಾದಲ್ಲಿ ಕಳೆದ ಅವರ ಬಾಲ್ಯದ ದಿನಗಳಲ್ಲಿ, ಅವರು ದಿನಕ್ಕೆ ಹತ್ತಾರು ಗಂಟೆಗಳ ಕಾಲ ಪುಸ್ತಕ ಓದುತ್ತಿದ್ದರು. ಕೇವಲ ಒಂಬತ್ತು ವರ್ಷ ವಯಸ್ಸಿನಲ್ಲೇ ಇಡೀ 'ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ'ವನ್ನು ಓದಿ ಮುಗಿಸಿದ್ದರು.

ಬಾಹ್ಯಾಕಾಶ ವಿಜ್ಞಾನದಲ್ಲಿ ಯಾವುದೇ ಔಪಚಾರಿಕ ಪದವಿ ಇಲ್ಲದಿದ್ದರೂ, ರಾಕೆಟ್ ವಿಜ್ಞಾನದ ದಪ್ಪ ದಪ್ಪ ಪುಸ್ತಕಗಳನ್ನು ತಾವೇ ಓದಿ, ತಜ್ಞರೊಂದಿಗೆ ಚರ್ಚಿಸಿ ಆ ಜ್ಞಾನವನ್ನು ಕರಗತ ಮಾಡಿಕೊಂಡರು. ಇತಿಹಾಸ, ತತ್ವಶಾಸ್ತ್ರ, ಕಾಮಿಕ್ಸ್ ಮತ್ತು ವಿಜ್ಞಾನದ ಈ ಸಮ್ಮಿಲನವೇ ಅವರಲ್ಲಿ ಭವಿಷ್ಯವನ್ನು ಮುಂಗಾಣುವ ಶಕ್ತಿಯನ್ನು ತುಂಬಿತು.

3. ಹತ್ತಾರು ವರ್ಷಗಳ ನಂತರದ ಭವಿಷ್ಯದ ಅರಿವು

ಮಸ್ಕ್ ಅವರ ಪ್ರತಿಯೊಂದು ನವೋದ್ಯಮವೂ ಮಾನವಕುಲ ಎದುರಿಸಲಿರುವ ಸವಾಲುಗಳನ್ನು ಇಂದೇ ಗುರುತಿಸಿ ಅದಕ್ಕೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ಕೆಲಸ ಮಾಡುತ್ತವೆ:

ಜಾಗತಿಕ ತಾಪಮಾನದಿಂದ ಭೂಮಿ ತತ್ತರಿಸಬಹುದು ಎಂದು ಇಪ್ಪತ್ತು ವರ್ಷಗಳ ಹಿಂದೆಯೇ ಯೋಚಿಸಿ 'ಟೆಸ್ಲಾ' ಇಂಧನ ಕ್ರಾಂತಿಗೆ ಕೈ ಹಾಕಿದರು.

ಕೃತಕ ಬುದ್ಧಿಮತ್ತೆ (AI) ಮನುಷ್ಯನನ್ನು ಮೀರಿಸಬಹುದು ಎಂದು ಅರಿತು, ಅದಕ್ಕೆ ಪರ್ಯಾಯವಾಗಿ ಮಾನವನ ಮೆದುಳಿನ ಸಾಮರ್ಥ್ಯ ಹೆಚ್ಚಿಸಲು 'ನ್ಯೂರೋಲಿಂಕ್' ಆರಂಭಿಸಿದರು.

ಭೂಮಿಗೆ ಯಾವುದೇ ಮಹಾ ದುರಂತ ಎದುರಾದರೂ ಮಾನವನ ವಂಶ ಅಳಿಯಬಾರದು ಎಂಬ ದೂರದೃಷ್ಟಿಯಿಂದ 'ಮಂಗಳ ಗ್ರಹದ ವಸಾಹತು' ಯೋಜನೆಗೆ ಚಾಲನೆ ನೀಡಿದರು.

ಅವರ ಈ ಮುಂದಾಲೋಚನೆ ಕೇವಲ ವ್ಯಾಪಾರಕ್ಕಾಗಿ ಅಲ್ಲ, ಬದಲಿಗೆ ಮಾನವನ ಅಸ್ತಿತ್ವವನ್ನು ಉಳಿಸುವ ಒಂದು ಧೀಮಂತ ಸಂಕಲ್ಪಬದ್ಧತೆಯಾಗಿದೆ.

4. ಸೋಲಿನ ಭೀತಿಯಿಲ್ಲದ ಸಾಹಸ ಪ್ರವೃತ್ತಿ

"ಯಾವುದಾದರೂ ಒಂದು ವಿಷಯ ಅತ್ಯಂತ ಮುಖ್ಯ ಎಂದಾದಾಗ, ಸೋಲುವ (ಸಾಧ್ಯತೆ) ಹೆಚ್ಚಿದ್ದರೂ ನೀವು ಅದನ್ನು ಮಾಡಿಯೇ ತೀರಬೇಕು" ಎನ್ನುತ್ತಾರೆ ಮಸ್ಕ್. ಸ್ಪೇಸ್‌ಎಕ್ಸ್ ಮತ್ತು ಟೆಸ್ಲಾ ಆರಂಭಿಕ ದಿನಗಳಲ್ಲಿ ಸತತವಾಗಿ ಮೂರು ಬಾರಿ ಸೋತಾಗ ಅವರು ದಿವಾಳಿಯಾಗುವ ಹಂತಕ್ಕೆ ತಲುಪಿದ್ದರು. ಆದರೆ ಭವಿಷ್ಯದ ಮೇಲಿದ್ದ ನಂಬಿಕೆ ಅವರನ್ನು ಮುನ್ನಡೆಸಿತು. ಈ ಅದಮ್ಯ ಧೈರ್ಯವೇ ಅವರ ಮುಂದಾಲೋಚನೆಗಳು ಕಾಗದದ ಮೇಲಷ್ಟೇ ಉಳಿಯದೆ ವಾಸ್ತವ ರೂಪ ಪಡೆಯಲು ಕಾರಣವಾಯಿತು.

ಮಂಗಳ ಗ್ರಹದ ಯಾತ್ರೆ: ಮಾನವನ ಅಸ್ತಿತ್ವಕ್ಕೆ ಹೊಸ ವಿಳಾಸದ ಹುಡುಕಾಟ

ಇಲಾನ್ ಮಸ್ಕ್ ಅವರ ಮುಂದಾಲೋಚನೆಯ ಅತ್ಯಂತ ರೋಮಾಂಚಕ ಮತ್ತು ಸಾಹಸಮಯ ಭಾಗ ಎಂದರೆ ಅದು ಸ್ಪೇಸ್‌ಎಕ್ಸ್ (SpaceX) ಮೂಲಕ ಅವರು ಹಮ್ಮಿಕೊಂಡಿರುವ ಮಂಗಳ ಗ್ರಹದ ಮಹಾಯಾತ್ರೆ. ಮಸ್ಕ್ ಕೇವಲ ಲಾಭ ಗಳಿಸುವ ಉದ್ಯಮಿಯಲ್ಲ, ಬದಲಿಗೆ ಮಾನವ ಕುಲದ ಭವಿಷ್ಯವನ್ನು ಗ್ರಹಾಂತರ ವಿಸ್ತರಿಸಲು ಹೊರಟಿರುವ ದಾರ್ಶನಿಕ ಎಂಬುದಕ್ಕೆ ಈ ಯೋಜನೆಯೇ ಸಾಕ್ಷಿ.

**1. ಮಲ್ಟಿ-ಪ್ಲಾನೆಟರಿ ಸ್ಪೀಷೀಸ್ (ಬಹುವಿಧ ಗ್ರಹಗಳ ಜೀವಿ):** ಮಸ್ಕ್ ಅವರ ಪ್ರಕಾರ, ಭೂಮಿಯ ಮೇಲಿನ ಸಂಪನ್ಮೂಲಗಳು ಮುಗಿದುಹೋದರೆ ಅಥವಾ ಯಾವುದಾದರೂ ಮಹಾ ಪರಮಾಣು ಯುದ್ಧ, ಉಲ್ಕಾಪಾತ ಅಥವಾ ಜಾಗತಿಕ ಸಾಂಕ್ರಾಮಿಕ ರೋಗಗಳು ಸಂಭವಿಸಿದರೆ ಇಡೀ ಮಾನವ ಕುಲ ಒಂದೇ ಬಾರಿಗೆ ಅಳಿದು ಹೋಗಬಹುದು. ಈ ಅಪಾಯದಿಂದ ಮನುಷ್ಯನನ್ನು ರಕ್ಷಿಸಬೇಕಾದರೆ, ನಾವು ಕೇವಲ ಭೂಮಿಗೆ ಸೀಮಿತವಾಗದೆ ಬೇರೆ ಗ್ರಹಗಳಲ್ಲೂ ವಾಸಿಸಲು ಕಲಿಯಬೇಕು. ಈ ಯೋಚನೆಯೇ ಮಂಗಳ ಗ್ರಹದಲ್ಲಿ ಮಾನವ ವಸಾಹತು ನಿರ್ಮಿಸುವ ಅವರ ಹಠಕ್ಕೆ ಕಾರಣವಾಗಿದೆ.

**2. 'ಸ್ಟಾರ್‌ಶಿಪ್' (Starship) ಎಂಬ ದೈತ್ಯ ತಂತ್ರಜ್ಞಾನ:** ಮಂಗಳ ಗ್ರಹಕ್ಕೆ ಕೇವಲ ರೋವರ್‌ಗಳನ್ನು ಕಳುಹಿಸಿದರೆ ಸಾಲದು, ನೂರಾರು ಮನುಷ್ಯರನ್ನು ಮತ್ತು ಟನ್‌ಗಟ್ಟಲೆ ಸಾಮಗ್ರಿಗಳನ್ನು ಒಟ್ಟಿಗೆ ಕೊಂಡೊಯ್ಯುವ ಶಕ್ತಿಶಾಲಿ ನೌಕೆ ಬೇಕು ಎಂದು ಮಸ್ಕ್ ಅರಿತರು. ಇದಕ್ಕಾಗಿ ಸ್ಪೇಸ್‌ಎಕ್ಸ್ ಸಂಸ್ಥೆಯು ಇತಿಹಾಸದಲ್ಲೇ ಅತ್ಯಂತ ದೈತ್ಯ ಮತ್ತು ಮರುಬಳಕೆ ಮಾಡಬಹುದಾದ 'ಸ್ಟಾರ್‌ಶಿಪ್' ರಾಕೆಟ್ ಅನ್ನು ಅಭಿವೃದ್ಧಿಪಡಿಸುತ್ತಿದೆ. ಇದು ಕೇವಲ ಬಾಹ್ಯಾಕಾಶ ನೌಕೆಯಲ್ಲ, ಭವಿಷ್ಯದ ಮಾನವನ ವಲಸೆಯ ಹಡಗು.

**3. ಮಂಗಳ ಗ್ರಹದಲ್ಲಿ ಸ್ವಾವಲಂಬಿ ನಗರದ ಕನಸು:** ಮಸ್ಕ್ ಅವರ ಮುಂದಾಲೋಚನೆ ಕೇವಲ ಮಂಗಳ ಗ್ರಹದ ಮೇಲೆ ಕಾಲಿಟ್ಟು ಬರುವುದಕ್ಕೆ ಸೀಮಿತವಾಗಿಲ್ಲ. ಮುಂದಿನ ಕೆಲವು ದಶಕಗಳಲ್ಲಿ ಸುಮಾರು 10 ಲಕ್ಷ ಜನರನ್ನು ಮಂಗಳ ಗ್ರಹಕ್ಕೆ ಕೊಂಡೊಯ್ದು ಅಲ್ಲಿ ಒಂದು ಸ್ವಾವಲಂಬಿ ನಗರವನ್ನು (Self-sustaining City) ನಿರ್ಮಿಸುವುದು ಅವರ ಗುರಿ.

ಅಲ್ಲಿನ ಕಾರ್ಬನ್ ಡೈಆಕ್ಸೈಡ್ ಮತ್ತು ಮಂಜುಗಡ್ಡೆಯನ್ನು ಬಳಸಿ ಉಸಿರಾಡಲು ಆಮ್ಲಜನಕ ಹಾಗೂ ರಾಕೆಟ್‌ಗೆ ಬೇಕಾದ ಇಂಧನವನ್ನು ತಯಾರಿಸುವ ತಂತ್ರಜ್ಞಾನದ ಬಗ್ಗೆ ಇಂದೇ ಸಂಶೋಧನೆ ನಡೆಸುತ್ತಿದ್ದಾರೆ.

ಇಲಾನ್ ಮಸ್ಕ್ ಅವರ ಕೆಲವು ಪ್ರಸ್ತುತ ನಿರ್ಧಾರಗಳು ಅಥವಾ ಸಾಮಾಜಿಕ ಜಾಲತಾಣಗಳ ನಡೆಗಳು ಸಮಾಜದಲ್ಲಿ ಭಿನ್ನಾಭಿಪ್ರಾಯ ಮೂಡಿಸಿರಬಹುದು. ಆದರೆ, ಧಾವಿಸುವ ಕಾಲಕ್ಕಿಂತ ನಾಲ್ಕು ಹೆಜ್ಜೆ ಮುಂದೆ ನಿಂತು ಯೋಚಿಸುವ ಅವರ ಈ 'ಮುಂದಾಲೋಚನೆ' ಮಾತ್ರ ಜಗತ್ತಿಗೆ ಒಂದು ದಾರಿದೀಪ. ಇತಿಹಾಸದ ಸಿದ್ಧ ಸೂತ್ರಗಳನ್ನು ಮುರಿದು, ವಿಜ್ಞಾನದ ಗಡಿಗಳನ್ನು ವಿಸ್ತರಿಸುತ್ತಿರುವ ಮಸ್ಕ್, ಆಧುನಿಕ ಜಗತ್ತಿನ ಅತಿ ದೊಡ್ಡ ದಾರ್ಶನಿಕ ಉದ್ಯಮಿ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

ದಕ್ಷಿಣ ಆಫ್ರಿಕಾದ ಬೀದಿಗಳಲ್ಲಿ ಸಾಮಾನ್ಯ ಬಾಲಕನಾಗಿ ಬೆಳೆದ ಇಲಾನ್ ಮಸ್ಕ್, ಇಂದು ಇಡೀ ಭೂಮಿಯ ತಂತ್ರಜ್ಞಾನ ಮತ್ತು ಬಾಹ್ಯಾಕಾಶದ ಭವಿಷ್ಯವನ್ನು ನಿರ್ಧರಿಸುವ ದೈತ್ಯ ಶಕ್ತಿಯಾಗಿ ಹೊರಹೊಮ್ಮಿರುವುದು ಮಾನವ ಇತಿಹಾಸದ ಒಂದು ರೋಚಕ ಅಧ್ಯಾಯ.

**ವಂದನೆಗಳು.**

# ಸಂಬಳ ಎಷ್ಟಿದ್ದರೇನು ಫಲ; ಸಮಯವಿಲ್ಲದ ಜೀವಕ್ಕೆ



| ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ




ಬೆಳಗಿನ ಗಡಿಯಾರದ ಘಂಟೆ ಮೊಳಗುವ ಮುನ್ನವೇ ಮನಸ್ಸು ಕೆಲಸದ ಪಟ್ಟಿಯನ್ನು ನೆನಪಿಸಿಕೊಳ್ಳುತ್ತದೆ. ಕಣ್ಣುಗಳು ತೆರೆದುಕೊಳ್ಳುವ ಮೊದಲೇ ಜವಾಬ್ದಾರಿಗಳು ಎಚ್ಚರಗೊಳ್ಳುತ್ತವೆ. ಒಂದು ಕೈಯಲ್ಲಿ ಕಾಫಿಯ ಕಪ್, ಇನ್ನೊಂದು ಕೈಯಲ್ಲಿ ಮೊಬೈಲ್, ಮನಸ್ಸಿನಲ್ಲಿ ಮುಗಿಯದ ಸಭೆಗಳು, ಪೂರ್ಣಗೊಳ್ಳದ ಗುರಿಗಳು. ಹೀಗೆ ಆರಂಭವಾಗುವ ದಿನ, ರಾತ್ರಿ ತಲೆದಿಂಬಿನ ಮೇಲೆ ದೇಹವನ್ನು ಇಡುವಷ್ಟರಲ್ಲಿ ಕೊನೆಗೊಳ್ಳುತ್ತದೆ. ಮಧ್ಯದಲ್ಲಿ ಬದುಕು ಎಲ್ಲೋ ಕಾಣೆಯಾಗಿರುತ್ತದೆ.

ಇಂದಿನ ಜಗತ್ತು ಯಶಸ್ಸನ್ನು ಬಹಳಷ್ಟು ಸಂಬಳದ ಅಂಕೆಯಲ್ಲಿ ಅಳೆಯುತ್ತದೆ. ತಿಂಗಳ ಕೊನೆಯಲ್ಲಿ ಬ್ಯಾಂಕ್ ಖಾತೆಗೆ ಜಮೆಯಾಗುವ ಮೊತ್ತವೇ ವ್ಯಕ್ತಿಯ ಮೌಲ್ಯ ಎಂಬ ಭ್ರಮೆ ನಿಧಾನವಾಗಿ ಸಮಾಜದಲ್ಲಿ ಬೇರುಬಿಟ್ಟಿದೆ. ಆದರೆ ಜೀವನದ ನಿಜವಾದ ಶ್ರೀಮಂತಿಕೆ ಬ್ಯಾಂಕ್ ಖಾತೆಯಲ್ಲಿ ಅಲ್ಲ; ನಮ್ಮೊಂದಿಗೆ ನಗುವ ಮುಖಗಳಲ್ಲಿ, ಮನೆಯವರೊಂದಿಗೆ ಕಳೆಯುವ ಕ್ಷಣಗಳಲ್ಲಿ, ಮನಸ್ಸಿಗೆ ಸಿಗುವ ನೆಮ್ಮದಿಯಲ್ಲಿ ಅಡಗಿದೆ.

ಹಣ ಬದುಕಿಗೆ ಅಗತ್ಯ. ಅದು ಶಿಕ್ಷಣ ಕೊಡುತ್ತದೆ, ಮನೆ ಕಟ್ಟುತ್ತದೆ, ಔಷಧಿ ಕೊಡುತ್ತದೆ, ಕನಸುಗಳಿಗೆ ರೆಕ್ಕೆಗಳನ್ನು ಕೊಡುತ್ತದೆ. ಆದರೆ ಹಣ ಖರೀದಿಸಲಾಗದ ಕೆಲವು ಅಮೂಲ್ಯ ಸಂಪತ್ತುಗಳಿವೆ. ಅವುಗಳಲ್ಲಿ ಮೊದಲನೆಯದು ಸಮಯ. ಒಮ್ಮೆ ಕಳೆದುಹೋದ ಕ್ಷಣವನ್ನು ಕೋಟ್ಯಂತರ ರೂಪಾಯಿ ಕೊಟ್ಟರೂ ಮರಳಿ ಪಡೆಯಲು ಸಾಧ್ಯವಿಲ್ಲ.

ಎಷ್ಟೋ ಮನೆಗಳಲ್ಲಿ ಮಕ್ಕಳು ತಂದೆ-ತಾಯಿಯ ಪ್ರೀತಿಗಿಂತ ಅವರ ಸಮಯಕ್ಕಾಗಿ ಕಾಯುತ್ತಾರೆ. ದುಬಾರಿ ಆಟಿಕೆಗಳನ್ನು ತಂದರೂ, ಹೊಸ ಮೊಬೈಲ್ ಕೊಟ್ಟರೂ, ಒಂದು ಗಂಟೆ ಜೊತೆಯಲ್ಲಿ ಕುಳಿತು ಮಾತನಾಡುವ ಸಂತೋಷವನ್ನು ಯಾವುದೂ ಬದಲಾಯಿಸಲಾರದು. ಮಕ್ಕಳ ನೆನಪಿನಲ್ಲಿ ಉಳಿಯುವುದು ಉಡುಗೊರೆಗಳ ಬೆಲೆ ಅಲ್ಲ; ಜೊತೆಯಾಗಿ ಕಳೆದ ಕ್ಷಣಗಳ ಮೌಲ್ಯ.

ವಯಸ್ಸಾದ ತಂದೆ-ತಾಯಿಯ ಕಣ್ಣುಗಳು ಇನ್ನೂ ಬಾಗಿಲಿನ ಕಡೆ ನೋಡುತ್ತಲೇ ಇರುತ್ತವೆ. "ಇಂದು ಮಗ ಮನೆಗೆ ಬೇಗ ಬರುತ್ತಾನಾ?" ಎಂಬ ನಿರೀಕ್ಷೆ ಅವರ ಮುಖದಲ್ಲಿ ಸ್ಪಷ್ಟವಾಗಿರುತ್ತದೆ. ಆದರೆ ಕೆಲಸದ ಒತ್ತಡ, ಸಭೆಗಳು, ಪ್ರಯಾಣಗಳು, ಗಡುವುಗಳು ಇವೆಲ್ಲದರ ನಡುವೆ ಆ ನಿರೀಕ್ಷೆ ಅನೇಕ ಬಾರಿ ನಿರಾಶೆಯಾಗುತ್ತದೆ. ಬ್ಯಾಂಕ್ ಖಾತೆ ತುಂಬಬಹುದು; ಆದರೆ ಅವರ ಹೃದಯದಲ್ಲಿರುವ ಖಾಲಿತನವನ್ನು ಯಾವ ಸಂಬಳವೂ ತುಂಬಲಾರದು.

ಸಮಯದ ಕೊರತೆ ನಿಧಾನವಾಗಿ ಸಂಬಂಧಗಳ ನಡುವಿನ ಅಂತರವನ್ನು ಹೆಚ್ಚಿಸುತ್ತದೆ. ಮೊದಲು ಪ್ರತಿದಿನ ನಡೆಯುತ್ತಿದ್ದ ಮಾತುಕತೆ ವಾರಕ್ಕೊಮ್ಮೆ ಆಗುತ್ತದೆ. ನಂತರ ತಿಂಗಳಿಗೊಮ್ಮೆ. ಕೊನೆಗೆ ಹಬ್ಬ-ಹರಿದಿನಗಳ ಶುಭಾಶಯಗಳಷ್ಟೇ ಉಳಿಯುತ್ತವೆ. ಸಂಬಂಧಗಳು ಸಾಯುವುದಿಲ್ಲ; ಆದರೆ ಸಮಯದ ಅಭಾವದಿಂದ ಮೌನವಾಗುತ್ತವೆ.

ಇಂದಿನ ಯುವಕರು ಹೆಚ್ಚಿನ ಸಂಬಳದ ಉದ್ಯೋಗಕ್ಕಾಗಿ ತಮ್ಮ ಆರೋಗ್ಯ, ನಿದ್ರೆ ಮತ್ತು ಸಂತೋಷವನ್ನೇ ತ್ಯಾಗ ಮಾಡುತ್ತಿರುವುದು ಕಾಣಿಸುತ್ತಿದೆ. ರಾತ್ರಿ ತಡರವರೆಗೆ ಕೆಲಸ, ಬೆಳಗಿನ ಜಾವ ಮತ್ತೆ ಹೊಸ ಓಟ. ದೇಹ ದಣಿಯುತ್ತದೆ, ಮನಸ್ಸು ಸುಸ್ತಾಗುತ್ತದೆ, ಆದರೆ ಜೀವನ ಮಾತ್ರ ಕಾಯುವುದಿಲ್ಲ. ಆರೋಗ್ಯ ಹದಗೆಟ್ಟಾಗ ಮಾತ್ರ ನಾವು ಅರಿಯುತ್ತೇವೆ ಹಣ ಸಂಪಾದಿಸಲು ಆರೋಗ್ಯ ಕಳೆದುಕೊಂಡೆವು; ನಂತರ ಆರೋಗ್ಯಕ್ಕಾಗಿ ಅದೇ ಹಣವನ್ನು ಖರ್ಚು ಮಾಡಬೇಕಾಯಿತು ಎಂದು. ನಿಜವಾದ ಯಶಸ್ಸು ಎಂದರೆ ಕೇವಲ ದೊಡ್ಡ ಹುದ್ದೆ ಅಥವಾ ದೊಡ್ಡ ಸಂಬಳವಲ್ಲ. ನಮ್ಮ ಮಕ್ಕಳ ನಗುವನ್ನು ನೋಡುವ ಅವಕಾಶ, ತಂದೆ-ತಾಯಿಯೊಂದಿಗೆ ಕುಳಿತು ಊಟ ಮಾಡುವ ಸಮಯ, ಸ್ನೇಹಿತರೊಂದಿಗೆ ಹೃದಯ ಬಿಚ್ಚಿ ಮಾತನಾಡುವ ಕ್ಷಣ, ನಮ್ಮ ಮನಸ್ಸನ್ನು ನಾವು ಕೇಳಿಕೊಳ್ಳುವ ಅವಕಾಶ ಇವುಗಳೇ ಬದುಕಿನ ನಿಜವಾದ ಸಂಪತ್ತು.

ಕೆಲವರು ಲಕ್ಷಾಂತರ ಸಂಬಳ ಗಳಿಸುತ್ತಾರೆ. ಆದರೆ ಒಂದು ದಿನದ ರಜೆಯನ್ನೂ ನೆಮ್ಮದಿಯಿಂದ ಅನುಭವಿಸಲು ಸಾಧ್ಯವಾಗುವುದಿಲ್ಲ. ಇನ್ನೂ ಕೆಲವರು ಸಾಧಾರಣ ಆದಾಯ ಹೊಂದಿದ್ದರೂ ಸಂಜೆ ಮನೆಗೆ ಬಂದು ಕುಟುಂಬದೊಂದಿಗೆ ನಗುತ್ತಾರೆ, ಮಕ್ಕಳೊಂದಿಗೆ ಆಟವಾಡುತ್ತಾರೆ, ನೆರೆಹೊರೆಯವರೊಂದಿಗೆ ಮಾತಾಡುತ್ತಾರೆ, ಮನಸ್ಸು ತುಂಬಿ ಮಲಗುತ್ತಾರೆ. ಇವರಲ್ಲಿ ನಿಜವಾದ ಶ್ರೀಮಂತ ಯಾರು ಎಂಬ ಪ್ರಶ್ನೆಗೆ ಉತ್ತರ ಹಣದಲ್ಲಿಲ್ಲ; ಜೀವನವನ್ನು ಬದುಕುವ ರೀತಿಯಲ್ಲಿ ಇದೆ.

ಕಾಲ ಯಾರಿಗಾಗಿ ನಿಲ್ಲುವುದಿಲ್ಲ. ಮಕ್ಕಳ ಬಾಲ್ಯ, ತಂದೆ-ತಾಯಿಯ ವೃದ್ಧಾಪ್ಯ, ನಮ್ಮ ಯೌವನ ಇವೆಲ್ಲವೂ ನಿಧಾನವಾಗಿ ಜಾರಿಹೋಗುತ್ತವೆ. "ನಂತರ ಸಮಯ ಕೊಡುತ್ತೇನೆ" ಎನ್ನುವ ಮಾತು ಅನೇಕ ಬಾರಿ ತಡವಾಗಿರುತ್ತದೆ. ಜೀವನ ಯಾವಾಗಲೂ "ಇಂದು" ಎಂಬ ದಿನದಲ್ಲೇ ನಡೆಯುತ್ತದೆ; "ಒಂದು ದಿನ" ಎಂಬ ದಿನಾಂಕ ಕ್ಯಾಲೆಂಡರಿನಲ್ಲಿ ಇರುವುದಿಲ್ಲ.

ನಾವು ಕೆಲಸ ಮಾಡಬೇಕು. ಕನಸುಗಳನ್ನು ನನಸಾಗಿಸಬೇಕು. ಕುಟುಂಬಕ್ಕೆ ಉತ್ತಮ ಬದುಕನ್ನು ಕಟ್ಟಿಕೊಡಬೇಕು. ಆದರೆ ಅದಕ್ಕಾಗಿ ಬದುಕನ್ನೇ ಕಳೆದುಕೊಳ್ಳಬಾರದು. ಕೆಲಸ ಜೀವನದ ಒಂದು ಭಾಗವಾಗಬೇಕು; ಜೀವನವೇ ಕೆಲಸವಾಗಬಾರದು.

ಸಮಯ ಎನ್ನುವುದು ಗಡಿಯಾರದ ಮುಳ್ಳುಗಳ ಚಲನೆಯಲ್ಲ. ಅದು ನಮ್ಮ ಪ್ರೀತಿಯನ್ನು ವ್ಯಕ್ತಪಡಿಸುವ ಅವಕಾಶ. ಕ್ಷಮೆ ಕೇಳುವ ಅವಕಾಶ. ಧನ್ಯವಾದ ಹೇಳುವ ಅವಕಾಶ. ಯಾರಾದರೂ ದುಃಖದಲ್ಲಿದ್ದಾಗ ಅವರ ಕೈ ಹಿಡಿಯುವ ಅವಕಾಶ. ಇವು ಕಳೆದುಹೋದರೆ ಮತ್ತೆ ಸಿಗುವುದಿಲ್ಲ.

ಒಬ್ಬ ಮನುಷ್ಯನ ಯಶಸ್ಸನ್ನು ಅವನ ಸಂಬಳದಿಂದ ಅಳೆಯುವುದಕ್ಕಿಂತ, ಅವನ ಮುಖದಲ್ಲಿರುವ ನೆಮ್ಮದಿ, ಕುಟುಂಬದಲ್ಲಿರುವ ನಗು, ಸಮಾಜದಲ್ಲಿರುವ ಗೌರವ ಮತ್ತು ಹೃದಯದಲ್ಲಿರುವ ಸಂತೃಪ್ತಿಯಿಂದ ಅಳೆಯಬೇಕು. ಯಾಕೆಂದರೆ ಜೀವನದ ಕೊನೆಯ ಕ್ಷಣದಲ್ಲಿ ಯಾರೂ ತಮ್ಮ ಬ್ಯಾಂಕ್ ಬ್ಯಾಲೆನ್ಸ್ ನೆನಪಿಸಿಕೊಳ್ಳುವುದಿಲ್ಲ; ಆದರೆ ಪ್ರೀತಿಯಿಂದ ಕಳೆದ ಕ್ಷಣಗಳು ಮಾತ್ರ ಕಣ್ಣ ಮುಂದೆ ಬರುತ್ತವೆ.

ಪ್ರತಿಯೊಬ್ಬರೂ ತಮ್ಮನ್ನು ತಾವು ಒಂದು ಪ್ರಶ್ನೆ ಕೇಳಿಕೊಳ್ಳಬೇಕು. "ನಾನು ಹಣಕ್ಕಾಗಿ ಬದುಕುತ್ತಿದ್ದೇನಾ, ಅಥವಾ ಬದುಕಿಗಾಗಿ ಹಣ ಸಂಪಾದಿಸುತ್ತಿದ್ದೇನಾ?" ಈ ಪ್ರಶ್ನೆಯ ಉತ್ತರವೇ ನಮ್ಮ ಜೀವನದ ದಿಕ್ಕನ್ನು ನಿರ್ಧರಿಸುತ್ತದೆ.

ನಮ್ಮ ಮಕ್ಕಳಿಗೆ ನಾವು ನೀಡಬಹುದಾದ ಅತ್ಯಮೂಲ್ಯ ಉಡುಗೊರೆ ನಮ್ಮ ಸಮಯ. ನಮ್ಮ ತಂದೆ-ತಾಯಿಗೆ ನೀಡಬಹುದಾದ ಅತ್ಯಂತ ದೊಡ್ಡ ಗೌರವ ನಮ್ಮ ಉಪಸ್ಥಿತಿ. ನಮ್ಮ ಸಂಗಾತಿಗೆ ನೀಡಬಹುದಾದ ಅತ್ಯುತ್ತಮ ಪ್ರೀತಿ ನಮ್ಮ ಗಮನ. ನಮಗೇ ನಾವು ನೀಡಬಹುದಾದ ದೊಡ್ಡ ಬಹುಮಾನ ಮನಸ್ಸಿಗೆ ವಿಶ್ರಾಂತಿ.

ಜೀವನದ ಕೊನೆಯಲ್ಲಿ ನಾವು ತೆಗೆದುಕೊಂಡು ಹೋಗುವುದು ಸಂಬಳದ ಚೀಟಿಗಳಲ್ಲ, ಅನುಭವಗಳ ನೆನಪುಗಳು. ಹಣದಿಂದ ಕಟ್ಟಿದ ಅರಮನೆಗಳಲ್ಲ, ಪ್ರೀತಿಯಿಂದ ಕಟ್ಟಿದ ಸಂಬಂಧಗಳು. ಹುದ್ದೆಗಳ ಪಟ್ಟಿಗಳಲ್ಲ, ಹೃದಯಗಳಲ್ಲಿ ಮೂಡಿಸಿದ ನಗುಗಳು.

ಆದ್ದರಿಂದ ಸಂಬಳವನ್ನು ಗಳಿಸಿ, ಆದರೆ ಸಮಯವನ್ನು ಕಳೆದುಕೊಳ್ಳಬೇಡಿ. ಕನಸುಗಳನ್ನು ಬೆನ್ನಟ್ಟಿರಿ, ಆದರೆ ನಿಮ್ಮವರ ಕೈ ಬಿಡಬೇಡಿ. ಯಶಸ್ಸಿನ ಶಿಖರವನ್ನು ಏರಿರಿ, ಆದರೆ ನಿಮ್ಮ ಮನಸ್ಸಿನ ನೆಲವನ್ನು ಮರೆಯಬೇಡಿ. ಏಕೆಂದರೆ ಹಣ ಜೀವನವನ್ನು ಸುಲಭಗೊಳಿಸಬಹುದು; ಆದರೆ ಸಮಯವೇ ಜೀವನವನ್ನು ಸುಂದರಗೊಳಿಸುತ್ತದೆ.

ಸಂಬಳ ಎಷ್ಟಿದ್ದರೇನು ಫಲ; ಸಮಯವಿಲ್ಲದ ಜೀವಕ್ಕೆ. ಹಣ ಮತ್ತೆ ಸಂಪಾದಿಸಬಹುದು. ಆದರೆ ಕಳೆದುಹೋದ ಒಂದು ಕ್ಷಣ, ಮಾತಾಡದೆ ಉಳಿದ ಒಂದು ಮಾತು, ಅಪ್ಪಿಕೊಳ್ಳದೆ ಕಳೆದ ಒಂದು ದಿನ, ಪ್ರೀತಿಯನ್ನು ಹೇಳದೆ ಹೋದ ಒಂದು ಜೀವನ ಇವು ಯಾವ ಸಂಪತ್ತಿನಿಂದಲೂ ಮರಳಿ ದೊರೆಯುವುದಿಲ್ಲ. ಆದ್ದರಿಂದ ಹಣದ ಹಿಂದೆ ಓಡುವಾಗ, ಬದುಕನ್ನು ಹಿಂದೆ ಬಿಟ್ಟುಬಿಡಬೇಡಿ. ಬದುಕಿ, ಪ್ರೀತಿಸಿ, ಸಮಯ ನೀಡಿ. ಏಕೆಂದರೆ ಕೊನೆಗೆ ಮನುಷ್ಯನನ್ನು ಶ್ರೀಮಂತನನ್ನಾಗಿಸುವುದು ಅವನ ಸಂಬಳವಲ್ಲ; ಅವನು ಹಂಚಿಕೊಂಡ ಸಮಯ ಮತ್ತು ಗಳಿಸಿದ ಪ್ರೀತಿಯೇ.

# ನಿಲುವಂಗಿಯಾಚೆಗಿನ ನ್ಯಾಯಯೋಗಿ...



| ಡಾ.ಸುಧಾಕರ.ಜಿ.ಲಕ್ಕವಳ್ಳಿ



ಸ್ಫೂರ್ತಿ ಸುಧೆ - 68

ನ್ಯಾಯದೇವತೆಯ ತಕ್ಕಡಿಗೆ ತೇಜಸ್ಸು ತುಂಬಿದವರು, ಕಾನೂನಿನ ಒಣ ಪುಟಗಳ ನಡುವೆ ಕರುಣೆಯ ಕಿರಣ ಹುಡುಕಿದ ದಾರ್ಶನಿಕ. ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ನ್ಯಾ.ಕೆ. ಟಿ.ಥಾಮಸ್ ಅವರಿಗೆ 2026ರ ಪದ್ಮವಿಭೂಷಣ ಸಂದಿದೆ.ಇದು ಗೌರವಷ್ಟೇ ಅಲ್ಲ,ನ್ಯಾಯಾಂಗದ ಆತ್ಮಕ್ಕೆ ಸಂದ ರಾಷ್ಟ್ರೀಯ ನಮನ.

ಕ್ರಿಮಿನಲ್ ಕಾನೂನಿನ ದಿಗ್ಗಜರಾಗಿದ್ದ ಥಾಮಸ್,ನೂರಾರು ತೀರ್ಪುಗಳಿಂದ ಜಟಿಲ ಕಾನೂನುಗಳಿಗೆ ಸ್ಫಟಿಕದ ಸ್ಪಷ್ಟತೆ ನೀಡಿದರು.ಇವರ ದೃಷ್ಟಿಯಲ್ಲಿ ನ್ಯಾಯದಾನವೆಂದರೆ ಕೇವಲ ಶಿಕ್ಷೆ ವಿಧಿಸುವುದಲ್ಲ.ಅದು ಬಿದ್ದ ಮನುಷ್ಯರನ್ನು ಮತ್ತೆ ಎಬ್ಬಿಸುವ ಸುಧಾರಣಾ ಯಜ್ಞ. ಕಾನೂನು ದೇವಾಲಯದ ಕಲ್ಲಾಗದೆ, ಜನಸಾಮಾನ್ಯರ ಗುಡಿಸಲಿನ ದೀಪವಾಗಬೇಕು ಎಂಬುದು ಇವರ ಜೀವನದ ಧ್ಯೇಯವಾಗಿತ್ತು.

ಕಪ್ಪು ನಿಲುವಂಗಿ ಕಳಚಿದ ಬಳಿಕವೂ ಇವರ ಹೋರಾಟ ನಿಲ್ಲಲಿಲ್ಲ. ಪೊಲೀಸ್ ವ್ಯವಸ್ಥೆಯ ಸುಧಾರಣೆಗೆ ದನಿಯೆತ್ತಿ ಖಾಕಿಗೆ ಮಾನವೀಯತೆಯ ಮುಲಾಮು ಹಚ್ಚುವಂತೆ ಆಗ್ರಹಿಸಿದರು. ಡೊನೇಷನ್ ಎಂಬ ರಕ್ತಬೀಜಾಸುರನ ವಿರುದ್ಧ ಅಕ್ಷರದ ಅಸ್ತ್ರ ಪ್ರಯೋಗಿಸಿ ಲಕ್ಷಾಂತರ ಬಡ ಪ್ರತಿಭೆಗಳಿಗೆ ಆಶಾದೀಪವಾದರು. ಕೇರಳ ಕಾನೂನು ಸುಧಾರಣಾ ಆಯೋಗದ ನೇತೃತ್ವ ವಹಿಸಿ,ಕಾಲದ ಧೂಳು ತಿಂದಿದ್ದ ಶಾಸನಗಳಿಗೆ ಹೊಸ ಮೆರುಗು ನೀಡಿದರು. ನಿವೃತ್ತಿ ಇವರಿಗೆ ವಿಶ್ರಾಂತಿಯಾಗಲಿಲ್ಲ.ಅದು ಸಾಂವಿಧಾನಿಕ ಮೌಲ್ಯಗಳಿಗಾಗಿ ನಡೆದ ಎರಡನೇ ಸ್ವಾತಂತ್ರ್ಯ ಸಂಗ್ರಾಮವಾಯಿತು.ಈ ಪದ್ಮವಿಭೂಷಣ ನ್ಯಾಯಾಧೀಶರ ಕುರ್ಚಿಗೆ ಅಲ್ಲ,ಆ ಕುರ್ಚಿಯ ಘನತೆಯನ್ನು ಹೆಚ್ಚಿಸಿದ ನೈತಿಕ ದಿಗ್ಗಜನಿಗೆ ಸಂದಿದೆ.ಥಾಮಸ್ ಅವರ ಸಂದೇಶ ಸ್ಪಷ್ಟ: ತೀರ್ಪು ಬರೆದು ಕೈತೊಳೆದುಕೊಳ್ಳುವುದು ನ್ಯಾಯವಲ್ಲ. ಅಧಿಕಾರದ ಎದುರು ಅಕ್ಷರದ ದೀಪ ಹಿಡಿಯುವ ಧೈರ್ಯವೇ ನಿಜವಾದ ನ್ಯಾಯ.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,